ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 3

ಜೂನ್ 17, 2007

ಬೆಲೆ ರೂ. 5.00



ಡೊನೇಶನ್

ಶಿಕ್ಷಣ ಮಾಫಿಯಾದ ಹಗಲು ದರೋಡೆ

ಪೇಜ್ 13



ಹಂಪಿ: ಸೌಹಾರ್ದ ಪರಂಪರೆಗೆ ಮಸಿ ಬಳಿಯುವ ಚಡ್ಡಿಪಡೆ

ಬಾಡಿಗೆ ಹೊರೆ

ಕರಗಿದ ದುಡಿಮೆ


ಸೊರಗಿದ ಬದುಕು

ಉಳ್ಳಾಲ: ಕೋಮುವಾದಿಗಳಿಗೆ ಕಪಾಳಮೋಕ್ಷ

ಪೇಜ್ 6 ಮಾವು ಮಾರುಕಟ್ಟೆ



ಬೆಳೆದದ್ದು ಮಾವು ಸಿಕ್ಕಿದ್ದು ಬೇವು



'ಆವರಣ' ಯುದ್ಧಕಾಲದ ಚರಿತ್ರೆ ಅಲ್ಲ, ವರ್ತಮಾನದಲ್ಲಿ ದ್ವೇಷ ಹುಟ್ಟಿಸುವಂತಹದ್ದು...

ಡಾ. ಅನಂತಮೂರ್ತಿ ವಿಶೇಷ ಸಂದರ್ಶನ

ಇದ್ದದ್ದು ಇದ್ದಾಂಗ

ರಕ್ಷಣೆ ವೇದಿಕೆಯವರಿಗೆ ಕನ್ನಡ ಗೊತ್ತಾ?

"ಕರ್ನಾಟಕ ರಕ್ಷಣಾ ವೇದಿಕೆಯು ಸ್ವಾರ್ಥಗಳ ವೇದಿಕೆಯಾಗಿ ಮಾರ್ಪಟ್ಟಿದೆ. ಕನ್ನಡ ಭಾಷೆಯ ರಕ್ಷಣೆಗೆ ಯಾವ ವೇದಿಕೆಯೂ ಅಗತ್ಯವಿಲ್ಲ. ಕನ್ನಡಕ್ಕೇಕೆ ರಕ್ಷಣೆ, ಕನ್ನಡದ ರಕ್ಷಣೆ ಮಾಡುತ್ತೇವೆಂದು ತಮ್ಮ ಸ್ವಾರ್ಥ ಸಾಧನೆಗಾಗಿ ರಾಜಕೀಯ ಮಾಡಲು ರಕ್ಷಣಾ ವೇದಿಕೆಗಳು ಬಳಕೆ ಯಾಗುತ್ತಿವೆ....ರಕ್ಷಣಾ ವೇದಿಕೆಯವರಿಗೆ ಕನ್ನಡ ಗೊತ್ತಾ? ಅನಂತಮೂರ್ತಿ ಯಾವ ಕಾದಂಬರಿ ಬರೆದಿದ್ದಾರೆ ಎಂದುಗೊತ್ತಾ, ಮಾಸ್ತಿ, ಕುವೆಂಪು, ದ.ರಾ.ಬೇಂದ್ರೆ ಅವರ ಬಗ್ಗೆ ತಿಳಿದಿದೆಯಾ? ಕನ್ನಡದ ತಿಳುವಳಿಕೆಯ ಗಂಧ ಗಾಳಿಯಿಲ್ಲದ ಇಂಥವರಿಂದ ಕನ್ನಡದ ರಕ್ಷಣೆ ಸಾಧ್ಯವಿಲ್ಲ"

ಎಂ.ಎಸ್.ಸತ್ಯು

ಜಾತಿ ಸಮಸ್ಯೆ, ಹಿಂಸಾಚಾರಕ್ಕೆ ಸಂವಿಧಾನವೇ ಕಾರಣ

"ಡಾ: ಬಾಬಾಸಾಹೇಬ್ ಅಂಬೇಡ್ಕರ್ ಅವರೇ ಖುದ್ದಾಗಿ ಭಾರತೀಯ ಸಂವಿಧಾನದ ಬಗ್ಗೆ ಅಸಮಾಧಾನ ಹೊಂದಿದ್ದರು. ಪ್ರಸಕ್ತ ಸಂವಿಧಾನವನ್ನು ಈಗಿನ ಕಾಲಕ್ಕೆ ತಕ್ಕಂತೆ ಪುನಾರಚಿಸುವ ಅಗತ್ಯವಿದೆ. 'ಬೇರೆಯವರ ಅಣತಿಯಂತೆ ನಾನು ಸಂವಿಧಾನವನ್ನು ರಚಿಸಿದೆ. ನನಗೆ ನಿರ್ಧಾರವನ್ನು ಬಿಟ್ಟು ಕೊಟ್ಟಿದ್ದರೆ ಯಾರಿಗೂ ಉಪಯೋಗವಾಗದ ಇಂಥ ಸಂವಿಧಾನವನ್ನು ಸುಡುತ್ತಿದ್ದೆ. ಎಂದು ಅಂಬೇಡ್ಕರ್ ಅಂದು ಹೇಳಿದ್ದರು. ಅವರು ಸಂಸ್ಕೃತವನ್ನು ರಾಷ್ಟ್ರೀಯ ಭಾಷೆಯನ್ನಾಗಿ ಮಾಡಲು ಯೋಚಿಸಿದ್ದರು. ಆದರೆ ಹಾಗೆ ಮಾಡಲು ಬಿಡಲಿಲ್ಲ.

ಭಾರತ ಇಂದು ಎದುರಿಸುತ್ತಿರುವ ಜಾತಿ ಸಮಸ್ಯೆ, ಹಿಂಸಾಚಾರಕ್ಕೆ ಸಂವಿಧಾನವೇ ಮೂಲ ಕಾರಣ"

ಕೆ.ಎಸ್.ಸುದರ್ಶನ್,
ಸರ ಸಂಘ ಚಾಲಕರು, ಆರೆಸ್ಸೆಸ್

ಹೊಟ್ಟೆಯೊಳಗಿನ ವಿಷ ಹೊರಕ್ಕೆ

★

ಗೃಹ ಸಚಿವರ ರಾಜಿನಾಮೆ

"ವಿವಾದಾತ್ಮಕ 'ಅನುದೇವಾ ಹೊರಗಣವನು' ಕೃತಿಯನ್ನು ಬೆಂಬಲಿಸಿ ಪ್ರಚೋದನಾತ್ಮಕ ಹೇಳಿಕೆ ನೀಡಿರುವ ಗೃಹ ಸಚಿವ ಎಂ.ಪಿ. ಪ್ರಕಾಶ್ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಎಂ.ಪಿ. ಪ್ರಕಾಶ್ ಕ್ಷಮೆ ಕೋರದಿದ್ದಲ್ಲಿ ಮುಖ್ಯಮಂತ್ರಿಗಳು ಅವರನ್ನು ಕೂಡಲೇ ಸಂಪುಟದಿಂದ ವಜಾಗೊಳಿಸಬೇಕು"

ಭೀಮಣ್ಣಖಂಡ್ರೆ,
ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ

★

"ರಾಜ್ಯ ಪರಿಸರ ಪ್ರಶಸ್ತಿ ಜತೆ ನೀಡಿರುವ 1 ಲಕ್ಷಕ್ಕೂ ಹಣವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಸ್ವಗ್ರಾಮ ಹುಲಿಕಲ್ ಆಸ್ಪತ್ರೆಯ ಕಟ್ಟಡ ಕಾಮಗಾರಿಗೆ ಬಳಸುತ್ತೇನೆ"

ಸಾಲುಮರದ ತಿಮ್ಮಕ್ಕ

★

ಸೆನ್ಸಾರ್ ತಲೆನೋವು

"ಪರ ರಾಜ್ಯದವರನ್ನು ನಿಂದಿಸುವ ಮತ್ತು ಪರಭಾಷೆಯನ್ನು ಅವಹೇಳನ ಮಾಡುವಂತಹ ಹಾಡು ಮತ್ತು ಸಂಭಾಷಣೆ ಚಲನಚಿತ್ರಗಳಲ್ಲಿ ಹೆಚ್ಚಾಗುತ್ತಿದ್ದು ಸೆನ್ಸಾರ್ ಮಂಡಳಿಗೆ ತಲೆ ನೋವಾಗಿ ಪರಿಣಮಿಸಿದೆ"

- ಸೆನ್ಸಾರ್ ಮಂಡಳಿ ಅಭಿಪ್ರಾಯ

★

"ಟಿ.ವಿ. ಪತ್ರಿಕೆ ಎಲ್ಲವೂ ಸೇರಿದಂತೆ ಮಾಧ್ಯಮಗಳು ಜನರಿಗೆ ಏನು ಕೊಡಬಾರದೋ ಅದನ್ನೇ ಹೆಚ್ಚು ಕೊಡುತ್ತಿವೆ. ಸ್ಪರ್ಧೆ ನಮ್ಮನ್ನು ಸಾಂಸ್ಕೃತಿಕ ಇಳಿಜಾರಿನತ್ತ ಒಯ್ಯುತ್ತಿದೆ"

ಆರ್.ಪಿ. ಜಗದೀಶ್, ಪ್ರಜಾವಾಣಿ ಸಹ ಸಂಪಾದಕರು.

★

ಉದ್ಧಟ ಮಾತು

"ನಾರಾಯಣಮೂರ್ತಿ ವಿರುದ್ಧ ಟೀಕೆ ಮಾಡಲು ಈ ಅನಂತಮೂರ್ತಿ ಯಾರು? ಅವರು ರಾಜ್ಯಕ್ಕಾಗಿ ಏನು ಮಾಡಿದ್ದಾರೆ. ಅದೇನೋ ಸಾಹಿತ್ಯದ ಬಗ್ಗೆ ಉದ್ದುದ್ದ ಮಾತನಾಡೋದನ್ನು ಬಿಟ್ಟರೆ ಅವರ ಸಾಧನೆ ಏನು"

ಡಾ: ಕಿರಣ್ ಮಜುಂದಾರ್‌ಷಾ,
'ಬಯೋಕಾನ್' ಅಧ್ಯಕ್ಷೆ, ಜೈವಿಕ ತಂತ್ರಜ್ಞಾನ ಸಂಸ್ಥೆ

ಐಟ-ಬಿಟ ಬೆಳಕಿನಲ್ಲೂ ಕಾಣದಷ್ಟು ಅಜ್ಞಾನವೇ?

★

'ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಿಲ್ಲಿಸದೇ ಇದ್ದರೆ ಅಕ್ಟೋಬರ್‌ವರೆಗೆ ಕೂಡ ಕಾಯದೇ ನಾನು ರಾಜೀನಾಮೆ ನೀಡಲಿದ್ದೇನೆ' ಸಣ್ಣಪುಟ್ಟ ಸಾಲಕ್ಕಾಗಿ ಅವಲಂಬಿತ ಕುಟುಂಬವನ್ನೇ ತ್ಯಜಿಸಿ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ರೈತರು ಮುಂದುವರೆಸಿದರೆ ನಾನು ನನ್ನ ಅವಧಿ ಮುಗಿಯಲಿ ಎಂದು ಕುರ್ಚಿಗೆ ಅಂಟಿಕೊಂಡು ಕೂಡುವುದಿಲ್ಲ"

ಹೆಚ್.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿ

ಹೇಳಿದ ಮೇಲೂ 8 ಜನ ಆತ್ಮಹತ್ಯೆ ಮಾಡಿಕೊಂಡ್ರಲ್ಲ

★

ದ ಡಿಕ್ಟೇಟರ್

"ಇತಿಹಾಸ ಅಧ್ಯಯನ ಎಲ್ಲ ಐಡಿಯಾಲಜಿಗಳಿಂದ ಮುಕ್ತವಾಗಿರಬೇಕು. 'ಕಮ್ಯುನಿಸ್ಟರು, ಭಾರತದ ಕಮ್ಯುನಿಸ್ಟರು ಭಾರತದ ಇತಿಹಾಸ ಹೀಗೆ ಎಂದು ಡಿಕ್ಟೇಟ್ ಮಾಡುತ್ತಾರೆ"

ಎಸ್.ಎಲ್.ಭೈರಪ್ಪ, ಸಾಹಿತಿ

ಅರೆ ಅದಕ್ಕಾಗಿಯೇ ನಾನಿರುವಾಗ

ಸಂದೇಶ

ಜಾಗತೀಕರಣ, ಕೋಮುವಾದದ ಧಾಳಿಗಳಿಂದ ಜನತೆಯ ಮೇಲೆ ಇದರಿಂದಾಗುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಅವರನ್ನು ಎಚ್ಚರಿಸಲು ಒಂದು ಪತ್ರಿಕೆಯ ಅಗತ್ಯವಿತ್ತು. 'ಜನಶಕ್ತಿ' ವಾರಪತ್ರಿಕೆ ಈ ಕೆಲಸವನ್ನು ಸಮರ್ಥವಾಗಿ ಮಾಡುವುದೆಂಬ ವಿಶ್ವಾಸ ನನಗಿದೆ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ನಡೆಯುವ ಘಟನೆಗಳನ್ನು ಯಥಾವತ್ತಾಗಿ ಪ್ರತಿಬಿಂಬಿಸುವುದಲ್ಲದೇ, ಅವುಗಳ ಹಿನ್ನೆಲೆಯನ್ನು ಹೊರಹಾಕಿ ಜನರಿಗೆ ಮಾರ್ಗದರ್ಶನ ಮಾಡುವುದಲ್ಲದೇ, ಜನರ ಆಶಯಗಳಿಗೆ ಧ್ವನಿಗೂಡಿಸುವ ಮಾಧ್ಯಮ ಇದಾಗಲೆಂದು ನನ್ನ ಹಾರೈಕೆ.

ತಮ್ಮ ವಾರಪತ್ರಿಕೆ ಕನ್ನಡದಲ್ಲಿ ಒಂದು ವಿಶಿಷ್ಟ ಪತ್ರಿಕೆಯಾಗಿ ಹೊರಬರಲೆಂದು ಹಾರೈಸುತ್ತೇನೆ.

ಪ್ರೊ: ಬಿ.ಕೆ.ಚಂದ್ರಶೇಖರ್
ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್ತು

ಪ್ರಜಾಸತ್ತಾತ್ಮಕ ವೇದಿಕೆಯಾಗಲಿ

ಪತ್ರಿಕೆ ಚೆನ್ನಾಗಿ ಬರುತ್ತಿದೆ, ಕೋಮುವಾದ, ಭಯೋತ್ಪಾದನೆ ವಿರುದ್ಧ ವೈಚಾರಿಕ ಸಂಘರ್ಷ ಸಾರುವ ರೀತಿಯಲ್ಲಿ ಹೊರಬರಲಿ. ಕನ್ನಡ ನಾಡಿನ ಜನತೆಯಲ್ಲಿ ಜಾತ್ಯಾತೀತತೆ, ಪ್ರಜಾಸತ್ತಾತ್ಮಕ ರಾಜಕೀಯ ಧ್ರುವೀಕರಣಕ್ಕೆ ಒಂದು ವೇದಿಕೆಯಾಗುವ ಶಕ್ತಿ ಜನಶಕ್ತಿಗೆ ಸಾಧ್ಯವಾಗಲಿ.

ಲಕ್ಷ್ಮಿನಾರಾಯಣನಾಗವಾರ,
ರಾಜ್ಯ ಸಂಚಾಲಕರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಬೆಂಗಳೂರು

ಉನ್ನತ ಶಿಕ್ಷಣ

ಉನ್ನತದ ಶಿಕ್ಷಣವು ಉಳ್ಳವಗೆ ಮಾತ್ರ
ಇದು ನೋಡಿ ಈ ನಮ್ಮ ಆಡಳಿತ ಸೂತ್ರ
ಈ ಸೂತ್ರಕ್ಕನುಸರಿಸಿ ಶೈಕ್ಷಣಿಕ ಕ್ಷೇತ್ರ
ನೀಡಿದರು ವ್ಯಾಪಾರಿ ಮಂದಿಗಳ ಹತ್ರ

- ವಿಡಂಬಾರಿ

ಜನದನಿ

ಪತ್ರಿಕಾ ತುಂಬಾ ಚೆನ್ನಾಗಿ ಬಂದಿದೆ
ನೀರು ಬೇಕು ನೀರು ತುಂಬಾ ಹಿಡಿಸಿತು,
ಜೊತೆಗೆ ಪರಿಹಾರ ಪರ್ಯಾಯವೂ ಇದ್ದರೆ
ಒಳ್ಳೆಯದಿತ್ತು...

ಸುಬ್ರಮಣ್ಯ, ಮೈಸೂರು

★

ಪತ್ರಿಕೆ ನೋಡಿ ಖುಷಿಯಾಯ್ತು
ನಾನು ಬರೆಯಬೇಕೆಂಬ ಆಶೆಯಾಯ್ತು

ಸುರೇಶ್ ಕುಷ್ಟಗಿ, ಕೊಪ್ಪಳ

★

ಪತ್ರಿಕೆಯ ಪ್ರತಿ ಲೇಖನ, ಕಾಲಂಗಳೂ, ವಿಭಿನ್ನ, ವಿಶಿಷ್ಟ, ಆದೂ ಇಷ್ಟು ಕಡಿಮೆ ಬೆಲೆಗೆ....

ಶಿಕ್ಷಕರು, ಹರಪನಹಳ್ಳಿ

★

ಜನಶಕ್ತಿ ಬಿಡುಗಡೆಯ ಸಮಾರಂಭದ ವಿಚಾರ ತಿಳಿದಾಗ ನಾನೂ ಹೋಗ ಬಾರದಿತ್ತೇ ಎಂದೆನಿಸಿತು.

ಸೈಯ್ಯದ್ ಪಾಷಾ, ಕೋಲಾರ

★

ಕವನ ಒಂದಿರಲಿ,
ಮಹಿಳೆಯರ ಬಗ್ಗೆ ಸಹ

ವಿನಯ್, ಬೆಂಗಳೂರು

ರೇಷನ್‌ಕಾರ್ಡ್, ರೇಷನ್ ಸಮಸ್ಯೆಯ ಲೇಖನ ಪರಿಸ್ಥಿತಿಯನ್ನು ಬಿಂಬಿಸಿಟ್ಟಿದೆ. ನಮ್ಮೂರಲ್ಲಿ ಸ್ಥಿತಿಯೂ ಹಂಗೆ...

ಭಾಗ್ಯಲಕ್ಷ್ಮಿ, ಹೊಸಪೇಟೆ

★

ಬಸ್‌ಪಾಸ್ ಕೇಳಿದರೆ ಪೋಲೀಸರು ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜು ಮಾಡಿದ್ದು ಖಂಡನೀಯ. ಕಾನೂನು ರಕ್ಷಕರೇ ಇಲ್ಲಿ ರಕ್ಕಸರೋ?

ಚನ್ನಬಸವ, ಗುಲ್ಬರ್ಗ

ಪ್ರತಿಧ್ವನಿ

ನಿಮ್ಮ ಸಮಸ್ಯೆಗೆ ನಮ್ಮ ದನಿ


ನಿಮ್ಮ ಪ್ರದೇಶದಲ್ಲಿ ಯಾವುದೇ ಸಮಸ್ಯೆ ಇದೆಯೇ?
ಹಾಗಿದ್ದರೆ ನಮ್ಮಲ್ಲಿ ಅದಕ್ಕೆ ವೇದಿಕೆ ಇದೆ.
ನಿಮ್ಮ ಸಮಸ್ಯೆ ಬಗ್ಗೆ ಚುಟುಕಾಗಿ ಕೆಲವೇ ವಾಕ್ಯಗಳಲ್ಲಿ ನಮಗೆ ಬರೆದು ಕಳಿಸಿ.

ಪತ್ರಿಕೆ ಬಗ್ಗೆ ನಿಮ್ಮ ಅನಿಸಿಕೆ

ನಿಮ್ಮ ಯಾವುದೇ ಅನಿಸಿಕೆಗೆ ಸ್ವಾಗತವಿದೆ. ಪತ್ರಿಕೆಯನ್ನು ಇನ್ನಷ್ಟು ಶಕ್ತಿಯುತಗೊಳಿಸಲು, ನೊಂದ ಜನರ ದನಿಯಾಗಿ ಮೂಡಿಬರಲು ನಿಮ್ಮ ಅನಿಸಿಕೆ ಸಲಹೆ ಅತಿ ಅಗತ್ಯ. ನಿಮ್ಮ ಎಲ್ಲ ಅಭಿಪ್ರಾಯಗಳನ್ನು ಪತ್ರಿಕೆಯ ವಿಳಾಸಕ್ಕೆ ಕಳಿಸಿ ಅಥವಾ ಕೆಳಗಿನ ಮೊಬೈಲ್ ನಂ.ಗೆ ಎಸ್.ಎಂ.ಎಸ್.ಮಾಡಿ.

9448230114
9448505789

ದಿನಚರಿಯಿಂದ



ವಿನಮ್ರತೆಗೆ ಬೆಲೆಯುಂಟೆ ಈ ಕಾಲದಲ್ಲಿ? ದಿನಪತ್ರಿಕೆಯ ಮುಖಪುಟಗಳನ್ನು (ಸಾಧ್ಯವಿದ್ದರೆ ರೇಡಿಯೋ ಟೆಲಿವಿಷನ್‌ಗಳನ್ನು ಕೂಡ) ಆಕ್ರಮಿಸಿಕೊಂಡವರಿಗೆ ಗೆಲುವು. ಅಂಥದಕ್ಕೆ ಸೇನೆ ಕಟ್ಟಬೇಕು. ಕಲ್ಲು ಇಟ್ಟಿಗೆ ಬಾಟಲಿಗಳ ಮಾತನ್ನಾಡಬೇಕು. ಮನೆ ಸುಡಬೇಕು. ತಲೆ ಒಡೆಯಬೇಕು. ಅದೀಗ ಸುದ್ದಿ! 'ನಾಳೆಗೆ ರದ್ದಿ'. ಆದರೆ ಇಂದು ಅದೊಂದೇ ಸುದ್ದಿ...

ಇದು ಸ್ವತಂತ್ರ ಭಾರತವನ್ನು ಆಕ್ರಮಿಸಿದ ಜಾಡ್ಯ. ಅದಿ ಅಂತ್ಯ ಒಂದಾದರೂ ಉಂಟೆ ಇದಕ್ಕೆ?

ಕಿರಿಚುವ ಪ್ರೇಕ್ಷಕರಿಗೆ ಹೆದರಿ ವಿವೇಚನೆ ನೇಪಥ್ಯಕ್ಕೆ ಸರಿದಾಗ ಇನ್ನು ಏನು ತಾನೇ ಆದೀತು? ಈ ಸಂಕಟದಲ್ಲೂ ಸಮಾಧಾನವೆಂದರೆ, ಮಾನವತೆಯಾಗಲಿ ವಿವೇಕವಾಗಲಿ ಇನ್ನೂ ಹರಕಿರಿ ಮಾಡಿಕೊಂಡಿಲ್ಲ.

ಸಂಪಾದಕೀಯ...

ಕೋಮುವಾದಿಗಳು ಸೋತಿದ್ದಾರೆ. ಆದರೆ...

ಉಪ ಚುನಾವಣೆಯೊಂದರ ಫಲಿತಾಂಶ ಸರ್ಕಾರವೊಂದರ ಭವಿಷ್ಯತ್ತನ್ನು ನಿರ್ಧರಿಸುವುದಿಲ್ಲವಾದರೂ ಅದು ಆ ಸರ್ಕಾರದ ಬಗೆಗಿನ ಜನರ ಅಭಿಪ್ರಾಯದ ಅಭಿವ್ಯಕ್ತಿಯಾಗಿದೆ. ಈ ಅರ್ಥದಲ್ಲಿ ಉಳ್ಳಾಲದ ಚುನಾವಣೆಯ ಫಲಿತಾಂಶ ಒಂದು ಗಟ್ಟಿಯಾದ ಧ್ವನಿಯನ್ನು ಹೊರಡಿಸಿದೆ. ಕೋಮುವಾದದ ವಿರುದ್ಧವಾಗಿ ಶಾಂತಿ ಸಾಮರಸ್ಯತೆ, ಆಶಯವನ್ನು ಪ್ರಕಟಿಸಿದೆ.

ಪ್ರಚಾರ ಅಬ್ಬರ, ನಾಯಕರ ಲೆಕ್ಕಚಾರ ಏನೇ ಇದ್ದರೂ, ಉಳ್ಳಾಲದ ಜನತೆ ಸ್ಪಷ್ಟವಾದ ತೀರ್ಪು ನೀಡಿದ್ದಾರೆ. ಈ ಕ್ಷೇತ್ರದಲ್ಲಿ ಗೆದ್ದೇ ಬಿಡುವ, ಆ ಮೂಲಕ ಕರಾವಳಿ ಕರ್ನಾಟಕದಲ್ಲಿ ಅಧಿಪತ್ಯ ಮೆರೆಯುವ ಬಿಜೆಪಿ ಸಂಘಪರಿವಾರದ ಕನಸಿಗೆ ಕಡಿವಾಣ ಹಾಕಿದ್ದಾರೆ. ಇದು ಅತ್ಯಂತ ಪ್ರಬುದ್ಧವಾದ ಸ್ವಾಗತಾರ್ಹ ತೀರ್ಪು.

ಆದರೆ ಇಂತಹ ತೀರ್ಪಿನಿಂದ ಸಕಾರಾತ್ಮಕ ಪಾಠ ಕಲಿಯಲು ಬಿಜೆಪಿ ಜೆಡಿ(ಎಸ್) ಮತ್ತು ಕಾಂಗ್ರೆಸ್ ಸಹ ಸಿದ್ಧವಿಲ್ಲ ಸೋಲು ಗೆಲುವುಗಳನ್ನು ವ್ಯಾಖ್ಯಾನಿಸುವ ರೀತಿಯೇ ಅತ್ಯಂತ ಸಂಕುಚಿತ ಹಿತಾಸಕ್ತಿಗಳಿದ್ದು, ವ್ಯಕ್ತಿನಿಷ್ಠವಾದುದು...

ಹೀಗಾಗಿಯೇ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಸಿಪಿಐ(ಎಂ) ಬಿಟ್ಟರೆ ಉಳಿದೆಲ್ಲಾ ಪಕ್ಷಗಳೂ ಜನರ ಸಮಸ್ಯೆಗಳು, ಕ್ಷೇತ್ರದ ಅಭಿವೃದ್ಧಿ ವಿಷಯಗಳನ್ನು ಚುನಾವಣೆಯ ಪ್ರಶ್ನೆಗಳನ್ನಾಗಿಸಲೇ ಇಲ್ಲ. ಒಬ್ಬರ ವಿರುದ್ಧ ಮತ್ತೊಬ್ಬರು ಕೆಸರೆರಚುವ ತಮ್ಮ ವೈಭವೀಕರಣಗೊಳಿಸಿಕೊಳ್ಳುವುದರಲ್ಲೇ ಮುಳುಗಿದರು. ಇಲ್ಲಿ ವ್ಯಕ್ತಿ ನಿಷ್ಠ ಅಂಶಗಳು, ಪ್ರತಿಷ್ಠೆಗಳೇ ಪ್ರಧಾನವಾದವು. ಯಡಿಯೂರಪ್ಪ, ಮುಖ್ಯಮಂತ್ರಿ ಕುಮಾರಸ್ವಾಮಿ ತಮ್ಮ ಪ್ರತಿಷ್ಠೆಯನ್ನು ಪಣವಾಗಿಟ್ಟರು.

ಇತ್ತೀಚಿನ ದಿನಗಳಲ್ಲಿ ರಾಜಕೀಯ ಪ್ರಶ್ನೆಗಳು ಜನರ ಸಮಸ್ಯೆಗಳಿಗಿಂತ ವ್ಯಕ್ತಿಗತ ವಿಷಯಗಳೇ ಪ್ರಧಾನವಾಗುತ್ತಿರುವುದು ಗಂಭೀರ ಬೆಳವಣಿಗೆ. ಇದರಿಂದಾಗಿ ಹಣ-ಹೆಂಡ-ಹೊಳೆ ಹರಿಯುತ್ತದೆ. ಜಾತಿ ಲೆಕ್ಕಚಾರಗಳೇ ಮೇಲುಗೈ ಪಡೆದು, ಅದನ್ನು ಪ್ರಚೋದಿಸಿ ಘೋಷಿಸಲಾಗುತ್ತಿದೆ. ಇದರ ಬೆಳೆಯನ್ನು ಕುಯ್ಲು ಮಾಡಲು ಯತ್ನಿಸಲಾಗುತ್ತಿದೆ. ಇಂತಹ ಅತ್ಯಂತ ನಿರ್ಲಜ್ಜ ಕೃತ್ಯ ಕಂಡಿದ್ದು ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ, ಅಂತಹುದೇ ವರಸೆಯ ತುಣುಕು ಉಳ್ಳಾಲದಲ್ಲಿ ಪ್ರಯೋಗಿಸಲ್ಪಟ್ಟಿವೆ. ಇದು ಒಂದರ್ಥದಲ್ಲಿ ಆ ಪಕ್ಷಗಳ ವೈಫಲ್ಯವನ್ನು ಒಪ್ಪಿಕೊಂಡಂತೆ ಆಗಿದೆ. ಇಷ್ಟೊಂದು ಪ್ರಮಾಣದ ಹಣ ಎಲ್ಲಿಂದ ಬರುತ್ತವೆ? ಭ್ರಷ್ಟಾಚಾರದ ಹಣವಲ್ಲವೇ?

ಉಳ್ಳಾಲದ ಜನತೆ ಸತತವಾಗಿ ಕೋಮುವಾದಿಗಳ ದಾಳಿಗೆ, ಗಲಭೆ ಹತ್ಯೆಯ ರಾಜಕೀಯಕ್ಕೆ ರೋಸಿ ಹೋಗಿದ್ದಾರೆ. ಜಿಲ್ಲೆ ಆ ಕೂತ ಪೋಲೀಸ್ ಇಲಾಖೆ ಮುಕ್ತವಾಗಿ ಸಂಘಪರಿವಾರ ದೊಂದಿಗೆ ಕೈ ಜೋಡಿಸುವುದನ್ನು, ಇಂತಹದ್ದಕ್ಕೆಲ್ಲಾ ಉಸ್ತುವಾರಿ ಸಚಿವ ನಾಗರಾಜಶೆಟ್ಟಿಯಂತಹವರ ನೇರ ನಿರ್ದೇಶನವಿರುವುದನ್ನು ಕಂಡು ನಡುಗಿದ್ದಾರೆ. ಹೀಗಾಗಿ ಇದು ಬಿಜೆಪಿ-ಸಂಘಪರಿವಾರದ ಈ ಸರ್ಕಾರದ ಸಾಧನೆಗೆ ದೊರೆತ ಪ್ರತಿಕ್ರಿಯೆಯಾಗಿದೆ. ಇಂತಹವರೊಂದಿಗೆ ಕೈ ಜೋಡಿಸಿ ಅಧಿಕಾರ ಅನುಭವಿಸುವ ಕುಮಾರಸ್ವಾಮಿ, ಜೆಡಿ(ಎಸ್)ನ ಜಾತ್ಯಾತೀತತೆಯ ಸೋಗಲಾಡಿತನವನ್ನು ವಿರೋಧಿಸಿದ್ದಾರೆ. ಹೀಗಾಗಿಯೇ ಮುಖ್ಯಮಂತ್ರಿಗಳು ಬಂದು ಮದರಸದಲ್ಲಿ ವಾಸ್ತವ್ಯ ಹೂಡಿದರೂ, ಸ್ವತಃ ಬಿರುಸಿನ ಪ್ರಚಾರ ಕೈಗೊಂಡರೂ, ಠೇವಣಿಯನ್ನು ಉಳಿಸಿಕೊಳ್ಳಲಾಗಲಿಲ್ಲ. ಅಲ್ಪಸಂಖ್ಯಾತರ ಮತ ಒಡೆದು ಬಿಜೆಪಿಯ ಗೆಲುವಿಗೆ ತಂತ್ರ ರೂಪಿಸಿದರೂ ಅದು ವಿಫಲವಾಯಿತು. ಇದನ್ನಂತ ಬಿಜೆಪಿಯೊಂದಿಗೆ ತಕರಾರು ಹೇಳಿಕೊಂಡರೂ ಪ್ರಯೋಜನವೇನೂ ಆಗಲಿಲ್ಲ. ಜನರ ವಿರೋಧ ಅಷ್ಟು ಪ್ರಬಲವೆಂಬುದನ್ನು ನಾವಿಲ್ಲಿ ಗುರುತಿಸಬೇಕು. ಚುನಾವಣಾ ಫಲಿತಾಂಶ ಈ ಸರ್ಕಾರದ ಆಡಳಿತದ ವಿರುದ್ಧದ ತೀರ್ಪು ಹೌದು.

ಈ ಚುನಾವಣೆ ಫಲಿತಾಂಶ ಇನ್ನೊಂದೆಡೆಯಲ್ಲಿ ಸರ್ಕಾರದ ಮೈತ್ರಿ ಕೂಟದ ಪಕ್ಷಗಳ ನಡುವೆ; ಅಲ್ಲದೇ ಆ ಪಕ್ಷದ ಒಳಗೂ ಘರ್ಷಣೆಗಳನ್ನು ಹುಟ್ಟು ಹಾಕಿದೆ. ಗುಂಪುಗಾರಿಕೆಯೂ ಚುರುಕಾಗಿದೆ. ಬಿಜೆಪಿಯೊಳಗೆ ಅದು ತೀವ್ರಗೊಂಡಿದ್ದರಿಂದ ಮೂವರು ಹಿರಿಯ ಸಚಿವರನ್ನು ಕೇಂದ್ರ ನಾಯಕರು ಕರೆಸಿಕೊಂಡಿದ್ದಾರೆ. ಯಡಿಯೂರಪ್ಪನವರ ಉಸ್ತುವಾರಿಯ ಈ ಕ್ಷೇತ್ರದಲ್ಲಿ ಅನಂತಕುಮಾರ್ ನಾಮಕಾವಸ್ಥೇ ಮಾತ್ರ ಪ್ರಚಾರ ನಡೆಸಿ ಬಂದಿದ್ದಾರೆ. ಜೆಡಿ(ಎಸ್) ಹಾಗೂ ಬಿಜೆಪಿಯೊಂದಿಗೆ ಸಂಬಂದ ಹೇಗೆ ಎಂದು ಪ್ರಶ್ನೆ ಎದ್ದಿದೆ. ಅದು ಕುಮಾರಸ್ವಾಮಿಯವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆಂದು, ಇಲ್ಲವೆಂದೂ ಹೇಳಿಕೆಗಳೂ ಬಹಿರಂಗವಾಗಿ ನಡೆಯುವುದು ಅಷ್ಟಕ್ಕೆ ಸೀಮಿತವಾಗಿ ವಿಷಯವಲ್ಲ. ಹಾಗೆಯೇ ರೈತರ ಆತ್ಮಹತ್ಯೆ ನಿಲ್ಲದಿದ್ದರೆ ರಾಜೀನಾಮೆ ಕೊಡುವುದಾಗಿ ಮುಖ್ಯಮಂತ್ರಿ ಹೇಳುತ್ತಿರುವುದು ಬೇರೊಂದು ಅರ್ಥದಲ್ಲಿ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಜೆಡಿ(ಎಸ್) ಒಳಗೇ ಮುಖ್ಯಮಂತ್ರಿಗಳನ್ನು ಬದಲಾಯಿಸುವ ಮಾತುಗಳು ಕೇಳುತ್ತಿದೆ. ಇನ್ನೊಂದೆಡೆ ಕಾಂಗ್ರೆಸ್ ಒಳಗೆ ಅಧಿಕೃತ ವಿರೋಧಿ ಪಕ್ಷದ ನಾಯಕನ ಸ್ಥಾನಕ್ಕಾಗಿ, ರಾಜ್ಯಾಧ್ಯಕ್ಷತೆಗಾಗಿ ಪೈಪೋಟಿ ಏರ್ಪಟ್ಟಿರುವುದು ಬಹಿರಂಗವಾಗಿದೆ.


ಹಲವು ರೀತಿಗಳಲ್ಲಿ ನಲುಗಿದ ಜನತೆ ಚುನಾವಣೆಯ ಸಂದರ್ಭವನ್ನು ಬಳಸಿಕೊಂಡು ಕೋಮುವಾದಿಗಳನ್ನು ಸೋಲಿಸಿದ್ದಾರೆ. ಕರಾವಳಿಗೆ ಬೇಕಿರುವುದು - ಗಲಭೆಗಳಲ್ಲ, ಸೌಹಾರ್ದತೆ-ಅಭಿವೃದ್ಧಿ ಎಂದು ನಿಚ್ಚಳವಾಗಿ ಘೋಷಿಸಿದ್ದಾರೆ. ಇದು ಆಶಯ ಮತ್ತು ಗೆಲವು.

ಇಲ್ಲಿ ಬಿಜೆಪಿ ಸೋತ ಹೋದದ್ದರಿಂದ ಕೋಮುವಾದವೇ ಸೋತಿದೆ ಎನ್ನುವಂತಿಲ್ಲ. ಈಗಲೂ ಅದಕ್ಕೆ ಪ್ರಬಲವಾದ ನೆಲೆ ಇದೆ, ಶಕ್ತಿ ಇದೆ, ಸಮಯ ಸಿಕ್ಕಾಗಲೆಲ್ಲಾ, ಹೆಡೆ ಎತ್ತಿ ಅಪ್ಪಳಿಸುತ್ತದೆ. ಅದರ ಷಡ್ಯಂತ್ರಗಳು ಇಲ್ಲಿಗೆ ನಿಲ್ಲುವುದಿಲ್ಲ. ಅದರ ಆಕ್ರಮಣ ಇನ್ನಷ್ಟು ತೀವ್ರವಾಗಬಹುದು. ಕರ್ನಾಟಕವನ್ನು ಜನಾಂಗೀಯ ಹತ್ಯೆಯ ಕುಖ್ಯಾತ ಗುಜರಾತನ್ನಾಗಿಸುವ ಅಜೆಂಡಾ ಹಿಂದೆ ಸರಿದಿಲ್ಲ. ನರಹಂತಕ ಮೋದಿಯನ್ನೇ ಆದರ್ಶವನ್ನಾಗಿಸಿಕೊಂಡ ಸಚಿವರ ಕೈಯಲ್ಲಿ ಜಿಲ್ಲಾ ಉಸ್ತುವಾರಿ ಇದೆ. ಆಡಳಿತದ ಕೀಲಿ ಅವರ ಕೈಯಲ್ಲೇ ಇದೆ. ಕಾಂಗ್ರೆಸ್ ಸಹ ಇದು ತನ್ನ ನಿಷ್ಕ್ರಿಯತೆ, ಕೋಮುವಾದ ಎದುರಿಸಿದ ಸೌಮ್ಯ ಕೇಸರೀಕರಣಕ್ಕೆ ದೊರೆತ ಅಂಗೀಕಾರವೆಂದು ಭಾವಿಸಬೇಕಿಲ್ಲ. ಕ್ಷೇತ್ರದ-ಜನತೆಯ ಸಮಸ್ಯೆಯನ್ನು ಪರಿಹರಿಸಬೇಕೆಂದರೆ, ಕೋಮುವಾದವನ್ನು ದೃಢವಾಗಿ 'ಜಾತ್ಯಾತೀತ' ನೆಲೆಯಲ್ಲಿ ವಿರೋಧಿಸದೇ ಇದ್ದಲ್ಲಿ ಹೇಗೋ ಜನ ಮತ ನೀಡುತ್ತಾರೆ. ಎಂದು ಕೊಂಡರೆ ಅದು ಮೂರ್ಖತನವಾಗುತ್ತದೆ. ಕಾಂಗ್ರೆಸ್‌ನ ವೈಫಲ್ಯವೇ ಬಿಜೆಪಿಗೆ ಬೆಳವಣಿಗೆಗೆ ಪೋಷಣೆ ನೀಡಿದೆ. ಬಲ ನೀಡುತ್ತಿದೆ. ಈ ಅಂಶ ಗಂಭೀರವಾಗಿ ಪರಿಗಣಿಸಬೇಕು.

ಇದೇ ಸಂದರ್ಭದಲ್ಲಿ ಕೋಮುವಾದಿ ಬಿಜೆಪಿ ಅದರ ಮೈತ್ರಿಕೂಟ, ಜನವಿರೋಧಿ ಕಾಂಗ್ರೆಸ್‌ಗೆ ಪರ್ಯಾಯವಾಗಿ ಎಡಶಕ್ತಿಗಳ, ತೀವ್ರ ಬೆಳವಣಿಗೆ ಅತ್ಯಂತ ಅಗತ್ಯವಾಗಿದೆ. ಇದನ್ನು ಸಾಧಿಸದೇ ಹೋದ ಬಗ್ಗೆ ಆಳವಾದ ವಿಮರ್ಶೆ ಎಡಪಕ್ಷಗಳಲ್ಲಿ ಆಗಬೇಕು. ಕಾರ್ಮಿಕ ವರ್ಗ ಮತ್ತು ಅದರ ಸಿದ್ಧಾಂತದ ಬಲವೊಂದರಿಂದ ಮಾತ್ರವೇ ಬಲಪಂಥೀಯ ಶಕ್ತಿಗಳನ್ನು ಎದುರಿಸಲು ಸಾಧ್ಯ ಕೋಮು ಸೌಹಾರ್ದತೆ ಕಾಯಲು ಸಾಧ್ಯ.

ಮಹದಾಯಿ :

ಬೀದಿ ರಂಪಾಟ ಅನಗತ್ಯ



ಗೋವಾ ಚುನಾವಣಾ ಪ್ರಚಾರದಲ್ಲಿ ಮಹದಾಯಿ ನದಿಗೆ ಅವಕಾಶ ನೀಡುವುದಿಲ್ಲ ವೆಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಹೇಳಿದರೆಂಬ ಹೇಳಿಕೆಯನ್ನು ಖಂಡಿಸಿ ರಾಜ್ಯದ ಕೆಲವೆಡೆ ಪ್ರತಿಭಟನೆಗಳು ನಡೆದಿವೆ. ಆಡಳಿತ ಪಕ್ಷಗಳು ಹಾಗೂ ವಿರೋಧ ಪಕ್ಷದವರ ನಡುವೆ ವಾಗ್ಯುದ್ಧ ನಡೆದಿದೆ. ಸೋನಿಯಾ ಹೇಳಿಕೆಯನ್ನು ಕಾಂಗ್ರೆಸ್ ವಿರುದ್ಧವೇ ತಿರುಗಿಸುವ ಬಿಜೆಪಿ ಮುಖಂಡರು ಪ್ರಯತ್ನಿಸುತ್ತಿರುವಾಗಲೇ, ಕಾಂಗ್ರೆಸ್ ಮುಖಂಡರು ವಾಜಪೇಯಿ, ಅಡ್ವಾಣಿಯವರೇ ಹಾಗೇ ಹೇಳಿದ್ದರು. ಅದರಲ್ಲೇನು ಎಂದೂ ಪ್ರಶ್ನಿಸಿದ್ದಾರೆ. ಹೀಗೆ ಪ್ರಶ್ನೆ-ಮರು ಪ್ರಶ್ನೆ ಅಥವಾ ವಿವಾದವನ್ನು ಜನರ ನಡುವೆ ಕೊಂಡೊಯ್ದು ಅದನ್ನು ಬೆಳೆಸುವುದರಿಂದ ಸಮಸ್ಯೆಗೆ ಸೂಕ್ತ ಪರಿಹಾರ ಸಿಗಲಾರದು. ನದಿ-ನೀರಿನ ಹಂಚಿಕೆಯ ಪ್ರಶ್ನೆ ಪ್ರತಿಯೊಂದು ರಾಜ್ಯದ ಜನತೆಗೆ ಜೀವನ್ಮರಣದ ಪ್ರಶ್ನೆಯಾಗಿರುವಾಗ ಒಟ್ಟು ಜನತೆಯ ಹಿತ, ಒಗ್ಗಟ್ಟನ್ನು ಕಾಪಾಡುವ ಎಚ್ಚರಿಕೆ ಪ್ರತಿಯೊಬ್ಬರೂ ಇರಿಸಿಕೊಳ್ಳಬೇಕು. ಆದ್ದರಿಂದಲೇ ಬೀದಿರಂಪಾಟದಿಂದ ಸಮಸ್ಯೆಗೆ ಪರಿಹಾರ ದೊರಕಲಾರದು. ಸಮಸ್ಯೆ ಇರುವ ಉಭಯ ರಾಜ್ಯಗಳು ಕುಳಿತು ವಿವಾದವಾಗಿ ಚರ್ಚಿಸಿ ಒಂದು ಸಮ್ಮತದ ಪರಿಹಾರ ಸೂತ್ರಕ್ಕೆ ಬರಬೇಕು. ಈ ದಿಶೆಯಲ್ಲಿ ಅಂತಹ ಪ್ರಕ್ರಿಯೆಗೆ ಚಾಲನೆ ದೊರೆಯಲಿ. ಎರಡೂ ರಾಜ್ಯಗಳ ಜನರ ಒಗ್ಗಟ್ಟಿನತ್ತ ಗಮನವಿರಲಿ.

ಭೂ ಕಬಳಿಕೆ : ಪತ್ತೆ-ಶಿಕ್ಷೆ ತೀವ್ರವಾಗಬೇಕು

ಬೆಂಗಳೂರು ನಗರ -ಅದರ ಸುತ್ತಲಿನ ಪ್ರದೇಶಗಳಲ್ಲಿ ಅಕ್ರಮವಾಗಿ ಭೂಮಿಯ ಒತ್ತುವರಿಯಿಂದ ಪ್ರಕರಣಗಳ ವಿಚಾರಣೆಯನ್ನು ಅಧ್ಯಯನವನ್ನು ಶಾಸಕ ಎ.ಟಿ.ರಾಮಸ್ವಾಮಿಯವರ ಅಧ್ಯಕ್ಷತೆಯ ಸದನದ ಸಮಿತಿಯು ನಡೆಸುತ್ತಿದೆ. ಈವಾರದಲ್ಲಿ ಸುಮಾರು 8,675 ಕೋಟಿಗೂ ಅಧಿಕ ಮೌಲ್ಯದ ಜಮೀನನ್ನು ಅತ್ಯಂತ ಪ್ರಭಾವಿಗಳು ಕಬಳಿಸುವುದನ್ನು ಗುರುತಿಸಲಾಗಿದೆ. ಇದರಲ್ಲಿ ಮಾಜಿ ಸಿ.ಎಂ.ಅಳಿಯ, ಪೋಲೀಸ್ ಮಹಾನಿರ್ದೇಶಕರ ಸಂಬಂಧಿ ಮತ್ತು ಪುರಪರಿಕರ್‌ನಂತಹ ಬಿಲ್ಡರ್ಸ್ ಒಳಗೊಂಡಿದ್ದಾರೆ.

ಅಂದರೆ ಸರ್ಕಾರದ ಅಧಿಕಾರ, ಪ್ರಭಾವಗಳನ್ನು ಬಳಸಿ ಜಮೀನು ನುಂಗಿದ್ದಾರೆ. ಇಂತಹ ಕಬಳಿಕೆಯು ಅಧಿಕಾರಸ್ಥರ, ಅಧಿಕಾರಿಗಳ ಶಾಮೀಲು ಇಲ್ಲದೇ ನಡೆದಿರಲು ಸಾಧ್ಯವಿಲ್ಲ. ಮತ್ತು ವ್ಯಾಪಕವಾದ ಭ್ರಷ್ಟಾಚಾರದ ಅಂಶವೂ ಇಲ್ಲದಿಲ್ಲ.

ಬೆಂಗಳೂರಿನ ಜನ ಸಾಮಾನ್ಯರು, ಕಾರ್ಮಿಕರು ನೆಲೆ ಇಲ್ಲದೇ ಪರಿತಪಿಸುತ್ತಿದ್ದಾರೆ. ಅವರಿಗೆ



ಸೂರು ನೀಡಲು ಸರ್ಕಾರ ಸಿದ್ದವಿಲ್ಲ. ಆದರೆ ಉಳ್ಳವರ ಭೂ ಕಬಳಿಕೆಗೆ, ಎಸ್ಟೇಟ್ ದಂಧೆಗೆ ಮುಕ್ತ ಪರವಾನಗಿ ನೀಡುತ್ತಿದೆ.

ಹೀಗೆ ಸರ್ಕಾರ ಮರು ವಶಪಡಿಸಿಕೊಂಡಿರುವ ಭೂಮಿಯನ್ನು ಜನಸಾಮಾನ್ಯರಿಗೆ ವಾಸಕ್ಕಾಗಿ ನಿವೇಶನಗಳನ್ನಾಗಿ ನೀಡುವ ಬದಲು ಮತ್ತೇ ಅಂತಹುದೇ ದೊಡ್ಡ ತಿಮಿಂಗಲಗಳ ಬಾಯಿಗೆ ಭೂಮಿಯನ್ನು ಹರಾಜು ಹಾಕಿ ನೂಕುತ್ತಿದೆ.ಅದೂ ಕಡಿಮೆ ಬೆಲೆಗೆ ಹರಾಜು ಹಾಕಲಾಗುತ್ತಿದೆ. ಇದನ್ನು ತಕ್ಷಣ ನಿಲ್ಲಿಸಿ ಸಾರ್ವಜನಿಕ ಉದ್ದೇಶಗಳಿಗೆ, ಜನಸಾಮಾನ್ಯರ ವಾಸಕ್ಕೆ ಭೂಮಿ ನೀಡುವುದು ಅತ್ಯಂತ ಜರೂರಾಗಬೇಕಿದೆ.

ಇಂತಹ ಹರಾಜನ್ನು ವಿರೋಧಿಸಿ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು. ಆ ಹೋರಾಟ ಮುಂದುವರಿದಿದೆ. ಮುಖ್ಯಮಂತ್ರಿ ಗಳೊಂದಿಗೆ ನಿಯೋಗದ ಚರ್ಚೆಯೂ ಆಗಿದೆ. ಆದರೆ ಬೇಡಿಕೆಯು ಸಾಕಾರಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಭೂ ಪರಭಾರೆ ವಿರುದ್ಧದ ಚಳುವಳಿ ತೀವ್ರಗೊಳ್ಳಬೇಕಿದೆ.

ಜಮೀನು ಕಬಳಿಕೆಯನ್ನು ಪತ್ತೆಹಚ್ಚುವ ಕೆಲಸ ಇನ್ನೂ ತೀವ್ರವಾಗಿ, ಸಮಗ್ರವಾಗಿ ನಡೆಯಬೇಕು. ಎಲ್ಲರನ್ನೂ ಬಯಲಿ ಗೆಳೆಯುವಂತೆ ನಿಷ್ಪಕ್ಷಪಾತವಾಗಿರಬೇಕು.

ಬೆಂಕಿ ಇಡುವವರು


ಈ ಜನರು ದೇಶಕ್ಕೆ ಬೆಂಕಿಯನು
ಇಟ್ಟು
ಎಣಿಸುವವರು ಗಳಿಸಿರುವ
ವೋಟುಗಳ ಒಟ್ಟು
ಬೆಂಕಿಯೊಳು ಬೆಂದಿರುವ
ಮಂದಿಗಳು ಮಾತ್ರ
ಹಿಂದುಳಿದ ಯುವಜನರು ಇವರು
ಸುಸೂತ್ರ

- ವಿಡಂಬಾರಿ

ಈ ಚಿತ್ರ ಇಲ್ಯಾಕೆ ಅಂತಿರಾ?

ದೇಶ ಭಕ್ತರ
ಧರ್ಮ ರಕ್ಷಣಾ
ಕಾರ್ಯ
ತಿಳಿಯಬೇಕೆ?
ಪುಟ 10 ನೋಡಿ






▪ ಸಿ.ಯತಿರಾಜು

1857 ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ದೊಡ್ಡ ಅಧ್ಯಾಯದಲ್ಲಿ ಈಗಿನ ಬಿಹಾರ ರಾಜ್ಯದಲ್ಲಿನ ಪಾಟ್ನಾ ಬಂಡಾಯವೂ ಒಂದು ಉಜ್ವಲ ದಾಖಲೆ ಹೊಂದಿರುವ ಮಹತ್ವದಪುಟ

ಮೊದಲನೇ ಸ್ವಾತಂತ್ರ್ಯ ಸಂಗ್ರಾಮ

ಪಾಟ್ನಾ ಬಂಡಾಯ

1857ರ ಜುಲೈ 3 ರಂದು ಪಾಟ್ನಾದ ಪೀರ್ ಆಲೀಯ ಮನೆಯಲ್ಲಿ ಕ್ರಾಂತಿಕಾರಿಗಳ ರಹಸ್ಯ ಸಭೆಯೊಂದು ನಡೆಯುತ್ತಿತ್ತು. ಅಲ್ಲಿನ ಕಮೀಷನರ್ ಟೇಲರ್ ಹಿಂದಿನ ದಿನವಷ್ಟೆ ಮೂವರು ಪ್ರಮುಖ ಗುಪ್ತ ಸಂಘಟನೆಯ ಕ್ರಾಂತಿಕಾರಿಗಳನ್ನು ಔತಣಕೂಟಕ್ಕೆ ಆಹ್ವಾನಿಸಿ ಮೋಸದಿಂದ ಅವರನ್ನು ಸೆರೆ ಹಿಡಿದಿದ್ದ. ವಹಾಬಿ ಚಳುವಳಿಯ ಪ್ರಮುಖ ಕೇಂದ್ರವಾಗಿದ್ದ ಪಾಟ್ನಾದಲ್ಲಿ ಯಾವಾಗಬೇಕಾದರೂ ಬಂಡಾಯ ಆರಂಭವಾಗಬಹುದೆಂಬ ನಿರೀಕ್ಷೆಯಲ್ಲಿದ್ದ ವಿಲಿಯಂ ಟೇಲರ್ ಅದನ್ನು ಮುಂಜಾಗ್ರತೆಯಿಂದ ಹೊಸಕಿ ಹಾಕಲು ಈ ಕ್ರಮಕ್ಕೆ ಮುಂದಾಗಿದ್ದ. ಇದು ಸಾಲದೆಂಬಂತೆ ನಗರದಲ್ಲಿ ಯಾರೂ ಶಸ್ತ್ರಾಸ್ತ್ರಗಳನ್ನು ಹೊಂದಿರಬಾರದು ಮತ್ತು ರಾತ್ರಿ 9 ರ ನಂತರ ತಮ್ಮ ಮನೆಗಳಿಂದ ಹೊರಗೆ ಬರಬಾರದೆಂದು ಆಜ್ಞೆ ಹೊರಡಿಸಿದ್ದ. ಈ ಕಾರ್ಯಾಚರಣೆಗಳ ಫಲವಾಗಿ ರಾತ್ರಿ ಕ್ರಾಂತಿಕಾರಿಗಳ ಸಭೆ ನಡೆಯುವುದು ಅತ್ಯಂತ ಕಠಿಣವಾಯಿತು. ದಾನಾಪುರದಿಂದ ಕ್ರಾಂತಿಯ ಸೂಚನೆಗಾಗಿ ಕಾಯುತ್ತಿದ್ದ ಪಾಟ್ನಾ ಕ್ರಾಂತಿಕಾರಿ ಸಂಘಟನೆಯ ಸದಸ್ಯರಿಗೆ ಟೇಲರ್‌ನ ಈ ಕ್ರಮಗಳು ಅತ್ಯಂತ ಉದ್ರೇಕಕಾರಿ ಪ್ರಚೋದನೆಗಳಾಗಿ ಕಂಡುಬಂದವು. ಅವರೆಲ್ಲರೂ ಪುಸ್ತಕ ವ್ಯಾಪಾರಿಯಾಗಿದ್ದ ಫೀರ್ ಆಲೀಯ ಮನೆಯಲ್ಲಿ ಗುಪ್ತವಾಗಿ ಸಭೆ ಸೇರಿದರು. ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ವಿವರವಾಗಿ ಚರ್ಚಿಸಿ ಅನಿರೀಕ್ಷಿತವಾಗಿ ಬಂಡೇಳುವುದೆಂದು ತೀರ್ಮಾನಿಸಿದರು. ತೀರ್ಮಾನವನ್ನು ಜಾರಿಗೊಳಿಸುವ ಭಾಗವಾಗಿ ಆ ಮನೆಯಿಂದ ಒಬ್ಬೊಬ್ಬರೇ ಕೈಯಲ್ಲಿ ಹಸಿರು ಬಾವುಟ ಹಿಡಿದು ಘೋಷಣೆ ಕೂಗುತ್ತಾ ಹೊರಗೆ ಬಂದರು. ಅದೇ ಸಂದರ್ಭದಲ್ಲಿ ರಾತ್ರಿ ಗಸ್ತು ತಿರುಗುತ್ತಿದ್ದ ಡಾ: ಲೈಲ್‌ಷಡಯ ಹದ್ದಿನ ಕಣ್ಣಿಗೆ ಈ ಕ್ರಾಂತಿಕಾರಿಗಳು ಬಿದ್ದರು. ಗಸ್ತುಪಡೆ ಮತ್ತು ಕ್ರಾಂತಿಕಾರಿಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಪೀರ್ ಆಲಿ ಇಂಗ್ಲೀಷ್ ಅಧಿಕಾರಿ ಲೈಲ್‌ನನ್ನು ಕೊಂದನು.



ಪೀರ್ ಆಲೀ ಈ ಕ್ರಾಂತಿಕಾರಿಯಾಗಿ ರೂಪಿತಗೊಂಡು ಲಕ್ನೋದಿಂದ ಪಾಟ್ನಾಗೆ ಬಂದು ಪುಸ್ತಕ ವ್ಯಾಪಾರ ಮಾಡುತ್ತಾ ದೆಹಲಿ, ಲಕ್ನೋ ಕ್ರಾಂತಿಕಾರಿಗಳನ್ನು ಪಾಟ್ನಾದ ಯುವಕರಿಗೆ ಪರಿಚಯಿಸಿ ಅವರಲ್ಲಿದ್ದ ದೇಶ ಪ್ರೇಮವನ್ನು ಪ್ರಜ್ವಲಿಸುವಂತೆ ಮಾಡಿದ. ಕ್ರಾಂತಿಕಾರಿಗಳ ಬಗ್ಗೆ ಸಹಾನುಭೂತಿ ಹೊಂದಿದ್ದ ಶ್ರೀಮಂತ ದೇಶಪ್ರೇಮಿಗಳಿಂದ ಹಣ ಸಂಗ್ರಹಣೆ ಮಾಡಿ ಶಸ್ತ್ರ ಸಜ್ಜಿತ ಕ್ರಾಂತಿಕಾರಿಗಳ ಪಡೆಯನ್ನು ಸಂಘಟಿಸಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಬಂಡಾಯವೆಬ್ಬಿಸಿದನು. ಇದೇ ಪಾಟ್ನಾ ಬಂಡಾಯ.

17ನೇ ಶತಮಾನದಿಂದಲೇ ಬಿಹಾರ, ಬಂಗಾಳ ಮತ್ತು ಒರಿಸ್ಸಾಗಳೊಂದಿಗೆ, ಐರೋಪ್ಯ ಕಂಪನಿಗಳ ವಾಣಿಜ್ಯ ಚಟುವಟಿಕೆಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿತ್ತು. ಇಂಡಿಗೋ (ನೀಲಿ) ಉತ್ಪಾದನೆ ಈ ಪ್ರದೇಶದ ವಸಾಹತುಶಾಹಿ ಶೋಷಣೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿತು. ಈಸ್ಟ್ ಇಂಡಿಯಾ ಕಂಪನಿ, ಐರೋಪ್ಯ ಇಂಡಿಗೋ ಪ್ಲಾಂಟರುಗಳ ಮೂಲಕ ಮತ್ತು ದೇಶೀಯ ಜಮೀನ್ದಾರರುಗಳ ಮೂಲಕ ಒತ್ತಾಯಪೂರ್ವಕವಾಗಿ ಇಂಡಿಗೋ ಕೃಷಿಯನ್ನು ಹೇರಿ ಆ ಪ್ರದೇಶಗಳ ರೈತರನ್ನು ಗುಲಾಮಗಿರಿ ದುಡಿಮೆಗೆ ಹಚ್ಚಿದರು. ಇಂಡಿಗೋ ಅಲ್ಲದೆ ಈ ಪ್ರದೇಶದಲ್ಲಿ ಗಣನೀಯ ಪ್ರಮಾಣದಲ್ಲಿ ಅಫೀಮನ್ನು ಬೆಳೆಯಲಾಗುತ್ತಿತ್ತು. ಈ ಎರಡೂ ವಾಣಿಜ್ಯ ಬೆಳೆಗಳಿಂದ ಬ್ರಿಟಿಷ್ ಸರ್ಕಾರ ತನ್ನ ಬೊಕ್ಕಸಕ್ಕೆ ಅಪಾರ ಹಣವನ್ನು ರೈತರಿಂದ ದೋಚಿಕೊಳ್ಳಲು ಸಾಧ್ಯವಾಗಿತ್ತು. ಡಾ:ಲೈಲ್‌ನ ಕೊನೆ ಬ್ರಿಟಿಷರ ಆರ್ಥಿಕ ಚಟುವಟಿಕೆಗೆ ಈ ಪ್ರದೇಶದಲ್ಲಿ ತೀವ್ರ ಹಿನ್ನಡೆಯುಂಟು ಮಾಡುವುದಾಗಿತ್ತು.

ಅತ್ಯಂತ್ಯ ಕ್ರೂರಿ ಹಾಗೂ ಹಿಂಸಾ ಸಂತೋಷಿಯಾಗಿದ್ದ ಪಾಟ್ನಾದ ಆಯುಕ್ತ ವಿಲಿಯಂ ಟೇಲರ್ ಕ್ರಾಂತಿಕಾರಿಗಳನ್ನು ಅತ್ಯಂತ ಕ್ರೂರವಾಗಿ ಬೇಟೆಯಾಡಲಾರಂಭಿಸಿದ. ಶೀಘ್ರ ಕಾರ್ಯಾಚರಣೆಯ ಮೂಲಕ ಕ್ರಾಂತಿಕಾರಿಗಳನ್ನು ರ್‍ಯಾಟ್ರಿ ಸೆರೆ ಹಿಡಿದ. ಪೀರಾ ಆಲೀ ಮತ್ತವನ ಸಂಗಡಿಗರನ್ನ ಡಾ: ಲೈಲ್‌ನ ಕೊಲೆ ಆರೋಪದ ಮೇಲೆ ವಿಚಾರಣೆಗೆ ಗುರಿಪಡಿಸಿ ಮರಣ ದಂಡನೆ ವಿಧಿಸಲಾಯಿತು. ಅವನನ್ನು ಅತ್ಯಂತ ಬರ್ಬರವಾಗಿ ಹಿಂಸಿಸಲಾಯಿತು. ಇತರ ಕ್ರಾಂತಿಕಾರಿಗಳ ಹೆಸರು ಹೇಳಿ ಜೀವ ಉಳಿಸಿಕೊಳ್ಳುವಂತೆ ಪ್ರಲೋಭನೆಯನ್ನೊಡ್ಡಲಾಯಿತು. ಪೀರ್ ಆಲೀ ಸಾವನ್ನೇ ತೃಣವಾಗಿಸಿ ಭೀತಿಯನ್ನು ಧಿಕ್ಕರಿಸಿ ನಿಂತ. ಮಿತ್ರ ದ್ರೋಹ ಮಾಡಿ ಪ್ರಾಣ ಉಳಿಸಿಕೊಳ್ಳುವುದಕ್ಕಿಂತ ದೇಶಕ್ಕಾಗಿ, ಹಾಗೂ ಪರಕೀಯರ ಆಳ್ವಿಕೆಯನ್ನು ಕಿತ್ತೊಗೆಯಲು ಪ್ರಾಣತ್ಯಾಗ ಮಾಡುವುದೇ ಅತ್ಯಂತ ಸಂತೋಷವೆಂದು ಭಾವಿಸಿದ. ಅತ್ಯಂತ ಆನಂದದಿಂದ ಆತ್ಮಾಹುತಿಯ ಸುವರ್ಣಾವಕಾಶವನ್ನು ತನ್ನದಾಗಿಸಿಕೊಂಡು ಬ್ರಿಟಿಷರ ಅನ್ಯಾಯ ದೌರ್ಜನ್ಯಗಳನ್ನು ಅವರ ಮುಖಕ್ಕಿಡಿದು ಕ್ರಾಂತಿಕಾರಿ ಪರಂಪರೆಯ ಬೆಳ್ಳಿ ಚುಕ್ಕಿಯಾಗಿ ಮೆರೆದ. ತನ್ನ ಈ ನಡವಳಿಕೆಯ ಮೂಲಕ ಅವನ ಶತೃಗಳ ಮೆಚ್ಚುಗೆ, ಗೌರವಗಳಿಗೆ ಪಾತ್ರನಾದ. ಪೀರ್‌ಆಲೀ ಮತ್ತು ಅವನ 16 ಕ್ರಾಂತಿಕಾರಿ ಸಂಗಾತಿಗಳನ್ನು ಗಲ್ಲಿಗೇರಿಸಲಾಯಿತು. ಇತರ 17 ಜನರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಇನ್ನಿಬ್ಬರನ್ನು ಕರಾಳ ಶಿಕ್ಷೆಗೆ ದೂರದ ಪ್ರದೇಶಕ್ಕೆ ಕಳುಹಿಸಲಾಯಿತು. ಪೀರ್ ಆಲೀ ಮತ್ತವನ ಸಂಗಡಿಗರ ತ್ಯಾಗ ಬಲಿದಾನಗಳು ವ್ಯರ್ಥವಾಗಲಿಲ್ಲ. ಬಿಹಾರದ ಬಹುಪಾಲು ಭಾಗಗಳಿಗೆ ಬಂಡಾಯವನ್ನು ಕಾಡ್ಗಿಚ್ಚಿನಂತೆ ಹಬ್ಬಿಸುವ ಪಂಜಿನೋಪಾದಿಯಲ್ಲಿ ಪಾಟ್ನಾ ಬಂಡಾಯ ಕೆಲಸ ಮಾಡಿತು.



▪ ಮಹಾಂತೇಶ್

ಜನರ ತಳಮಳ ಮರೆಮಾಚಿದ ಮಾಧ್ಯಮಗಳು

ಕಳೆದ ವಾರವಿಡಿ ರಾಜ್ಯದ ಮಾಧ್ಯಮಗಳಿಗೆ ಉಳ್ಳಾಲ ಉಪಚುನಾವಣೆಯೇ ಆಹಾರವಾಗಿತ್ತು. ಅದರ ಜೊತೆಯಲ್ಲಿ ಜೆಡಿ(ಎಸ್) ಬಾವುಟವನ್ನು ನೆರೆಯ ಗೋವಾದಲ್ಲಿ ಹಾರಿಸಲು ಅಲ್ಲಿಯೇ ತಿಂಗಳಿಂದ ಠಿಕಾಣಿ ಹಿಡಿದ ಮಾಜಿ ಪ್ರಧಾನಿ ದೇವೇಗೌಡರು ಮಾಧ್ಯಮಗಳಲ್ಲಿ ಸ್ವಲ್ಪ ಪ್ರಮಾಣದ ಸುದ್ದಿಗೆ ಗ್ರಾಸವಾಗಿದ್ದರು. ಹೀಗಾಗಿ ಗ್ರಾಮ ವಾಸ್ತವ್ಯದ ಮೂಲಕ ಮುಖ್ಯಮಂತ್ರಿ ಕುಮಾರಸ್ವಾಮಿ, ಉಳ್ಳಾಲದಲ್ಲಿ ಹಾಗೂ 'ಗೋವಾ ವಾಸ್ತವ್ಯ'ದ ಮೂಲಕ ಮಾಜಿ ಪ್ರಧಾನಿ ದೇವೇಗೌಡ್ರು, ಭಾರೀ ಬದಲಾವಣೆಗೆ ಮುಂದಾಗಿದ್ದಾರೆ ಅನ್ನೋ ವಿಚಾರಕ್ಕೆ ರಾಜ್ಯದ ಮಾಧ್ಯಮಗಳು ವಿಶೇಷ ಒತ್ತೇನೋ ನೀಡಿದ್ದವು.

ಈ ಕ್ಷೇತ್ರಕ್ಕೆ ಕೋಮು ದ್ವೇಷದ ಬಣ್ಣಂದಿದ್ದೇ ಬಿಜೆಪಿ ಪ್ರವೇಶದಿಂದ ಎನ್ನುವುದು ಅಲ್ಲಿಯ ಮತದಾರರಿಗೆ ಗೊತ್ತಿರುವ ಸಂಗತಿ. ಮತ್ತು ಈ ಕ್ಷೇತ್ರದಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ, ಬೀಡಿ ಉದ್ದಿಮೆ ಹಾಗೂ ಹೆಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕ ಕುಟುಂಬಗಳು ಬದುಕು ಸಾಗಿಸುತ್ತವೆ. ಆದರೆ 1991 ರಿಂದ ಕೇಂದ್ರದಲ್ಲಿದ್ದ ನರಸಿಂಹರಾವ್ ಸರ್ಕಾರ ಜಾರಿ ಮಾಡಿದ ಮತ್ತು 1997ರಿಂದ ವಾಜಪೇಯಿ ಸರ್ಕಾರ ತೀವ್ರಗೊಳಿಸಿದ ಸುಧಾರಣೆ ನೀತಿಗಳಿಂದ ಇಲ್ಲಿನ ಮೀನುಗಾರಿಕೆ ಮತ್ತು ಹೆಂಚು ಉದ್ಯಮಕ್ಕೆ ಭಾರಿ ಪೆಟ್ಟು ಬಿದ್ದಿದೆ. ಬೀಡಿ ಕಾರ್ಮಿಕರೂ ಹಲವು ತಳಮಳಗಳನ್ನೇರಿಸುತ್ತಾ ಸಂಕಷ್ಟದಲ್ಲಿದ್ದಾರೆ.

ಆದರೆ ಈ ಎರಡು ಪ್ರಶ್ನೆಗಳು ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿ(ಎಸ್)ಗಳಿಗೆ ಗಂಭೀರ ಪ್ರಶ್ನೆಗಳಾಗಿ ಕಾಡಲೇ ಇಲ್ಲ. ಮತ್ತು ಉಳ್ಳಾಲ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಆಳಕ್ಕೆ ಹೋಗಿ ವಿಶ್ಲೇಷಣೆ ಮಾಡುವ ಪ್ರಯತ್ನ ನಡೆಸಲಿಲ್ಲ.

ಕೆಲವು ಮಾಧ್ಯಮಗಳಂತೂ ಈ ಕ್ಷೇತ್ರ ಎರಡು ಬಾರಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯನ್ನು ಚುನಾಯಿಸಿದೆ ಅನ್ನುವುದನ್ನು ಬಿಟ್ಟರೆ ಬೇರಿನ್ನೇನೂ ಹೇಳಲು ಸಿದ್ದವಿರಲಿಲ್ಲ. ಇನ್ನು ಕೆಲವು ಮಾಧ್ಯಮಗಳು ಸಿಪಿಐ(ಎಂ) ಇಲ್ಲಿ ಸ್ಪರ್ಧೆಯಲ್ಲಿದೆ ಎನ್ನುವ ಅಂಶವನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚುತ್ತಿದ್ದವು. ಅಂತಹ ಕೆಲವು ಪತ್ರಿಕೆಗಳು ಇಲ್ಲಿ ಕೇವಲ ತ್ರಿಕೋನ ಸ್ಪರ್ಧೆ ಎಂಬಂತಹ ತಲೆಬರಹ ನೀಡಿ ಕೈ ತೊಳೆದುಕೊಂಡಿದ್ದವು.

ಈ ಚುನಾವಣೆಯಲ್ಲಿ ಪ್ರಮುಖವಾಗಿ ಕೆಲವು ರಾಜಕೀಯ ಪಕ್ಷಗಳು ನಾಯಕರಿಂದ ಈ ಕ್ಷೇತ್ರವನ್ನು ಕೋಮುವಾದ ವಿಭಜನೆಯ ರಾಜಕೀಯ ತಳ್ಳುವ ನಡೆಯುತ್ತಿದ್ದು ಇಂತಹ ಪ್ರಜಾತಂತ್ರ ವಿರೋಧಿ ಕ್ರಮವನ್ನು ಮಾಧ್ಯಮಗಳು ಖಂಡಿಸದಿರುವುದು ದುರದೃಷ್ಟಕರ ಸಂಗತಿ. ಆದರೆ ಮಾತ್ರ ಉಳ್ಳಾಲ ಕ್ಷೇತ್ರದ ಮತದಾರರು ಇಂತಹ ಪ್ರಯತ್ನವನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ.

ಇದು ಕಾಂಗ್ರೆಸ್ ಗೆಲುವು ಎಂಬುದಕ್ಕಿಂತ ರಾಜ್ಯದ ಬಿಜೆಪಿ ಜೆಡಿ(ಎಸ್) ಸಮ್ಮಿಶ್ರ ಸರ್ಕಾರದ ಸೋಲು ಎನ್ನಬೇಕಿತ್ತು. ಯಾಕೆಂದರೆ ಜೆಡಿ(ಎಸ್) ಎಂದರೆ ಕುಮಾರಸ್ವಾಮಿ ದೇವೇಗೌಡ ಎನ್ನುವಂತೆ ಅಷ್ಟೇ ಈಗಿರುವುದು. ಸ್ವತಃ ಕುಮಾರಸ್ವಾಮಿಯೇ ವಾರಗಟ್ಟಲೇ ಹೋಗಿ ಉಳ್ಳಾಲದಲ್ಲಿ ಪ್ರಚಾರ ನಡೆಸಿದ್ದಾರೆ. ಹಾಗಾಗಿ ಇದು ಅವರದೇ ಸೋಲು, ಮತ್ತೊಂದಡೆ ಇಡೀ ಬಿಜೆಪಿ ದಂಡೇ ಈ ಕ್ಷೇತ್ರವನ್ನು ಗೆಲ್ಲಲು ಎಲ್ಲಾ ಕಸರತ್ತು ಮಾಡಿ 20 ದಿನಗಳ ಕಾಲ ಟೆಂಟ್ ಕೂಡ ಹಾಕಿದ್ದರು. ಆದರೂ ಮತದಾರರ ಮುಂದೆ ಅವರ ಆಟ ನಡೆಯಲಿಲ್ಲ. ಈ ಬಗ್ಗೆ ಕೆಲವು ಪತ್ರಿಕೆಗಳಲ್ಲಾದರೂ ಸರಿಯಾದ ವಿಶ್ಲೇಷಣೆ ಬಂದಿರುವುದು ಸ್ವಾಗತಾರ್ಹ ಕ್ರಮವೆಂದೇ ಹೇಳಬೇಕು.

ಹ..ಹ್ಹಾ..ಹ....

ಯಶಸ್ವಿ ಸಂಸಾರದ ರಹಸ್ಯ

ಪ್ರಶ್ನೆ : ಶ್ರೀಮಾನ್ ಮಂಕಣ್ಣರವರೇ, ನಿಮ್ಮ ಮದುವೆಯಾಗಿ ಇಂದಿಗೆ 25 ವರ್ಷ ತುಂಬಿತು. ನಿಮ್ಮ ಈ ಯಶಸ್ವಿ ಸಂಸಾರದ ರಹಸ್ಯವೇನು?

ಮಂಕಣ್ಣ : ಇದರಲ್ಲಿ ರಹಸ್ಯವೇನಿಲ್ಲ. ಗಂಡ ಹೆಂಡತಿಯರ ನಡುವೆ ಸರಿಯಾಗಿ ಜವಾಬ್ದಾರಿ ಹಂಚಿಕೆ ಮಾಡ್ಕೊಂತಾ ಬಂದಿರೋದರಿಂದ ಸಂಸಾರ ರಥ ಸರಾಗವಾಗಿ ಸಾಗ್ತಾ ಬರ್‍ತಾ ಇದೆ ಅಷ್ಟೆ.

ಪ್ರಶ್ನೆ: ಏನು ಜವಾಬ್ದಾರಿ ಹಂಚಿಕೆಯಾಗಿದೆ ನಿಮ್ಮ ನಡುವೆ?

ಮಂಕಣ್ಣ : ನೋಡಿ, ಜಾಗತಿಕ ತಾಪಮಾನ ಏರಿಕೆ, ಅಣ್ವಸ್ತ್ರಗಳ ಅಪಾಯ, ವರ್ಣಭೇದ ನೀತಿ, ಜಾಗತೀಕರಣದ ದುಷ್ಪರಿಣಾಮ ಇಂತಹ ಅಂತರಾಷ್ಟ್ರೀಯ ಸಮಸ್ಯೆಗಳು, ಕೋಮುವಾದ, ಜಾತಿವಾದ ಇಂತಹ ರಾಷ್ಟ್ರೀಯ ಸಮಸ್ಯೆಗಳನ್ನು ನಾನು ನಿಭಾಯಿಸ್ತೀನಿ. ಮನೆಗೆ ರೇಷನ್ ತರೋದು, ಮಕ್ಕಳಿಗೆ ಸ್ಕೂಲ್ ಫೀಸು ಕಟ್ಟೋದು, ಮನೆ ಬಾಡಿಗೆ, ಕರೆಂಟ್ ಬಿಲ್...... ಇಂತಹ ಸಣ್ಣಪುಟ್ಟ ಸ್ಥಳೀಯ ಸಮಸ್ಯೆಗಳನ್ನು ನನ್ನ ಹೆಂಡ್ತಿ ನಿಭಾಯಿಸ್ತಾಳೆ. ಹೀಗಾಗಿ ನಮ್ಮದು ಯಶಸ್ವಿ ಸಂಸಾರ.



ಕೋಮುವಾದಿಗಳಬ್ಬರಕ್ಕೆ ಕಪಾಳ ಮೋಕ್ಷ

ಗೆದ್ದೇ ಬಿಡುತ್ತೇವೆ, ಸೋಲಿಸಿಯೇ ಬಿಡುತ್ತೇವೆ ಎಂದೆಲ್ಲಾ ಬೀಗಿ, ತಂತ್ರ-ಕುತಂತ್ರ ಮಾಡಿದವರಿಗೆ ಜನರು ಸರಿಯಾಗಿ ಏಟು ಕೊಟ್ಟಿದ್ದಾರೆ. ಈ ಫಲಿತಾಂಶದಿಂದ ಪಾಠ ಕಲಿಯಲಾದೀತೆ?

ಕಡಲ ತಡಿಯ ಸಪ್ಪಳವೀಗ ಸರಿದಿದೆ. ಕಳೆದೊಂದು ತಿಂಗಳ ಅಬ್ಬರ ಇಲ್ಲವಾಗಿದೆ. ಉಳ್ಳಾಲದ ಉಪಚುನಾವಣೆಯಲ್ಲಿ ಪ್ರಚಾರದ ಅಬ್ಬರವೇನು? ಭಾಷಣಗಳ ಜಡಿಮಳೆ ಕೊಟ್ಟ ಭರವಸೆಗಳೆಷ್ಟು? ಹಣ ಹೆಂಡದ ಹೊಳೆ ಹರಿದದ್ದು, ತಂತ್ರ ಕುತಂತ್ರಗಳ ಲೆಕ್ಕಾಚಾರ ಇಟ್ಟವರಾರು? ಚುನಾವಣಾ ಹಣಾಹಣಿಯಲ್ಲಿ ಗೆದ್ದೇಬಿಡುವೆ ವೆಂದವರು ಬೀಗಿದ್ದಾರಾದರೂ ಜನತೀರ್ಪು ನೀಡಿದ್ದು ಅತ್ಯಂತ ಸ್ಪಷ್ಟವಾಗಿ. ಅದು ಕೋಮುವಾದದ ವಿರುದ್ಧದ ತೀರ್ಪು.


ಉಳ್ಳಾಲ ವಿಧಾನಸಭಾ ಉಪಚುನಾವಣೆ ನಡೆದು ಫಲಿತಾಂಶ ಹೊರಬಿದ್ದಿದೆ. ಸಮ್ಮಿಶ್ರ ಸರಕಾರದ ಅಂಗಪಕ್ಷಗಳಾದ ಕೋಮುವಾದಿ ಭಾರತೀಯ ಜನತಾ ಪಕ್ಷ, ಸಿದ್ಧಾಂತ ರಹಿತ ಜಾತ್ಯಾತೀತ ಜನತಾದಳ ಅಬ್ಬರದ ಪ್ರಚಾರ ನಡೆಸಿದರೂ ಹಣಾಹಣಿಯಲ್ಲಿ ಸೋತು ಕಾಂಗ್ರೆಸ್ (ಐ)ನ ಯು.ಟಿ.ಖಾದರ್‌ರವರು 8,032 (46,271) ಮತಗಳ ಅಂತರದಿಂದ ಗೆದ್ದಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಎರಡು ಬಾರಿ ಚುನಾವಣಾ ಪ್ರಚಾರಕ್ಕೆ ಬಂದಿದ್ದು, ಒಂದು ಬಾರಿ ಚುನಾವಣೆ ಘೋಷಣೆಗೆ ಮುಂಚೆ ಗ್ರಾಮ ವಾಸ್ತವ್ಯ ನಾಟಕ ಹೂಡಿದ್ದರೂ, ಹಣದ ಹೊಳೆಯನ್ನೇ ಹರಿಸಿದ್ದರೂ ಅವರ ಅಭ್ಯರ್ಥಿ ಅಬೂಬಕ್ಕರ್ ನಾಟೆಕಲ್‌ಗೆ ಸಿಕ್ಕಿದ್ದು ಬರೇ 6,217 ಮತಗಳು ಕಳೆದ ಬಾರಿಗಿಂತಲೂ ಕಡಿಮೆ.

ಕೋಮುವಾದಿ ಬಿಜೆಪಿ ಅಬ್ಬರಕ್ಕೆ ಮತದಾರನ ಕಡಿವಾಣ :

ಧರ್ಮದ, ಜಾತೀಯ ಆಧಾರದಲ್ಲಿ ಮತ ಪಡೆಯುವ ತಂತ್ರ ನಡೆಸಿದ ಕೋಮುವಾದಿ ಬಿಜೆಪಿಗೆ ಉಳ್ಳಾಲದ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮತದಾರರು ಬುದ್ಧಿಕಲಿಸಿ ಅವರ ಅಬ್ಬರದ ಪ್ರಚಾರಕ್ಕೆ ಕಡಿವಾಣ ಹಾಕಿದ್ದಾರೆ. ಅದರ ಅಭ್ಯರ್ಥಿ ಚಂದ್ರಶೇಖರ ಉಚ್ಚಿಲ್‌ಗೆ ಸಿಕ್ಕಿದ್ದು 38,239 ಮತಗಳು (ಕಳೆದ ಬಾರಿಗಿಂತ ಕಡಿಮೆ). ಇವರ ಪರವಾಗಿ ಉಪಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿ ಮಂತ್ರಿಗಳಾದ ಕಟ್ಟಾ ಸುಬ್ರಹ್ಮಣ್ಯಂ, ರಾಮಚಂದ್ರಗೌಡ, ವಿ.ಎಸ್.ಆಚಾರ್ಯ, ಸಂಸದ ಅನಂತಕುಮಾರ್, ರಾಜ್ಯಾಧ್ಯಕ್ಷ, ಸಂಸದ ಸದಾನಂದಗೌಡ, ದ.ಕ, ಹೊರ ಜಿಲ್ಲೆಗಳ ಶಾಸಕರು, ಕೇರಳದ ಮುಂದಾಳುಗಳು ಇಡೀ ಕ್ಷೇತ್ರದಾದ್ಯಂತ ತಮ್ಮ ತಮ್ಮ ಬೆಂಬಲಿಗ ಕಾರ್ಯಕರ್ತರ ದಂಡಿನೊಂದಿಗೆ ಮನೆ ಮನೆ ಭೇಟಿ, ಪತ್ರಿಕಾಗೋಷ್ಠಿಗಳನ್ನು ನಡೆಸಿದರು. ಮತದಾರರಲ್ಲಿ ಭಯಭೀತಿಯನ್ನು ಮೂಡಿಸಿದರು. ಎಂ.ಎಲ್.ಸಿ ಮತ್ತು ರಾಜ್ಯ ಪ್ರ.ಕಾರ್ಯದರ್ಶಿ ಶೋಭಾ ಕಾರಂದ್ಲಾಜೆ ಇಡೀ ಕ್ಷೇತ್ರದ ಉಸ್ತುವಾರಿ ವಹಿಸಿ ಭಾರೀ ಪ್ರಚಾರ ನಡೆಸಿದರು. ಜಿಲ್ಲಾ ಉಸ್ತುವಾರಿ ಸಚಿವ ನಾಗರಾಜ ಶೆಟ್ಟಿ ಚುನಾವಣೆ ಮುಗಿಯುವತನಕ ಕ್ಷೇತ್ರದ ಉದ್ದಗಲಕ್ಕೂ ಓಡಾಡಿದ್ದೇ ಓಡಾಡಿದ್ದು. ಅವರ ಬೇಜವಾಬ್ದಾರಿ, ಅಧಿಕಾರಶಾಹಿ ವರ್ತನೆಯನ್ನು ಪ್ರದರ್ಶಿಸಿದ್ದರೂ ಚುನಾವಣಾ ಅಧಿಕಾರಿಗಳ ಕಟ್ಟುನಿಟ್ಟಿನ ನಿಷ್ಪಕ್ಷಪಾತ ಕ್ರಮ ನಿಯಮ ಇವರಿಗೆ ಬಿಸಿ ಮುಟ್ಟಿಸಿತು. ದರ್ಪ, ಅಹಂಕಾರ ಪ್ರದರ್ಶಿಸಲು ಅವಕಾಶ ಸಿಗಲಿಲ್ಲ. ಮತದಾರರಂತೂ ಕೋಮುವಾದಿ ಬಿಜೆಪಿಗೆ ತಕ್ಕ ಪಾಠ ಕಲಿಸಿ ಗೆದ್ದೇಬಿಡುತ್ತೇವೆ ಎಂಬ ಅದರ ನಾಯಕರ ವರ್ತನೆಗೆ ಉತ್ತರ ನೀಡಿದ್ದಾರೆ.

ದುಡ್ಡಿನ ಹೊಳೆ

ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಪಕ್ಷಗಳು ದುಡ್ಡಿನ ಹೊಳೆಯನ್ನೇ ಹರಿಸಿವೆ. ಅಲ್ಲಲ್ಲಿ



ಕೃಪೆ: ಪ್ರಜಾವಾಣಿ

ವ್ಯವಹಾರಸ್ಥರು ಅವರವರ ಪಕ್ಷಗಳ ಅಭ್ಯರ್ಥಿ ಪರ ಮನೆ ಮನೆ ದುಡ್ಡು ಹಂಚಿದರು. ಕಾರ್ಯಕರ್ತರನ್ನು ಕೊಂಡುಕೊಂಡರು. ಕೆಲವರಿಗಂತೂ ಒಂದು ತಿಂಗಳು ಪೂರ್ತಿ ಯಾವುದೇ ಕೆಲಸ ಬೇಕಾಗಿಲ್ಲ. ಅಪಾರ ವೆಚ್ಚದ ಬ್ಯಾನರುಗಳು ಪರವಾನಗಿ ರಹಿತವಾಗಿದ್ದುದರಿಂದ ಚುನಾವಣಾ ಅಧಿಕಾರಿಗಳು ತೆರವುಗೊಳಿಸಿದರು. ನಗರಪಾಲಿಕೆ ಆವರಣದಲ್ಲಿ ರಾಶಿ ರಾಶಿಯಾಗಿ ಬಿದ್ದವು. (ಚಾಮುಂಡೇಶ್ವರಿ) ಕ್ಷೇತ್ರದಲ್ಲಿ ಬೇರೆ ಕಡೆಗೆ ಕಡಿಮೆ ಇಲ್ಲದಂತೆ ದುಡ್ಡು ಹಂಚಿದರು.

ಗೆಲ್ಲುವ ಕುದುರೆಯ ಹಿಂದೆ

ಕಾಂಗ್ರೆಸ್ ಪರ ಮುಸ್ಲಿಂ ಲೀಗ್, ಕೆ.ಎಫ್.ಡಿ, ಸಿಪಿಐ, ಜೆಡಿ(ಎಸ್) ಭಿನ್ನಮತೀಯ ನಾಯಕ ವಸಂತ ಬಂಗೇರ ಪರ ವೇದಿಕೆಗಳು ಪ್ರಚಾರ ನಡೆಸಿದವು. 'ಜಾತ್ಯಾತೀತ' ಎನ್ನುವ ಕಾಂಗ್ರೆಸ್‌ನೊಂದಿಗೆ ಮುಸ್ಲಿಂಲೀಗ್, ಕೆ.ಎಫ್.ಡಿ ಚುನಾವಣಾ ಚಟುವಟಿಕೆಯಲ್ಲಿ ಗುರುತಿಸಿಕೊಂಡಿರು ವುದು ಭವಿಷ್ಯತ್ತಿನಲ್ಲಿ ಉಳ್ಳಾಲ ಕ್ಷೇತ್ರದ ನೆಮ್ಮದಿಗೆ ಅಪಾಯ. ಕಾಂಗ್ರೆಸ್‌ನ ನಾಯಕರು, ಕಾರ್ಯಕರ್ತರು ಅವರ ರಾಜ್ಯ ನಾಯಕರುಗಳ ಹಿಂದುಗಡೆ ಮೆರವಣಿಗೆ ಹೋಗುತ್ತಿದ್ದರೆ ಕೆ.ಎಫ್.ಡಿ (ಕರ್ನಾಟಕ ಫೋರಂ ಫಾರ್ ಡಿಗ್ನಿಟಿ) ಕಾರ್ಯಕರ್ತರು ಮನೆ ಮನೆಗೆ ಚೀಟಿ ಮುಟ್ಟಿಸುವ ಕೆಲಸ ವ್ಯವಸ್ಥಿತವಾಗಿ ಮಾಡಿದ್ದಾರೆ.

ದುಡಿಯುವ ವರ್ಗದ ರಾಜಕೀಯ

ಗುರುತಿನ ಚೀಟಿಯ ತೊಂದರೆಯಿಂದಾಗಿ ಹತ್ತು ಶೇಕಡಾ ಮತದಾರರಿಗೆ ಮತ ಚಲಾಯಿಸಲು ಅವಕಾಶ ಸಿಗಲಿಲ್ಲ. ಇದರಿಂದಾಗಿ ಪೋಲಿಂಗ್ ಕಡಿಮೆ ಆಗಿದೆ. ಎಲ್ಲಾ ಪಕ್ಷಗಳ ಮತಗಳು ಕೂಡಾ ಕಡಿಮೆ ಆಗಿದೆ. ಹಾಗಿದ್ದೂ ಸಿಪಿಐ(ಎಂ)ಗೆ 4503 ಮತಗಳು ಗಳಿಸಲು ಸಾಧ್ಯವಾಗಿವೆ. ಬಂಡವಾಳಶಾಹಿ ಪಕ್ಷಗಳ ದುಡ್ಡಿನ ಹೊಳೆಯನ್ನು ಹರಿಸುವ ರಾಜಕೀಯದ ಮಧ್ಯೆ ದುಡಿಯುವ ವರ್ಗದ ರಾಜಕೀಯ ಪ್ರಚಾರವನ್ನು ಇಡೀ ಕ್ಷೇತ್ರವ್ಯಾಪಿ ಸಮರ್ಥವಾಗಿ ನಿರ್ವಹಿಸಲಾಗಿದೆ. ಹಲವಾರು ನ್ಯೂನ್ಯತೆಗಳು ಇದ್ದಾಗ್ಯೂ ಕ್ಷೇತ್ರದ ಜ್ವಲಂತ ಸಮಸ್ಯೆಗಳ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಪಕ್ಷ ನಡೆಸಿರುವ ಹೋರಾಟದ ಪ್ರಚಾರವನ್ನು ನಡೆಸಲಾಗಿದೆ. ಅಲ್ಲಲ್ಲಿ ಸಾರ್ವಜನಿಕ ಸಭೆ, ನೂರಕ್ಕೂ ಮಿಕ್ಕಿ ಕಾರ್ನರ್ ಮೀಟಿಂಗ್, ಕರಪತ್ರ ಹಂಚಿಕೆ ಬ್ಯಾನರು, ಮನೆ ಮನೆ ಚೀಟಿ ಹಂಚುವ ಮುಖಾಂತರ ಪ್ರಚಾರ ನಡೆಸಲಾಗಿದೆ. ಸಿಪಿಐ(ಎಂ) ಮುಖಂಡರಲ್ಲದೆ ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷ ಸಂಸದ ಎಸ್.ಬಂಗಾರಪ್ಪರವರು ಸಿಪಿಐ(ಎಂ) ಅನ್ನು ಬೆಂಬಲಿಸಿ ಚುನಾವಣಾ ಭಾಷಣ ಮಾಡಿರುವುದು ಜನತೆಯ ಗಮನ ಸೆಳೆಯಿತು.

ದುಂದುವೆಚ್ಚವಿಲ್ಲದ ಪ್ರಚಾರವೈಖರಿಯನ್ನು ಮಾಧ್ಯಮಗಳು, ಚುನಾವಣಾ ಅಧಿಕಾರಿಗಳು ಕೊಂಡಾಡಿದರು. ಆದರೆ ಕೋಮುವಾದದ ವಿರುದ್ಧದ ನಮ್ಮ ಹೋರಾಟ, ಪ್ರಚಾರಗಳು ಕಾಂಗ್ರೆಸ್ಸಿಗೆ ವರದಾನ ಆಯಿತು. ಕೋಮುಗಲಭೆಯಿಂದ ತತ್ತರಿಸಿರುವ ಉಳ್ಳಾಲದ ಮತದಾರರು ಎಲ್ಲಾ ಅಬ್ಬರವನ್ನು ಆಲಿಸಿ ಯಾವುದೇ ಮುನ್ಸೂಚನೆ ನೀಡದೆ ಕೋಮುವಾದಿಗಳಿಗೆ ಮಣ್ಣು ಮುಕ್ಕಿಸಲೇಬೇಕೆಂದು ಬಿಜೆಪಿಗೆ ಒದೆತ ನೀಡಿದರು. ಸೋಲಿಸಬಲ್ಲ ಪಕ್ಷವೆಂದು ಕಾಂಗ್ರೆಯನ್ನು ಗೆಲ್ಲಿಸಿದರು. ಕೋಮುವಾದದ ವಿರುದ್ಧದ ಹೋರಾಟವು ನೇರ ಸ್ಪರ್ಧೆಗೆ ಅವಕಾಶ ನೀಡಿತು. ಇದರಿಂದಾಗಿ ಸಿಪಿಐ(ಎಂ) ಪಕ್ಷಕ್ಕೆ ಪ್ರಭಾವ ವ್ಯಾಪಕವಿದ್ದರೂ, ಅದೆಲ್ಲಾ ಮತಗಳಾಗಿ ಬೀಳಲಿಲ್ಲ ಪರಿವರ್ತನೆಯಾಗಲಿಲ್ಲ. ಆದರೆ ಮತದಾರರು ಪಕ್ಷದ ಕಾರ್ಯಕರ್ತರನ್ನು ಸ್ವಾಗತಿಸುತ್ತಿದ್ದುದು, ಆತಿಥ್ಯ ನೀಡಿ ನಮ್ಮ ವಿವರಣೆಗಳನ್ನು ಕೇಳುತ್ತಿದ್ದು, ಬೆನ್ನು ತಟ್ಟುತ್ತಿರುವುದು ದುಡಿಯುವ ವರ್ಗದ ಮುಂದಿನ ರಾಜಕೀಯ ಭವಿಷ್ಯಕ್ಕೆ ಉತ್ತಮವಾದ ಅವಕಾಶ ನೀಡಲಿದೆ. ಈ ಒಟ್ಟು ಅನುಭವದಿಂದಲೂ ಪಾಠ ಕಲಿಯಬೇಕಿದೆ. ಆ ವಿಷಯದಲ್ಲಿ ಸಿಪಿಐ(ಎಂ) ಗಂಭೀರ ಕ್ರಮ ಅನುಸರಿಸಲಿದೆ.

• ವಸಂತ ಆಚಾರಿ

ಜನರ ಆಶಯಗಳ ರಕ್ಷಣೆಯಾದೀತೆ?

ಉಳ್ಳಾಲ ಕ್ಷೇತ್ರ ಕೋಮು ಸೌಹಾರ್ದತೆಗೆ ಹೆಸರಾದುದು. ಹಿಂದೆ ಬ್ರಿಟಿಶರ ಆಕ್ರಮಣದ ವಿರುದ್ಧ ರಾಣಿ ಅಬ್ಬಕ್ಕದೇವಿ ಸಮರ ಸಾರಿದಾಗ ಆ ಪ್ರದೇಶದ ಬ್ಯಾರಿ ಮುಸ್ಲೀಮರು, ಬಿಲ್ಲವರು, ಬಂಟರು ಒಂದಾಗಿ ನಿಂತು ಶತ್ರುಗಳನ್ನು ಹಿಮ್ಮೆಟ್ಟಿಸಿದ್ದಾರೆ. ಇಂತಹ ಕೋಮುಸೌಹಾರ್ದತೆ, ಒಗ್ಗಟ್ಟು ಜಯವನ್ನೂ ತಂದುಕೊಟ್ಟಿದೆ. ವಿವಿಧ ಜನಾಂಗಗಳು ಭಾಷಿಕರೂ ವೈವಿಧ್ಯಮಯ ಸಂಸ್ಕೃತಿ ಆಚರಣೆಗಳುಳ್ಳ ಈ ಕ್ಷೇತ್ರದಲ್ಲಿ ರಾಜಕೀಯ ಅಧಿಕಾರ ಪಡೆಯಲು ಹಲವಾರು ಜನವಿಭಜಕ ಕೃತ್ಯಗಳೂ ನಡೆದಿವೆ. ಮುಖ್ಯವಾಗಿ ಈ ಉಪಚುನಾವಣೆಗಳ ಮೊದಲು 2006 ಅಕ್ಟೋಬರ್‌ನಲ್ಲಿ ನವರಾತ್ರಿ ಹಬ್ಬದ ಮೆರವಣಿಗೆಯನ್ನೇ ನೆಪವಾಗಿಸಿ ಮಂಗಳೂರು ಪರಿಸರದಲ್ಲಿ ಕೋಮುಗಲಭೆಗಳನ್ನು ವಿಶ್ವಹಿಂದೂ ಪರಿಷತ್, ಬಜರಂಗದಳ ಹಬ್ಬಿಸಿತು. ಇದು ಉಳ್ಳಾಲವನ್ನು ವ್ಯಾಪಕವಾಗಿ ದಹಿಸಿತು. ಪೊಲೀಸರೂ ಸಹ ಅಲ್ಪಸಂಖ್ಯಾತ ಮುಸ್ಲೀಂರ ಮೇಲೆ ಧಾಳಿ ನಡೆಸಿದರು.

ಅಲ್ಪಸಂಖ್ಯಾತರೂ ಹಲ್ಲೆಗೊಳಗಾಗಿ ಇಬ್ಬರು ಬಲಿಯಾದರು. ದನಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದಾರೆಂದು, ವಾಹನ ಡಿಕ್ಕಿಯೊಡೆಯಿತೆಂದು ಕುದ್ರೋಳಿಯಲ್ಲಿ ಬಜರಂಗದಳ, ಹಿಂದೂ ಯುವ ಸೇನೆ ಕಾರ್ಯಕರ್ತರು ದಾಂಧಲೆ ನಡೆಸಿ ಅದು ಉಳ್ಳಾಲದತ್ತಲೂ ವ್ಯಾಪಿಸಿತು. ಬಜ್ಪೆ ಗಲಭೆಯ ಬಿಸಿ ಇಲ್ಲಿಯೂ ಬಿತ್ತು. ಹಿಂದೂ ಸಮಾಜೋತ್ಸವವನ್ನು ಇದಕ್ಕೆ ಬಳಸಲು ಮುಂದಾದರು.

ಹೀಗೆ ಸತತವಾಗಿ ಕೋಮುಗಲಭೆ ಎಬ್ಬಿಸಿ, ತ್ವೇಷ, ದ್ವೇಷ ಹುಟ್ಟಿಸಿ, ಆಡಳಿತವನ್ನು ಬಳಸಿ ರಾಜಕೀಯ ದುರ್ಲಾಭ ಹೊಡೆಯಲು ಬಿಜೆಪಿ ಸಂಘಪರಿವಾರ ಹವಣಿಸಿತ್ತು. ಇವರ ಆಕರ್ಷಕ ಮಾತುಗಳು ದೇಶಪ್ರೇಮದ ನಾಟಕ, ಧರ್ಮ ರಕ್ಷಣೆ ಸೋಗುಗಳನ್ನು ಅರಿತು ಅನುಭವಿಸಿದ ಜನತೆ ಚುನಾವಣೆಯಲ್ಲಿ ಶಾಂತಿ, ಸೌಹಾರ್ದತೆ ಪರವಾಗಿ ಇಂತಹ ತೀರ್ಪು ನೀಡಿದ್ದು ಸಹಜವೇ ಆಗಿದೆ. ಗೆದ್ದಿರುವ ಕಾಂಗ್ರೆಸ್ ಜನರ ಆಶಯಗಳನ್ನು ರಕ್ಷಿಸೀತೆ?)

ಈ ಚುನಾವಣಾ ಪ್ರಚಾರದಲ್ಲಿ ಬಿಜೆಪಿ ಕಾಂಗ್ರೆಸ್ ಜೆಡಿ(ಎಸ್) ಪಕ್ಷಗಳಿಗೆ ಜನತೆಯ ಕ್ಷೇತ್ರದ ಪ್ರಶ್ನೆಗಳ ಕಡೆ ಗಮನವೇ ಇರಲಿಲ್ಲ. ಬಿಜೆಪಿಗೆ ಅಧಿಕಾರ ಬಿಡಲಿದ್ದಾರೆಯೇ? ಯಡಿಯೂರಪ್ಪ ಮುಖ್ಯಮಂತ್ರಿಯಾಗುವರಾ? ಇಂತಹದ್ದೇ ವಿಷಯದ ಸುತ್ತ ಮೈತ್ರಿಕೂಟದ ಭಾಗೀದಾರರು ಗಿರಕಿ ಹೊಡೆದರು. ವಿವಾದದ ಧೂಳೆಬ್ಬಿಸಿದರು. ಕಾಂಗ್ರೆಸ್ ಸಹ ಜನರ ಪ್ರಶ್ನೆಗಳು, ಕೋಮುವಾದದ ಅಪಾಯದ ಬಗ್ಗೆ ಮಾತನಾಡಲಿಲ್ಲ. ಈ ಹಿಂದೆಯೂ ಗಲಭೆ ಸಂದರ್ಭದಲ್ಲಿ ಕೋಮುವಾದಿಗಳ ವಿರುದ್ಧ ದೃಡವಾಗಿ ಹೋರಾಡಿಯೂ ಇರಲಿಲ್ಲ. ಆದ್ದರಿಂದಲೇ ತುಟಿ ಮೇಲಿನ ಮಾತನ್ನಾಗಿ ಕೋಮುವಾದದ ಬಗ್ಗೆ ಮಾತು ತೇಲಿಸಿದರು. ಈ ಬಲಪಂಥೀಯ ಪಕ್ಷಗಳ ಕಥೆ ಹೀಗಾಗಿದ್ದರೆ, ಇದಕ್ಕೆ ಭಿನ್ನವಾಗಿ ಆಕ್ಷೇತ್ರದ ಜನತೆಯ ಜ್ವಲಂತ ಪ್ರಶ್ನೆಗಳ ಬಗ್ಗೆ, ಕೋಮುವಾದದ ಅಪಾಯ, ಕರಾವಳಿ ಹಾಗೂ ಕರ್ನಾಟಕಕ್ಕೆ ಒದಗಿರುವ ಗಂಡಾಂತರಗಳ ಬಗ್ಗೆ ದುಡಿಯುವ ವರ್ಗದ ಜನರ ಒಗ್ಗಟ್ಟಿನ ಬಗ್ಗೆ ವಿವರವಾಗಿ ಮಾತನಾಡಿ ಜನಮಾನಸದಲ್ಲಿ ಕೊಂಡೊಯ್ಯುವುದು ಸಿಪಿಐ(ಎಂ) ಮಾತ್ರ.

ಬಜಾಲ್‌ನಲ್ಲಿ ಸಿಪಿಐ ಮುಖಂಡರಿಗೆ ಜನರಿಂದ ಇದಿರೇಟು

ಮಂಗಳೂರು : ಸಿಪಿಐಎಂನ ವಿರುದ್ಧ ಜನತೆಗೆ ಗೊಂದಲ ಸೃಷ್ಟಿಸುವ ಹಿನ್ನೆಲೆಯಲ್ಲಿ ಸಿಪಿಐ ಪಕ್ಷವು ಕಾಂಗ್ರೆಸ್ ಪಕ್ಷದ ಚಿಹ್ನೆಯ ಸಹಿತ ಮುದ್ರಿಸಲಾಗಿದ್ದ ಕರಪತ್ರ ಹಂಚಲಾಗುತ್ತಿದ್ದ ಸಂದರ್ಭ ಬಜಾಲ್ ಪರಿಸರದ ಮಹಿಳೆಯರು ಇದಿರೇಟು ಹಾಕಿ ಹಿಂದಕ್ಕೆ ಕಳುಹಿಸಿದ ಘಟನೆ ಮೇ 31ರಂದು ನಡೆದಿದೆ.

ಸಿಪಿಐ ಪಕ್ಷವು ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸಿಪಿಐ(ಎಂ)ನ ಅಭ್ಯರ್ಥಿ ಬಾಲಕೃಷ್ಣ ಶೆಟ್ಟಿ ವಿರುದ್ಧ ಪ್ರಚಾರ ಮಾಡುವ ತಂತ್ರಗಾರಿಕೆ ನಡೆಸಿದ್ದು, ಇದಕ್ಕನುಗುಣವಾಗಿ ಕರಪತ್ರ ಮುದ್ರಿಸಿ, ಕಾಂಗ್ರೆಸ್‌ಗೆ ಬೆಂಬಲ ಎಂದು ಹೇಳಿರುವುದೇ ಅಲ್ಲದೇ ತನ್ನ ಮೂಲ 'ಕತ್ತಿ ಮತ್ತು ತೆನೆ'ಯ ಚಿನ್ಹೆಯನ್ನು ಬಿಟ್ಟು ಕಾಂಗ್ರೆಸ್ ಚಿನ್ಹೆಯನ್ನು ಮುದ್ರಿಸಿತ್ತು. ಇದನ್ನು ಬೀಡಿ ಕಾರ್ಮಿಕರ ವಲಯದಲ್ಲಿ ಹಂಚಲು ಯತ್ನಿಸುತ್ತಿದ್ದಾಗ ಬೀಡಿ ಕಾರ್ಮಿಕ ಮಹಿಳೆಯರು ತೀವ್ರ ಪ್ರತಿರೋಧ ವ್ಯಕ್ತಪಡಿಸಿ, ಆಕ್ರೋಶದಿಂದ ವರ್ತಿಸಿದರು.

ಸಿಪಿಐಗೆ ಉಳ್ಳಾಲ ಕ್ಷೇತ್ರದಲ್ಲಿ ಮತದಾರರೇ ಇಲ್ಲ, ಸುಮ್ಮನೆ ಗೊಂದಲ ಸೃಷ್ಟಿಸಲು ಮತ್ತು ಮೊದಲೇ ಕಷ್ಟದಲ್ಲಿರುವ ಕಾರ್ಮಿಕರನ್ನು ಒಡೆಯಲು ಸಿಪಿಐ ಪ್ರಯತ್ನಿಸಿದೆ. ಮಾಲಿಕ ವರ್ಗದೊಂದಿಗೆ ಶಾಮೀಲಾಗಿ ಈ ಹಿಂದೆಯೂ ಕಾರ್ಮಿಕರನ್ನು ಅತಂತ್ರತೆಯತ್ತ ತಳ್ಳಿದ್ದ ಸಿಪಿಐ ಮತ್ತು ಅದರ ಸಂಘಟನೆಗಳು ತಾವು ದೇಶದ ಪ್ರಾಚೀನ ಕಮ್ಯೂನಿಸ್ಟ್ ಇತಿಹಾಸದ ಒಂದು ಭಾಗ ಎಂಬುದನ್ನೂ ಮರೆತಿದ್ದಾರೆ ಎಂದು ಸಿಪಿಐಎಂ ಮುಖಂಡರು ಟೀಕಿಸಿದ್ದಾರೆ.

- ಕರಾವಳಿ ಅಲೆ, ಮೇ 31, 2007

ಮಾವು ಮಾರುಕಟ್ಟೆ

ಬೆಳೆದದ್ದು ಮಾವು ಸಿಕ್ಕಿದ್ದು ಬೇವು

ರೈತರ ಹೆಸರನ್ನು ಹೇಳಿಕೊಂಡು ಅಧಿಕಾರಕ್ಕೆ ಬರುವ ಸರ್ಕಾರಗಳು ಇತಿಮಿತಿ ಇಲ್ಲದೆ ರೈತರನ್ನು ಶೋಷಿಸುತ್ತವೆ. ರೈತ ಖರೀದಿಸುವ ಬಿತ್ತನೆ ಬೀಜದಿಂದ ಹಿಡಿದು ಫಸಲನ್ನು ಮಾರಾಟ ಮಾಡುವವರೆಗೆ ಎಲ್ಲ ಹಂತದಲ್ಲಿ ನಿರಂತರ ಶೋಷಣೆಗೆ ಒಳಗಾಗುತ್ತಾರೆ. ಸರ್ಕಾರಗಳು, ಬಂಡವಾಳಶಾಹಿಗಳು, ಸಣ್ಣ ಮಟ್ಟ ಬ್ರೋಕರ್‌ಗಳು ಸೇರಿದಂತೆ ಎಲ್ಲರೂ ರೈತರನ್ನು ನಿರಂತರವಾಗಿ ಶೋಷಿಸುತ್ತಿದ್ದಾರೆ. ಎಷ್ಟೇ ಶಾಸನಗಳು, ಕಾನೂನುಗಳಿದ್ದರೂ ನಾಮಕಾವಸ್ಥೆಯಾಗಿವೆ. ರೈತರ ಹಿತ ರಕ್ಷಿಸುವಲ್ಲಿ ವಿಫಲವಾಗಿವೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಇಡೀ ಜಗತ್ತಿನಲ್ಲೇ ಮಾವಿನ ಬೆಳೆ ಮತ್ತು ಮಾರುಕಟ್ಟೆಗೆ ಖ್ಯಾತವಾಗಿದೆ. ಪ್ರತಿದಿನ ಸಾವಿರಾರು ಟನ್ ಮಾವು ದೇಶದ ವಿವಿಧ ಭಾಗಗಳಿಗೆ ರವಾನೆಯಾಗುತ್ತದೆ. ಕೋಟ್ಯಾಂತರ ರೂಪಾಯಿ ವಹಿವಾಟು ನಡೆಯುತ್ತದೆ. ವರ್ತಕರು, ಮಾರ್ವಾಡಿಗಳು ಕೊಬ್ಬಿದ ಆನೆಗಳಂತೆ ಬೆಳೆಯುತ್ತಿದ್ದಾರೆಯೇ ವಿನ ರೈತರು ಮಾತ್ರ ತನ್ನ ಅಸ್ಥಿಪಂಜರದಂತಹ ಜೀವನ ಪರಿಸ್ಥಿತಿಯಿಂದ ಹೊರಬಂದಿಲ್ಲ. ಮತಗಳ ಮೇಲಷ್ಟೆ ಕಣ್ಣಿಟ್ಟಿರುವ ಇಲ್ಲಿನ ರಾಜಕಾರಣಿಗಳು ಮಂಡಿಗಳ ದಲ್ಲಾಳಿಗಳಿಗೆ ಪರೋಕ್ಷವಾಗಿ ಬೆಂಬಲ ನೀಡುತ್ತಿದ್ದಾರೆ.

ಶ್ರೀನಿವಾಸಪುರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಇಲ್ಲದ ಕಾರಣ ಇಲ್ಲಿ ವರ್ತಕರೆ ಕಾನೂನು, ನಿಯಂತ್ರಣ, ಶಾಸನ, ನೀತಿ ಎಲ್ಲ. ಮುಕ್ತ ಹರಾಜು ಪ್ರಕ್ರಿಯೆ ಇಲ್ಲದೆ ಪ್ರತಿದಿನದ ದರ ನಿರ್ಧಾರದ ಪರಿಸ್ಥಿತಿಯೇ ಇಲ್ಲ. ವರ್ತಕರಿಗೆ ಅವರ ಸ್ಥಳಗಳಿಗೇ ಇಲ್ಲಿನ ಮಂಡಿ ಬ್ರೋಕರ್‌ಗಳು ದಾಸ್ತಾನು ರವಾನಿಸುತ್ತಾರೆ. ವರ್ತಕರು ಮಾರಾಟ ಮಾಡುವ ದರ ಬೆಳೆಗಾರರಿಗೆ ಗೌಪ್ಯವಾಗಿಯೇ ಉಳಿಯುತ್ತದೆ. ಹಾಗಾಗಿ ದಲ್ಲಾಳಿಗಳು ನಿರ್ಧರಿಸುವ ದರವೇ ಅಂತಿಮ. ಒಮ್ಮೊಮ್ಮೆ ಮಾವು ಖರೀದಿ ಮಾಡಿದಾಗ ಹೇಳುವ ದರವನ್ನೂ ದಲ್ಲಾಳಿಗಳು ನೀಡುವುದಿಲ್ಲ. ಹಾಗಿದ್ದರೂ ರೈತರು ವಿಧಿಯಿಲ್ಲದೆ ಅವರನ್ನೇ ಅವಲಂಬಿಸಬೇಕಾಗಿದೆ.

ದಲ್ಲಾಳಿಗಳೆಲ್ಲ ಒಂದಾಗಿ ದರ ನಿಗದಿಪಡಿಸಿ ಬೆಳೆಗಾರರ ಶೋಷಣೆಗೆ ಕಾರ್ಯತಂತ್ರ ರೂಪಿಸುತ್ತಾರೆ. ರೈತರು ಮಂಡಿಗೆ ತರುವ ಕಾಯಿಯಲ್ಲಿ ಶೇಕಡ 30ರಷ್ಟು ಕೀಲು ಎಂದು ತೆಗೆದು ಹಾಕಿ ಕಡಿಮೆ ದರ ನೀಡಿ ಹೆಚ್ಚಿನ ದಲ್ಲಾಳಿಗಳು ಹೆಚ್ಚಿನ ದರಕ್ಕೆ ಮಾರಾಟ ಮಾಡಿಕೊಳ್ಳುತ್ತಾರೆ.

ಈ ಸಮಸ್ಯೆ ಒಂದೆಡೆಯಾದರೆ ದಲ್ಲಾಳಿಗಳಿಂದ ಹಣ ಪಡೆಯಲು ಬೆಳೆಗಾರರು ಭಗೀರತ ಯತ್ನವನ್ನೇ ಮಾಡಬೇಕು. ಮಾವು ಮಾರಾಟ ಮಾಡಿ ಒಂದು, ಎರಡು ವರ್ಷಗಳಾದರೂ ದಲ್ಲಾಳಿಗಳು ಹಣ ನೀಡುವುದಿಲ್ಲ. ಬೆಳಿಗ್ಗೆ ಸಂಜೆ ಅವರ ಮನೆ ಬಳಿಗೆ ನಾಯಿಗಳಂತೆ ಅಲೆಯಬೇಕು. ಒಮ್ಮೊಮ್ಮೆ ಮನೆಯಲ್ಲಿದ್ದರೂ ಇಲ್ಲ ಎಂದು ಹೇಳುತ್ತಾರೆ. ಹಾಗೊಮ್ಮೆ ಈಗೊಮ್ಮೆ ಉಪ್ಪು ಮೆಣಸಿನ ಕಾಯಿಗೆ ನೀಡುವಂತೆ ಐನೂರು ಸಾವಿರ ರೂಗಳನ್ನು ಕೊಟ್ಟು ಕಳಿಸುತ್ತಾರೆ.



ಬ್ರೋಕರ್‌ಗಳ ಶೋಷಣೆ ಇಲ್ಲಿಗೆ ನಿಲ್ಲುವುದಿಲ್ಲ. ಮಂಡಿಗಳಲ್ಲಿ ಕಾರ್ಯನಿರ್ವಹಿಸುವ ಕೂಲಿಗಳನ್ನು ಟಿಂಬರ್‌ಯಾರ್ಡ್‌ನಲ್ಲಿ ಆನೆಗಳನ್ನು ದುಡಿಸುವಂತೆ ದುಡಿಸುತ್ತಾರೆ. ಅವರಿಗೆ ಊಟ, ನಿದ್ದೆ, ಸ್ನಾನ ಏನೂ ಮಾಡಲೂ ಬಿಡುವು ಇಲ್ಲದಂತೆ ಹಗಲು ರಾತ್ರಿ ದುಡಿಸುತ್ತಾರೆ. ವಿಧಿಯಿಲ್ಲದ ಬಡಪಾಯಿ ಕೂಲಿಗಳು ಬ್ರೋಕರ್‌ಗಳ ಅವ್ಯಾಚ್ಯ ನಿಂದನೆಗಳಿಗೆ ಒಳಗಾಗಬೇಕಾಗಿದೆ. ರಾತ್ರಿ ಹಗಲು ದುಡಿದರೂ ಕೇವಲ 70-80 ರೂ ಮಾತ್ರ ಕೂಲಿ ಪಡೆಯುತ್ತಿದ್ದಾರೆ. ಸೀಸನ್ ಮುಗಿದ ಮೇಲೆ ನೀಡುತ್ತೇನೆಂದು ದಲ್ಲಾಳಿ ಹೇಳಿದರೆ ಆ ಕೂಲಿ ಹಣ ಗುಳಂ ಎಂಥಲೇ ಅರ್ಥ.

ಇಲ್ಲಿ ಎಪಿಎಂಸಿ ಕಚೇರಿ ಕೇವಲ ನಾಮಕಾವಸ್ಥೆಗೆ ಮಾತ್ರ ಇದೆ. ಅಲ್ಲಿ ಇಲ್ಲಿ ಕಾಣುವ ಲಾರಿಗಳ ಮೇಲೆ ಮಾತ್ರ ಸುಂಕ ವಿಧಿಸುತ್ತಾರೆ. ಆದರೆ ತೋಟಗಳಿಂದ ನೇರವಾಗಿ ಮಾರಾಟವಾಗುವ ಮಾವನ್ನು ನಿಯಂತ್ರಿಸುವಲ್ಲಿ ವಿಫಲರಾಗಿದ್ದಾರೆ. ತೋಟದಿಂದ ನೇರವಾಗಿ ಮಾರಾಟ ಮಾಡುವ ಹಕ್ಕು ರೈತರಿಗೆ ಮಾತ್ರ ಇದ್ದರೂ ಇದು ದಲ್ಲಾಳಿಗಳಗೆ ಮಾತ್ರ ಉಪಯೋಗವಾಗುತ್ತಿದೆ. ಇದಕ್ಕೆ ಎಪಿಎಂಸಿ ಅಧಿಕಾರಿಗಳ ಕುಮ್ಮಕ್ಕು ಇಲ್ಲ ಎಂದಿಲ್ಲ. ತೋಟದಿಂದ ಸಾಗಾಣೆಯಾಗುವ ಮಾವು ರೈತರದೊ, ದಲ್ಲಾಳಿಗಳದೊ ತಿಳಿಯಲು ಸಾಧ್ಯವಿಲ್ಲ ಎಂಬ ಬೇಜವಾಬ್ದಾರಿ ಉತ್ತರವನ್ನು ಕಾರ್ಯದರ್ಶಿ ನೀಡುತ್ತಾರೆ. ರೈತರು ಮತ್ತು ವರ್ತಕರ ನಡುವಿನ ವ್ಯತ್ಯಾಸ ತಿಳಿಯದಿರುವ ಅಧಿಕಾರಿಗಳಿಂದ ರೈತರಿಗೆ ನ್ಯಾಯವಾದರೂ ದಕ್ಕಲು ಸಾಧ್ಯವೆ.

ಟೊಮಾಟೊ ಬೆಳೆಯುವ ರೈತರ ಪರಿಸ್ಥಿತಿಯಂತೂ ಗಾಣಕ್ಕೆ ಸಿಲುಕಿದ ಕಬ್ಬಿನಂತಾಗಿದೆ. ಅಪಾರ ಪ್ರಮಾಣದ ಬಂಡವಾಳ ತೊಡಗಿಸಿ ವರ್ತಕರ ಹೊಟ್ಟೆ ತುಂಬುವಂತಾಗಿದೆ. ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಫಸಲನ್ನು ಕೋಲಾರ, ಚೆನ್ನೈ, ಹೈದರಾಬಾದ್, ಕೊಯಮತ್ತೂರು, ಬೆಂಗಳೂರು ಮತ್ತಿತರೆಡೆ ಸಾಗಿಸುವಂತಾಗಿದೆ. ಒಮ್ಮೊಮ್ಮೆ ಸಾಗಾಣಿಕೆ ವೆಚ್ಚ ಭರಿಸಲು ಫಸಲು ಮಾರಾಟದಿಂದ ಬಂದ ಹಣಕ್ಕೆ ತನ್ನ ಜೇಬಿನಿಂದ ಹಣ ತೆಗೆದು ಸೇರಿಸಬೇಕಾಗುತ್ತದೆ. ಪ್ರತಿ ಬಾಕ್ಸ್‌ನ ಸಾಗಾಣಿಕೆಗೆ 10-40ರೂ. ವರೆಗೆ ಬಾಡಿಗೆ ನೀಡಬೇಕಾಗುತ್ತದೆ.

ಎಪಿಎಂಸಿ ಮಾರುಕಟ್ಟೆ ಸ್ಥಾಪನೆಗೆ 1998ರಲ್ಲೇ ಭೂಮಿ ಖರೀದಿಸಿದ್ದರೂ ಇದುವರೆಗೂ ಮಾರುಕಟ್ಟೆ ಸ್ಥಾಪನೆಯಾಗಿಲ್ಲ. ಈ ಮಾರುಕಟ್ಟೆ ಸ್ಥಾಪಿಸ ಬಾರದೆಂಬುದರಲ್ಲಿ ಖಾಸಗಿ ಮಂಡಿಗಳ ದಲ್ಲಾಳಿಗಳದೇ ಪ್ರಮುಖ ಪಾತ್ರ. ಈ ಕುರಿತು ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳಿಗೆ ಗೊತ್ತಿದ್ದರೂ ತುಟಿಬಿಚ್ಚಿಲ್ಲ. ಮತಗಳ ಮೇಲೆ ಕಣ್ಣಿಟ್ಟಿರುವ ಹಾಲಿ, ಮಾಜಿ ಶಾಸಕರು ಇದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಈ ಪ್ರಾಂಗಣದಲ್ಲಿ 114 ನಿವೇಶಗಳನ್ನು ವಿಂಗಡಿಸಿದ್ದು, ಹಣ ಕಟ್ಟಿದ ಸುಮಾರು 71 ಟ್ರೇಡರ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಪ್ರಭಾವಿ ರಾಜಕಾರಣಿಗಳ ಚೇಲಾಗಳಾದ ದಲ್ಲಾಳಿಗಳು ಹೆಚ್ಚಿನ ನಿವೇಶನಗಳನ್ನು ಲಪಟಾಯಿಸಲು ಮನೆಮಂದಿ ಹೆಸರಿನಲ್ಲೆಲ್ಲಾ ಪಡೆದಿದ್ದಾರೆ. ಇದನ್ನು ವಿರೋಧಿಸಿ ಇತರ ಕೆಲವು ದಲ್ಲಾಳಿಗಳು ನ್ಯಾಯಾಲಯ ಮೊರೆಹೊಕ್ಕಿರುವು ದರಿಂದ ಮಾರುಕಟ್ಟೆ ಸ್ಥಾಪನೆಯ ರೈತರ ಕನಸು ಕನಸಾಗಿಯೇ ಉಳಿದಿದೆ.

ಮಾರುಕಟ್ಟೆ ಸ್ಥಾಪನೆಗೆ ಕರ್ನಾಟಕ ಪ್ರಾಂತ ರೈತಸಂಘ ಎರಡು ಮೂರು ವರ್ಷಗಳಿಂದ ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸ್ಥಾಪಿಸಿರುವ ಮಾವು ಬೆಳೆಗಾರರ ಹೋರಾಟ ಸಮಿತಿ ನೇತೃತ್ವದಲ್ಲಿ ಹಲವಾರು ಹೋರಾಟ ಗಳನ್ನು ಸಂಘಟಿಸಲಾಗಿದೆ. ಹೋರಾಟ ಗಳನ್ನು ತೀವ್ರಗೊಳಿಸಿ ಅಧಿಕಾರಿಗಳು, ರಾಜಕಾರಣಿಗಳ ಮೇಲೆ ಒತ್ತಡ ಹೇರದೆ ಮಾರುಕಟ್ಟೆ ಸ್ಥಾಪನೆ ಸಾಧ್ಯವಿಲ್ಲ. ರೈತ ಸಂಘದ ಮುಖಂಡರಾದ ಪಿ.ಆರ್.ಸೂರ್ಯ ನಾರಾಯಣ ದೃಢವಾಗಿ ಹೇಳುತ್ತಾರೆ.

ಶ್ರೀನಿವಾಸಪುರ ತಾಲೂಕು ಗಂಭೀರ ಸಮಸ್ಯೆಗಳಿಗೆ ಸಿಲುಕಿದ್ದು ರೈತರ ಜೀವನಮಟ್ಟ ಅಭಿವೃದ್ದಿಗೆ ಯಾವುದೇ ಮೂಲ ಸೌಕರ್ಯಗಳಿಲ್ಲ ಎನ್ನುತ್ತಾರೆ ಸೂರಿ. ಶೀತಲ ಕೇಂದ್ರ, ತಂಪುಪಾನೀಯ ಕಾರ್ಖಾನೆ, ಸಾರಿಗೆ ವ್ಯವಸ್ಥೆ ಮತ್ತಿತರ ಸೌಲಭ್ಯಗಳನ್ನು ಸರ್ಕಾರ ಒದಗಿಸದಿದ್ದಲ್ಲಿ ರೈತರ ಪರಿಸ್ಥಿತಿಯಲ್ಲಿ ಯಾವುದೇ ಸುಧಾರಣೆ ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಡುತ್ತಾರೆ. ರಾಜ್ಯ ಸರ್ಕಾರ ದ ಪ್ರಸ್ತಾವಿತ ಎಪಿಎಂಸಿ ಕಾಯ್ದೆ ಸಹ ರೈತರ ಹಿತ ರಕ್ಷಿಸುವಲ್ಲಿ ವಿಫಲವಾಗಲಿದೆ. ಈ ಮಸೂದೆ ಜಾರಿಯಿಂದ ರೈತರು ಬೃಹತ್ ಬಂಡವಾಳಗಾರರ ಕೃಪಾಕಟಾಕ್ಷಕ್ಕೆ ಒಳಗಾಗಬೇಕಿದೆ ಎಂದೂ ಅವರು ಆತಂಕ ವ್ಯಕ್ತಪಡಿಸಿದ್ದಾರೆ.

● ಅಪ್ಪು

ದೇಶಪ್ರೇಮಿ ಜನೋತ್ಸವ

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೆ ವರ್ಷ ಮತ್ತು ಹುತಾತ್ಮ ಭಗತ್‌ಸಿಂಗ್‌ರ ಜನ್ಮಶತಾಬ್ದಿ ಆಚರಣೆಗೆ ಕೋಲಾರ ಜಿಲ್ಲೆಯಲ್ಲಿ ಸರ್ವ ಸಿದ್ಧತೆ ನಡೆಸಲಾಗಿದೆ. ದೇಶಪ್ರೇಮಿ ಜನೋತ್ಸವ ಶೀರ್ಷಿಕೆಯಡಿ ಈ ಆಚರಣೆ ನಾಲ್ಕು ತಿಂಗಳ ಕಾಲ ಅದ್ದೂರಿಯಾಗಿ ನಡೆಯುತ್ತಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದ ಜನತೆ ಸಾಮ್ರಾಜ್ಯಶಾಹಿಗಳ ವಿರುದ್ಧ ತೋರಿದ ದಿಟ್ಟ ಸಾಹಸ ಮತ್ತು ಐಕ್ಯತೆಯನ್ನು ಜಿಲ್ಲೆಯ ಪ್ರತಿಯೊಂದು ಹಳ್ಳಿ, ಮನೆಗೂ ತಲುಪಿಸುವುದು, ವಿಚಾರ ಸಂಕಿರಣ, ಬೀದಿನಾಟಕ, ಹಾಡು, ಜಾಥ, ಹಲವಾರು ಪುಸ್ತಕ ಬಿಡುಗಡೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

ಈ ಬೃಹತ್ ದೇಶಪ್ರೇಮಿ ಜನೋತ್ಸವ ಯಶಸ್ವಿಗೆ ಸಿಪಿಐಎಂ ಪಕ್ಷದ ಪಾಲಿಟ್‌ಬ್ಯೋರೊ ಸದಸ್ಯರಾದ ವರದರಾಜನ್ ಏಪ್ರಿಲ್ 4ರಂದು ಚಾಲನೆ ನೀಡಿದರು. ಅಂದು ಚಿಂತಾಮಣಿಯಲ್ಲಿ ಸುಮಾರು 350 ಜನರ ಸಮಾವೇಶ ಉದ್ಘಾಟಿಸಿದರು ಕಾರ್ಯಕ್ರಮ ಯಶಸ್ವಿಗೊಳಿಸಲು ಮುಖಂಡರು ಮತ್ತು ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬಿದರು. ಜನೋತ್ಸವದ ಉದ್ದೇಶ ಮತ್ತು ಗುರಿಗಳನ್ನು ವಿವರಿಸಿದರು.

ಜಿಲ್ಲೆಯಾದ್ಯಂತ ಜಾಥಾ ಸಂಘಟಿಸುವ ಯೋಜನೆ ಭಾಗವಾಗಿ ಗುಡಿಬಂಡೆ ತಾಲ್ಲೂಕಿನ ಎಲ್ಲೋಡುನಲ್ಲಿ ಮೇ 22-ಜೂನ್ 2ರವರೆಗೆ ಕಲಾವಿದರ ತರಬೇತಿ ಶಿಬಿರವನ್ನು ಏರ್ಪಡಿಸಲಾಯಿತು. ಸಿಪಿಎಂ ಪಕ್ಷದ ಕಲಾವಿದರು ಮತ್ತು ಆಂಧ್ರಪ್ರದೇಶದಿಂದ ಬಂದಿದ್ದ ಕಲಾವಿದರು ಹಾಡು, ನಾಟಕ, ರೂಪಕಗಳ ತರಬೇತಿ ನೀಡಿದರು.

ಜಿಲ್ಲೆಯಾದ್ಯಂತ ಆಕರ್ಷಕ ಗೋಡೆ ಬರಹಗಳನ್ನು ಬರೆಸಲಾಗುತ್ತಿದ್ದು, ಸುಮಾರು 20-30ಮಂದಿ ಹಗಲುರಾತ್ರಿ ದುಡಿಯುತ್ತಿದ್ದಾರೆ. ವೈವಿಧ್ಯಮಯ ಬಣ್ಣಗಳಲ್ಲಿ ಚಿತ್ರಗಳನ್ನು ಬಿಡಿಸಲಾಗುತ್ತಿದೆ. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಸ್ಫೂರ್ತಿ ತುಂಬುವ ಚಿತ್ರಗಳು, ಘೋಷಣೆಗಳನ್ನು ಬರೆದಿದ್ದು ನೋಡುಗರಲ್ಲಿ ಸ್ಫೂರ್ತಿ ತುಂಬುತ್ತಿವೆ. ಸ್ವಾತಂತ್ರ್ಯದ ದುರ್ಬಳಕೆ, ದುಡಿವ ಜನತೆಯ ಶೋಷಣೆ, ಜಾತಿ, ಧರ್ಮಾಂಧತೆ, ಕೋಮುವಾದಿ ಕುತಂತ್ರಗಳನ್ನು ಗೋಡೆ ಬರಹಗಳ ಮೂಲಕ ಚಿತ್ರಿಸಲಾಗುತ್ತಿದೆ. ಜಿಲ್ಲೆಯಾದ್ಯಂತ ಆಕರ್ಷಕ ಫ್ಲೆಕ್ಸ್‌ಗಳನ್ನು ಕಟ್ಟುವ ಸಿದ್ಧತೆ ಭರದಿಂದ ನಡೆಯುತ್ತಿದೆ.

ಸಿಪಿಐಎಂ ಪಕ್ಷದ ಬಾಗೆಪಲ್ಲಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಸಂಚಾಲಕರಾಗಿರುವ ಆಚರಣಾ ಸಮಿತಿ ರಚಿಸಲಾಗಿದ್ದು, ಎಸ್‌ಎಫ್‌ಐ ಅಖಿಲಭಾರತ ಸಮಿತಿ ಸದಸ್ಯರಾದ ಎಂ.ಪಿ.ಮುನಿವೆಂಕಟಪ್ಪ, ಡಿವೈಎಫ್‌ಐ ಮುಖಂಡರಾದ ಚನ್ನರಾಯಪ್ಪ, ಜನವಾದಿ ಮಹಿಳಾ ಸಂಘಟನೆ ಮುಖಂಡರಾದ ವಿ.ಗೀತಾ ಸಹ ಸಂಚಾಲಕರಾಗಿದ್ದಾರೆ. ಜಿಲ್ಲೆಯ ಸಾಹಿತಿಗಳು, ಬುದ್ಧಿಜೀವಿಗಳು, ಪ್ರಗತಿಪರರು, ಶಿಕ್ಷಕರು, ಬರಹಗಾರರನ್ನು ಈ ಜನೋತ್ಸವದಲ್ಲಿ ಪಾಲ್ಗೊಳಿಸಿಕೊಳ್ಳಲು ಎಲ್ಲ ತಯಾರಿಗಳನ್ನು ನಡೆಸಲಾಗಿದೆ. ಉಪನ್ಯಾಸಕರ ಸಮಿತಿಯನ್ನು ರಚಿಸಲಾಗಿದೆ.

ಈಗಾಗಲೆ ಎಂಟು ತಾಲೂಕುಗಳಲ್ಲಿ ತಾಲೂಕು ಮಟ್ಟದ ಆಚರಣಾ ಸಮಿತಿಗಳನ್ನು ರಚಿಸಲಾಗಿದ್ದು ಉಳಿದ ತಾಲುಕುಗಳಲ್ಲಿ ಸಮಾವೇಶ, ಸಮಿತಿ ರಚಿಸುವ ಎಲ್ಲ ತಯಾರಿ ನಡೆಸಲಾಗಿದೆ. ಜೂನ್ 14ರಂದು ಕೋಲಾರ ನಗರದ ಚೆನ್ನಯ್ಯ ರಂಗಮಂದಿರದಲ್ಲಿ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಜನೋತ್ಸವನ್ನು ಉದ್ಘಾಟಿಸಲಿದ್ದಾರೆ. ಹಲವಾರು ಪ್ರಗತಿಪರರು, ಚಿಂತಕರು, ಸಂಶೋಧಕರು ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ರಾಜಸ್ತಾನದಲ್ಲಿ ಬಿಜೆಪಿಯ ಜಾತಿವಾದಿ ರಾಜಕೀಯ

ಇಪ್ಪತ್ತಾರು ಜೀವಗಳ ಬಲಿ

ರಾಜಸ್ತಾನದಲ್ಲಿ ಕಳೆದ ವಾರ ನಡೆದ ಹಿಂಸಾಚಾರದಲ್ಲಿ ಒಟ್ಟು 26 ಜನ ಅಸು ನೀಗಿದ್ದಾರೆ; 21 ಜನ ಪೋಲೀಸ್ ಗೋಳೀಬಾರಿನಲ್ಲಿ ಸತ್ತರೆ, 5 ಮಂದಿ ನಂತರ ನಡೆದ ಜಾತಿ ಗಲಭೆಗಳಿಗೆ ಬಲಿಯಾಗಿದ್ದಾರೆ. ರಾಜ್ಯದಲ್ಲಿ 8 ಶೇಕಡಾದಷ್ಟಿರುವ ಗುಜ್ಜರ್ ಸಮುದಾಯ ತಮ್ಮನ್ನು ಪರಿಶಿಷ್ಟ ಬುಡಕಟ್ಟು (ಎಸ್.ಟಿ.) ಪಟ್ಟಿಗೆ ಸೇರಿಸಲಾಗುವುದು ಎಂಬ ಬಿಜೆಪಿಯ ಚುನಾವಣಾ ಭರವಸೆಯನ್ನು ನೆರವೇರಿಸಬೇಕೆಂದು ಒತ್ತಾಯಿಸಿ ಆರಂಭಿಸಿದ ಚಳುವಳಿ ವಸುಂಧರಾ ರಾಜೇ ಸರಕಾರದ ಅನುಚಿತ ವರ್ತನೆ ಮತ್ತು ಅದರ ಪೋಲೀಸ್ ಅತಿರೇಕದಿಂದಾಗಿ ಹಿಂಸಾರೂಪ ಪಡೆಯಿತು.

1984 ರಿಂದಲೂ ಗುಜ್ಜರ್ ಗಳು ತಮ್ಮನ್ನು ಎಸ್ ಟಿ ಪಟ್ಟಿಗೆ ಸೇರಿಸಬೇಕು ಎಂದು ಕೇಳುತ್ತಿದ್ದಾರೆ. ಆಗಿನ ಶಿವಚರಣ್ ಮಾಥುರ್ ಸರಕಾರ ಇದನ್ನು ಪರಿಶೀಲಿಸಿ ಸಾಧ್ಯವಿಲ್ಲ ಎಂದಿತು. ನಂತರವೂ ಈ ಒತ್ತಾಯ ಮತೆ-ಮತ್ತೆ ಬರುತ್ತಿತ್ತು. ಈ ನಡುವೆ ಕೇಂದ್ರದಲ್ಲಿದ್ದ ವಾಜಪೇಯಿ ಸರಕಾರ ಜಾಟ್ ಜಾತಿಯವರನ್ನು ಸಂತುಷ್ಟಗೊಳಿಸಲು ಅವರನ್ನು ಒ.ಬಿ.ಸಿ. ಪಟ್ಟಿಯಲ್ಲಿ ಸೇರಿಸಿತು. ಈಗ ಒ.ಬಿ.ಸಿ. ಕೋಟಾದಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ ಪ್ರಬಲರಾದ ಜಾಟ್ ಸಮುದಾಯದೊಂದಿಗೆ ಸ್ಪರ್ಧಿಸಬೇಕಾಗಿ ಬಂದ ಗುಜ್ಜರ್‌ಗಳು ತಮ್ಮ ಜಾತಿಯಲ್ಲಿ ಒಬ್ಬನೇ ಒಬ್ಬ ಐಎಎಸ್ ಅಧಿಕಾರಿಯಿಲ್ಲ, ಹೆಚ್ಚಿನವರು ದನ ಮೇಯಿಸಿಕೊಂಡೇ ಜೀವನ ಸಾಗಿಸುತ್ತಿದ್ದಾರೆ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿಯೂ ಹಿಂದುಳಿದಿದ್ದಾರೆ, ಆದ್ದರಿಂದ ತಮ್ಮನ್ನು ಎಸ್.ಟಿ. ಪಟ್ಟಿಯಲ್ಲಿ ಸೇರಿಸಬೇಕು ಎಂಬ ಬೇಡಿಕೆಯನ್ನು ಮತ್ತೆ ಎತ್ತಿದರು.

ವಸುಂಧರ ಓಲೈಕೆ ರಾಜಕೀಯ

ಕಳೆದ 2003ರ ವಿಧಾನ ಸಭಾ ಚುನಾವಣೆಗಳಲ್ಲಿ ವಸುಂಧರಾ ರಾಜೇ 'ನಾನು ರಜಪೂತರಿಗೆ ಮಗಳು, ಜಾಟರ ಸೊಸೆ ಹಾಗೂ ಗುಜ್ಜರರಿಗೆ ಸಂಬಂಧಿ' ಎಂದು ಹೇಳುತ್ತಾ ಜಾತಿ ಆಧಾರದಲ್ಲಿ ಪ್ರಚಾರ ಮಾಡುತ್ತಾ ಗುಜ್ಜರ್ ಗಳ ಈ ದೀರ್ಘ ಕಾಲದ ಬೇಡಿಕೆಯನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದರು. ಆಕೆಯ ತಂತ್ರ ಫಲಿಸಿತು. ಬಿಜೆಪಿ 120



ಸ್ಥಾನಗಳನ್ನು ಗಳಿಸಿತು, 28 ಮೀಸಲು ಕ್ಷೇತ್ರಗಳಲ್ಲಿ ಜಯಗಳಿಸಿತು. ಹಿಂದೆಂದೂ ಅದಕ್ಕೆ ಇಷ್ಟೊಂದು ಎಸ್.ಟಿ. ಸ್ಥಾನಗಳು ದಕ್ಕಿರಲಿಲ್ಲ. ಆಯ್ಕೆಯಾದ ಎಂಟು ಗುಜ್ಜರ್ ಶಾಸಕರಲ್ಲಿ 6 ಬಿಜೆಪಿಯವರು.

ಆದರೆ ಈ ಫಲವುಂಡ ನಂತರ ವಸುಂಧರಾ ರಾಜೇಗೆ ತನ್ನ ಭರವಸೆಯನ್ನು ಈಡೇರಿಸಬೆಕು ಎಂದೆನಿಸಿದಂತಿಲ್ಲ. ಗುಜ್ಜರ್‌ಗಳಿಗಿಂತ ಪ್ರಬಲರಾದ, ಆಗಲೇ ಎಸ್.ಟಿ. ಪಟ್ಟಿಯಲ್ಲಿರುವ ಮೀನ ಸಮುದಾಯವನ್ನು ಓಲೈಸಲು ಈ ಭರವಸೆಯನ್ನು ಮರೆತುಬಿಡುವುದೇ ವಾಸಿ ಎಂದು ಅವರು ಬಗೆದಿರಬೆಕು ಎಂಬುದು ರಾಜಕೀಯ ವೀಕ್ಷಕರ ಅಭಿಪ್ರಾಯ. ಆದರೆ ಗುಜ್ಜರ್ ಮುಖಂಡರೂ



ಭರವಸೆ ಪಡೆದು ಮೂರೂವರೆ ವರ್ಷಗಳಾದರೂ ಸುಮ್ಮನಿರುವಂತಿರಲಿಲ್ಲ. ಗುಜ್ಜರ್ ಸಮುದಾಯ ಕೇವಲ ರಾಜಸ್ತಾನಕ್ಕಷ್ಟೇ ಸೀಮಿತವಾಗಿಲ್ಲ, ಪಕ್ಕದ ಹರ್ಯಾಣ, ದಿಲ್ಲಿ ಮತ್ತು ಉತ್ತರಪ್ರದೇಶದಲ್ಲೂ ಇದ್ದಾರೆ. ಅಖಿಲ ಭಾರತ ಗುಜ್ಜರ್ ಸಭಾ ರಾಷ್ಟ್ರೀಯ ಬುಡಕಟ್ಟು ಆಯೋಗದ ಬಳಿ ಹೋಗಿ ತಮ್ಮನ್ನು ಎಸ್.ಟಿ. ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಸರ್ವೆ ನಡೆಸಬೇಕು ಎಂದು ಕೇಳಿತು. ಆಯೋಗ ರಾಜಸ್ತಾನ ರಾಜ್ಯ ಸರಕಾರಕ್ಕೆ ಪತ್ರ ಬರೆಯಿತು. ವಸುಂಧರಾ ರಾಜೆ ಸರಕಾರ ಆರು ಮಂತ್ರಿಗಳಿದ್ದ ಸಮಿತಿಯನ್ನೇನೋ ರಚಿಸಿತು. ಆದರೆ ಮೂರು ಬಾರಿ ಸಭೆ ಸೇರಿದ ಸಮಿತಿಯಿಂದ ಯಾವ ಶಿಫಾರಸೂ ಬರಲಿಲ್ಲ.

ಪೊಲೀಸರ ಅತಿರೇಕ

ಕ್ರುದ್ಧರಾದ ಗುಜ್ಜರರು ಚಳುವಳಿಗಿಳಿದರು. ಈ ಹಿಂದೆ ರೈತರ ಚಳುವಳಿಯ ವೇಳೆ, ಇತರ ಚಳುವಳಿಗಳ ವೇಳೆ ವರ್ತಿಸಿದಂತೆ ಬಿಜೆಪಿ ಸರಕಾರದ ಪೋಲೀಸರು ಅತಿರೇಕದಿಂದ ವರ್ತಿಸಿದರು. ಬುಂಡಿ ಮತ್ತು ದೌಸಾದಲ್ಲಿ ಗೋಳೀಬಾರ್ ನಡೆಯಿತು. ನಂತರ ಸವಾಯಿ ಮಾಧೋಪುರ್ ಜಿಲ್ಲೆಯ ಬೊಲಿವ್‌ನಲ್ಲೂ ಗೋಳಿಬಾರ್ ನಡೆಯಿತು, ಸಾವಿರಾರು ಜನ ಗುಜ್ಜರ್‌ಗಳು ಬೀದಿಗಿಳಿದರು, ಹೆದ್ದಾರಿಗಳನ್ನು ಅಡ್ಡಗಟ್ಟಿದರು. ಬಿಜೆಪಿ ಸರಕಾರದ ಸಮಯಸಾಧಕ ರಾಜಕೀಯ ಮತ್ತು ಅದಕ್ಷ ನಿರ್ವಹಣೆಯಿಂದಾಗಿ ಚಳುವಳಿ ರಾಜ್ಯವ್ಯಾಪಿಯಾಯಿತು, ನೆರೆ ರಾಜ್ಯಗಳಿಗೂ ಹರಡಬಹುದೆಂಬ ಭೀತಿಯೂ ಉಂಟಾಯಿತು. ಬಿಜೆಪಿಯ ಶಾಸಕರು ರಾಜಿನಾಮೆಯ ಬೆದರಿಕೆ ಹಾಕಿದರು.

ಜಾತಿ ಸಂಘರ್ಷದ ಸ್ವರೂಪ

ಗುಜ್ಜರ್ ಚಳುವಳಿ ಹಳ್ಳಿ-ಹಳ್ಳಿ ತಲುಪಲಾರಂಭಿಸಿದಂತೆ ಈಗ ರಾಜ್ಯದ ಎಸ್.ಟಿ. ಪಟ್ಟಿಯಲ್ಲಿ 53.5 ಶೇಕಡಾದಷ್ಟಿರುವ ಮೀನ ಸಮುದಾಯದವರೊಡನೆ ಮುಖಾಮುಖಿಯಾಯಿತು. ಚಳುವಳಿ ಜಾತಿ ಸಂಘರ್ಷದ ರೂಪ ಪಡೆಯಲಾರಂಭಿಸಿತು. ಇದಕ್ಕೆ 5 ಜನ ಬಲಿಯಾದರು. ಮೀನ ಜಾತಿಯ ಶಾಸಕರು, ಮಂತ್ರಿಗಳೂ ಇದರಲ್ಲಿ ಹೇಗೆ ಹಿಂದೆ ಬೀಳಲು ಸಾಧ್ಯ? ವಸುಂಧರಾ ರಾಜೇ ಸರಕಾರ ತನ್ನ ಜಾತಿ ರಾಜಕೀಯದ ಮತ್ತು ಅದಕ್ಷತೆಯ ಬಲೆಯಲ್ಲಿ ತಾನೇ ಸಿಲುಕಿಕೊಂಡಿತು.


ರಾಜ್ಯವ್ಯಾಪಿ ಹಿಂಸಾಚಾರಗಳ ನಡುವೆ ಹಲವು ಸುತ್ತುಗಳಲ್ಲಿ ಮಾತುಕತೆ ನಡೆದವು. ಸದ್ಯಕ್ಕೆ ಒಂದು ರಾಜಿಸೂತ್ರ ಬಂದಿರುವಂತಿದೆ. ಗುಜ್ಜರ್ ಸಮುದಾಯದ ಬೇಡಿಕೆಯನ್ನು ಪರಿಶೀಲಿಸಲು ಹೈಕೋರ್ಟ್ ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸುವ ಭರವಸೆಗೆ ಸದ್ಯ ಒಪ್ಪಲಾಗಿದೆ. ಸದ್ಯಕ್ಕೆ ಚಳುವಳಿ, ಜಾತಿ ಕಲಹಗಳು ನಿಂತಿವೆ. ಅಪಸ್ವರಗಳೂ ಇವೆ. ಆದರೆ ಈ ಪ್ರಕ್ರಿಯೆಯಲ್ಲಿ ಬಿಜೆಪಿಯ ನಿಜ ಸ್ವರೂಪ ಬಯಲಾಗಿದೆ.

ಅದು ಅಧಿಕಾರ ಗಿಟ್ಟಿಸಲು ಕೋಮುವಾದ ಮಾತ್ರವಲ್ಲ, ಜಾತಿವಾದಕ್ಕೆ ಮೊರೆ ಹೋಗಲೂ ಹೇಸುವುದಿಲ್ಲ. ನಂದಿಗ್ರಾಮದಲ್ಲಿ ಪಶ್ಚಿಮ ಬಂಗಾಳ ಸರಕಾರ ತನ್ನ ಚುನಾವಣಾ ಭರವಸೆಯನ್ನು ಈಡೇರಿಸಲು ಮುಂದಾದಾಗ ಪಟ್ಟಭದ್ರರು ನಡೆಸಿದ ಪಿತೂರಿಗಳಲ್ಲಿ ಪೋಲೀಸ್ ಗೋಳೀಬಾರ್ ನಡೆದಾಗ ಬೊಬ್ಬೆ ಎಬ್ಬಿಸಿದ, ಎಡರಂಗ ಸರಕಾರವನ್ನು ವಜಾ ಮಾಡಬೇಕು ಎಂದು ಹಾರಾಡಿದ ಬಿಜೆಪಿ ಯ ಕೇಂದ್ರ ಮುಖಂಡರು ತಮ್ಮ ಆಳ್ವಿಕೆಯ ರಾಜ್ಯದಲ್ಲಿ ತಮ್ಮದೇ ಚುನಾವಣೆ ಭರವಸೆ ಈಡೇರಿಸದೆ, ಅದನ್ನು ಕೇಳಿದಾಗ ಪೋಲೀಸ್ ದಮನ ನಡೆಸಿ 26 ಜನರ ಸಾವಿಗೆ ಕಾರಣವಾದಾಗ ತುಟಿಪಿಟಕ್ಕೆನ್ನದೆ ಕೂತು ತಮ್ಮ ಗೋಸುಂಬೆತನವನ್ನು ಪ್ರದರ್ಶಿಸಿದ್ದಾರೆ ಎಂಬುದು ರಾಜಕೀಯ ವೀಕ್ಷಕರ ಅಭಿಪ್ರಾಯ.

ಸಿಪಿಐ(ಎಂ) ಪಿಬಿ ಯಿಂದ ಅಚ್ಯುತಾನಂದನ್, ಪಿನರಾಯಿ ವಿಜಯನ್ ಅಮಾನತು

ಸಿಪಿಐ(ಎಂ) ಪಕ್ಷದ ಅತ್ಯುನ್ನತ ಸಮಿತಿಯಾಗಿರುವ ಪೊಲಿಟ್ ಬ್ಯೂರೋ ಸದಸ್ಯರಾಗಿರುವ ಕಾಂ:ಪಿಣರಾಯಿ ವಿಜಯನ್ ಹಾಗೂ ಕಾಂ: ವಿ.ಎಸ್. ಅಚ್ಯುತನಂದನ್ ರವರು ಮಾಧ್ಯಮಗಳ ಎದುರು ಮಾಡಿದ ಟೀಕೆ ಟಿಪ್ಪಣಿಗಳನ್ನು ಕುರಿತು ಚರ್ಚಿಸಿ, ಇಂತಹ ಬಹಿರಂಗ ಹೇಳಿಕೆಗಳನ್ನು ಮಾಡಿದ ಅವರಿಬ್ಬರನ್ನು ಪಿ.ಬಿ. ಸದಸ್ಯತ್ವದಿಂದ ಸಸ್ಪೆಂಡ್ ಮಾಡಲು ಸಭೆಯಲ್ಲಿ ನಿರ್ಧರಿಸಿದೆ.

ಹಿರಿಯ ನಾಯಕರಿಬ್ಬರೂ ಪಕ್ಷದ ವಿಧಿ ವಿಧಾನಗಳನ್ನು ನಿರ್ದೇಶನಗಳನ್ನು ಉಲ್ಲಂಘಿಸಿದ್ದಾರೆ. ಪೊಲಿಟ್ ಬ್ಯೂರೋ ಹಾಗೂ ಕೇಂದ್ರ ಸಮಿತಿಗಳ ನಿರ್ದೇಶನಗಳನ್ನು, ಬದಿಗೊತ್ತಿ ಭಿನ್ನಾಭಿಪ್ರಾಯಗಳನ್ನು ಸಾರ್ವಜನಿಕವಾಗಿ



ಪ್ರಕಟಿಸಿದ್ದಾರೆ. ಈ ವರ್ತನೆಯನ್ನು ತೀವ್ರವಾಗಿ ಪರಿಗಣಿಸಿರುವ ಪಿ.ಬಿ.ಯು ಇಬ್ಬರನ್ನು ಅಮಾನತುಗೊಳಿಸುವುದಾಗಿ ನಿರ್ಧರಿಸಿತು.ಈ ವಿಷಯವನ್ನು ಮುಂದಿನ ಕೇಂದ್ರ ಸಮಿತಿಯ ಪರಿಗಣನೆಗೆ ಇಡಲಾಗುವುದು, ಪ್ರಸ್ತುತವಾಗಿ ಈಗ ಪಕ್ಷದಲ್ಲಿರುವ ಜವಾಬ್ದಾರಿಗಳನ್ನು ಮುಂದುವರೆಸಲಿದ್ದಾರೆ ಎಂದು ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ್‌ಕಾರಟ್ ತಿಳಿಸಿದ್ದಾರೆ.

ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರವು ಒಂದು ವರುಷವನ್ನು ಪೂರೈಸಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಲವಾರು ಗಮನಾರ್ಹ ಕ್ರಮಗಳನ್ನು ವಹಿಸಿದೆ. ವಲಯಗಳ ಪುನಶ್ಚೇತನ, ಬೆಲೆ ಏರಿಕೆ ನಿಯಂತ್ರಣಕ್ಕೆ ಕ್ರಮ, ಸ್ಮಾರ್ಟ್ ಸಿಟಿ ಯೋಜನೆ ಒಪ್ಪಂದ ಹಲವು ಮಹತ್ವದ ಕ್ರಮಗಳ ಮೂಲಕ ಈ ಸರ್ಕಾರ ಜನಪ್ರಿಯತೆ ಗಳಿಸಿದೆ.

ಇಲ್ಲಿ ಅಕ್ಷರವೆಂಬುದು ಬಿಕರಿಗಿದೆ. ಶಿಕ್ಷಣವೆಂಬುದು ಸುಲಿಗೆಯಾಗಿದೆ. ವಿದ್ಯೆಗೆ ಆದ್ಯತೆ ಎಲ್ಲಿದೆ?

ಡೊನೇಷನ್

ಶಿಕ್ಷಣ ಮಾಫಿಯಾದ ಹಗಲು ದರೋಡೆ



ವಂತಿಗೆ ಕಟ್ಟಲಾಗದೆ ಮೈಗೆ ಬೆಂಕಿ ಹಚ್ಚಿಕೊಂಡ ವಿಜಯಲಕ್ಷ್ಮಿ

ಪ್ರಸ್ತುತ ಶಿಕ್ಷಣ ಪರಿಸ್ಥಿತಿ ಅದರಲ್ಲೂ ಶಿಕ್ಷಣದ ವ್ಯಾಪಾರೀಕರಣ ಬಡ ವಿದ್ಯಾರ್ಥಿ - ಪೋಷಕರನ್ನು ನಿರ್ದಯವಾಗಿ ಬಲಿತೆಗೆದುಕೊಳ್ಳುತ್ತಿದೆ ಎಂಬುದಕ್ಕೆ ವಿದ್ಯಾರ್ಥಿಗಳ ಆತ್ಮಹತ್ಯೆಗಳೇ ಸಾಕ್ಷಿ. ಎಲ್ಲರಂತೆ ತಾನು ಕೂಡ ಓದಬೇಕೆಂಬ ಹಂಬಲ, ಹೊಂಗನಸು ಹೊಂದಿದ್ದ ದ್ವಿತೀಯ ಪಿ.ಯು.ಸಿ. ಓದುತ್ತಿದ್ದ ಬೆಂಗಳೂರಿನ ಶ್ರೀರಾಮಪುರದ ವಿದ್ಯಾರ್ಥಿನಿ ವಿಜಯಲಕ್ಷ್ಮಿಯ ಬಡ ಕುಟುಂಬ 8 ಸಾವಿರವನ್ನು ದ್ವಿತೀಯ ಪಿ.ಯು.ಸಿ. ಪ್ರವೇಶ ಶುಲ್ಕಕ್ಕೆ ಕಟ್ಟಲಾಗದೆ ಸೀಮೆಎಣ್ಣೆ ಸುರಿದು ಕೊಂಡು ಆತ್ಮಹತ್ಯೆ ಮಾಡಿಕೊಂಡ ದಾರುಣ ಘಟನೆ ಶಿಕ್ಷಣ ವ್ಯಾಪಾರೀಕರಣಕ್ಕೆ ಹಿಡಿದ ಕೈಗನ್ನಡಿಯಾಗಿದೆ. ನತದೃಷ್ಟ ವಿಜಯಲಕ್ಷ್ಮಿ ಓದುತ್ತಿದ್ದ ಪದವಿ ಪೂರ್ವ ಕಾಲೇಜು ಮೈಸೂರು ಜಿಲ್ಲೆಯ ಸುತ್ತೂರು ದೇಶೀಕೇಂದ್ರ ಜಗದ್ಗುರು (ಜೆ.ಎಸ್.ಎಸ್) ಮಹಾಸ್ವಾಮಿಗಳ ಮಠದಡಿಯಲ್ಲಿ ಬೆಂಗಳೂರು ನಗರ ರಾಜಾಜಿನಗರದಲ್ಲಿ ತಲೆಎತ್ತಿ ನಿಂತಿರುವ ಎಸ್.ಜೆ.ಆರ್.ಸಿ. ಪದವಿಪೂರ್ವ ಕಾಲೇಜು, ಹಣ ಲೂಟಿ ಹೊಡೆಯಲೆಂದೇ ನಾಯಿ ಕೊಡೆಗಳಂತೆ ಬೆಳೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿ ಪೋಷಕರನ್ನು ಶೋಷಿಸುವ ಪರಿಯನ್ನು ಹೆಚ್ಚು ವಿವರಿಸುವ ಅಗತ್ಯವಿಲ್ಲ. ಜೊತೆಗೆ ಯಾವ ಯಾವ ಖಾಸಗಿ ಶಿಕ್ಷಣ ಸಂಸ್ಥೆಗಳು ಎಷ್ಟೆಷ್ಟು ವಂತಿಗೆ



ವಸೂಲಿ ಮಾಡುತ್ತಾರೆಂದು ಊಹಿಸಲು ಅಸಾಧ್ಯವಾದಷ್ಟು ಡೋನೇಷನ್ ವಸೂಲಿ ಮಾಡುವ ದಂಧೆಗೆ ಇಳಿದಿವೆ. ಪ್ರಾಥಮಿಕ ಶಿಕ್ಷಣದ ಹಂತದಲ್ಲೇ 10 ಸಾವಿರ ದಿಂದ ಲಕ್ಷಾಂತರ ರೂ.ಗಳ ಡೋನೇಷನ್ ವಸೂಲಿ ದಂಧೆಗೆ ಇಳಿದಿವೆ. ಇಂತಹ ದಂಧೆಗಳಿಗೆ ಸರ್ಕಾರಗಳ ಕಾನೂನು ಕಟ್ಟಳೆಗಳಿಲ್ಲವೇ? ಇವರನ್ನು ನಿಯಂತ್ರಿಸುವ ಜವಾಬ್ದಾರಿ ಸರ್ಕಾರಕ್ಕೆ ಇಲ್ಲವೇ? ಎಂಬ ಆಕ್ರೋಶ ಪೋಷಕರದ್ದು. ಬೇಲಿಯೇ ಎದ್ದು ಹೊಲವನ್ನು ಮೇಯುವಂತಹ ಸ್ಥಿತಿಯಂತೆ ಸರ್ಕಾರದ ಶಿಕ್ಷಣದ ನೀತಿಗಳಾಗಿವೆ.

ಶೈಕ್ಷಣಿಕ ಮೌಲ್ಯ ಕುಸಿತ

ಆಳುವ ಸರ್ಕಾರಗಳ ಹೊಣೆ ಗೇಡಿತನ ಹಾಗೂ ಜಾಗತೀಕರಣದ ಪರಿಣಾಮವಾಗಿ ಶಿಕ್ಷಣ ಖಾಸಗೀಕರಣದ ಹಿನ್ನೆಲೆಯಲ್ಲಿ ಇಂದು ಶೈಕ್ಷಣಿಕ ಮೌಲ್ಯ ಕುಸಿಯುತ್ತಿದೆ. ಪ್ರಸಕ್ತ ಜಾಗತಿಕ ಮಟ್ಟದಲ್ಲಿನ ವಿಜ್ಞಾನ-ತಂತ್ರಜ್ಞಾನದ ಜೊತೆಗೆ ದೇಶದ ಸಾಮಾಜಿಕ, ಆರ್ಥಿಕ, ವಾಸ್ತವಗಳ ಆಧಾರದಲ್ಲಿ ಪಠ್ಯ ಕ್ರಮಗಳು, ಪ್ರವೇಶ ನೀತಿಗಳು, ಪರೀಕ್ಷಾ ಪದ್ಧತಿಗಳು ರೂಪಿತವಾಗದೇ ಕೇವಲ ನೆನಪಿನ ಶಕ್ತಿಯೇ ಮಾನದಂಡ, ಪ್ರತಿಭೆ ಎಂದು ಬಿಂಬಿತವಾಗುವುದು ಒಂದು ಕಡೆಯಾದರೆ ಇನ್ನೊಂದೆಡೆ ಹಣ ವಿದ್ದರೆ ಯಾವ ಹಂತದ ಸರ್ಟಿಫಿಕೇಟ್ ಪಡೆಯುವಂತಹ ಭ್ರಷ್ಟತೆಯ ರೂಪವಾಗಿ ಇಂದು ಶಿಕ್ಷಣ ಕ್ಷೇತ್ರ ತಲೆ ಎತ್ತಿ ನಿಂತಿದೆ. ಪ್ರಾಥಮಿಕ ಶಾಲೆಯಿಂದ ಹಿಡಿದು ಉನ್ನತ ಶಿಕ್ಷಣದ ಹಂತವರೆಗೆ ಹಣಕ್ಕೆ ಶಿಕ್ಷಣವನ್ನು ಮಾರುವ ದಂಧೆ ವ್ಯಾಪಕವಾಗಿದೆ.

ಗುಣಮಟ್ಟದ ಶಿಕ್ಷಣವನ್ನು ಕಾಯ್ದು ಜಾರಿಗೆ ತರಲು ಅಸ್ತಿತ್ವದಲ್ಲಿರುವ ಶೈಕ್ಷಣಿಕ ನೀತಿ ನಿರೂಪಕ ಸಂಸ್ಥೆಗಳು ಹಲ್ಲು ಕಿತ್ತ ಹಾವಿನಂತಾಗಿವೆ. ಒಂದು ಉದಾಹರಣೆ ಎಂದರೆ. ಸಮಾಜದ ಪ್ರಮುಖ ಕ್ಷೇತ್ರವಾದ ಮನುಷ್ಯನ ಆರೋಗ್ಯಕ್ಕೆ ಸಂಬಂಧಪಟ್ಟ ಶಿಕ್ಷಣ ನರ್ಸಿಂಗ್ ಶಿಕ್ಷಣ. ಈ ಕ್ಷೇತ್ರದಲ್ಲಿ ಬಿ.ಎಸ್ಸಿ ನರ್ಸಿಂಗ್ ಕಾಲೇಜುಗಳು ರಾಜ್ಯದಲ್ಲಿ 385 ಇದ್ದು ಒಂದೊಂದು ಕಾಲೇಜಿನಲ್ಲಿ ಕನಿಷ್ಠ 5-6ಜನ ಎಸ್ಸಿ ನರ್ಸಿಂಗ್ ಪದವೀಧರರಾದ ಉಪನ್ಯಾಸಕರಿರಬೇಕು. ಆದರೆ ನಮ್ಮ ಕರ್ನಾಟಕ ನರ್ಸಿಂಗ್ ಕೌನ್ಸಿಲ್(ಕೆ.ಎನ್.ಸಿ) ನಲ್ಲಿ ನೊಂದಾಯಿತರಾದವರು ಕೇವಲ 400 ಜನ ಎಂಎಸ್ಸಿ., ಪದವೀಧರರು ಮಾತ್ರ. ಇವರಲ್ಲಿ 200 ಕ್ಕಿಂತ ಹೆಚ್ಚು ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಉಳಿದ 200

ಬಿ. ರಾಜಶೇಖರಮೂರ್ತಿ

ಪದವೀದರರು ಕೇವಲ 200 ಆದರೆ 380 ಕಾಲೇಜ್‌ಗಳಿರುವುದು. ಈ ಕಾಲೇಜುಗಳಲ್ಲಿ ಕನಿಷ್ಠ ಪ್ರಾಂಶುಪಾಲರುಗಳೂ ಕೂಡ ಎಂ.ಎಸ್ಸಿ, ಮಾಡಿರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಗುಣಮಟ್ಟದ ಶಿಕ್ಷಣವೆಲ್ಲಿರಲು ಸಾಧ್ಯ.

ಕೇಂದ್ರದ ಯುಪಿಎ ಸರ್ಕಾರ ತಾನು ಅಧಿಕಾರದ ಚುಕ್ಕಾಣಿ ಹಿಡಿಯುವ ಸಂದರ್ಭದಲ್ಲಿ ಯಾವೊಬ್ಬ ವಿದ್ಯಾರ್ಥಿ ಆರ್ಥಿಕ ಸಂಕಷ್ಟದಿಂದ ಅವನ ವಿದ್ಯಾಭ್ಯಾಸ ಕುಂಠಿತವಾಗದಂತೆ ನೋಡಿಕೊಳ್ಳತ್ತೇವೆಂದು ವಚನ ನೀಡಿತ್ತು. ವಚನದ ಆಧಾರದಲ್ಲೇ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ)ದಲ್ಲಿ ಕನಿಷ್ಟ ಶೇ.6 ರಷ್ಟನ್ನು ಶಿಕ್ಷಣ ಮೀಸಲಿಡಬೇಕೆಂದು ವಿದ್ಯಾರ್ಥಿ ಚಳುವಳಿ ಒತ್ತಾಯಿಸುತ್ತಿದೆ. ಅದಕ್ಕೆ ಎಡಪಕ್ಷಗಳ ಬೆಂಬಲ ನೀಡುತ್ತಿವೆ. ಆದರೆ ಮೂಗಿಗೆ ತುಪ್ಪ ಸವರುವ ನೀತಿಯಂತೆ ಸರ್ಕಾರ ಶಿಕ್ಷಣಕ್ಕೆ ಹೆಚ್ಚಳ ಮಾಡಿರುವ ಬಜೆಟ್ ತೀರಾ ಅತ್ಯಲ್ಪ. ಮೊದಲು ಬಜೆಟ್‌ನಲ್ಲಿ 4.2 ಇದ್ದದ್ದನ್ನು 4.7 ಕ್ಕೆ ಏರಿಸಿದೆ. 'ಶಿಕ್ಷಣ ಹಕ್ಕು ಕಾಯಿದೆ 2005' ಕೇಂದ್ರದಲ್ಲಿ ಜಾರಿಗೆ ತರದೆ ರಾಜ್ಯ ಸರ್ಕಾರಗಳಿಗೆ ವರ್ಗಾಯಿಸುವ ಮುಖಾಂತರ ಶಿಕ್ಷಣ ವ್ಯಾಪಾರೀಕರಣಕ್ಕೆ ಇನ್ನಷ್ಟು ಎಡೆಮಾಡಿದೆ. ಶಿಕ್ಷಣ ಕ್ಷೇತ್ರಕ್ಕೆ ವಿದೇಶಿ ನೇರ ಬಂಡವಾಳ, ಖಾಸಗಿ, ವಿದೇಶಿ ವಿ.ವಿ.ಗಳಿಗೆ ಆದ್ಯತೆ ನೀಡುವ ಮೂಲಕ ದೇಶದ ಬೌದ್ಧಿಕ ಸಾರ್ವಭೌಮತ್ವದ ನಾಶಕ್ಕೆ ಎಡೆಮಾಡಿಕೊಟ್ಟಿದೆ. ದುಡಿಯುವ ಜನ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತ ಬಂಡವಾಳಶಾಹಿಗಳು ಶ್ರೀಮಂತರ ಏಜೆಂಟರಾಗಿ ವರ್ತಿಸುವ ಕೇಂದ್ರ ಸರ್ಕಾರ ಶೇ.80 ಕ್ಕಿಂತ ಹೆಚ್ಚಿರುವ ಬಡ-ಮಧ್ಯಮ ವರ್ಗದ ಜನತೆಯ ಆಶೋತ್ತರಗಳಲ್ಲಿ ಒಂದಾದ ಶಿಕ್ಷಣ ಪಡೆಯುವ ಹಕ್ಕಿನ ಅವಕಾಶವನ್ನು ದೊರಕಿಸಿಕೊಡುವ ಲಕ್ಷಣಗಳು ಕಾಣುತ್ತಿಲ್ಲ. ಬದಲಾಗಿ ಕೇವಲ ಶ್ರೀಮಂತರಿಗಷ್ಟೇ ಶಿಕ್ಷಣ ಮೀಸಲು ಉಂಟಾಗುತ್ತಿದೆ.

ವೃತ್ತಿ ಶಿಕ್ಷಣ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಚಿನ್ನದ ಮೊಟ್ಟೆಯಿಡುವ ಕೋಳಿಗಳು

ಈಗ ನಮ್ಮ ರಾಜ್ಯದಲ್ಲಿ ಎರಡಕ್ಕೆ ಮಾತ್ರ ಗಗನಕ್ಕೇರುತಿರುವ ಬೆಲೆ. ಒಂದು ಬೆಂಗಳೂರು ಸೇರಿದಂತೆ ನಗರ ಕೇಂದ್ರಿತ ಪ್ರದೇಶಗಳ ಭೂಮಿ ಬೆಲೆ ಏರಿಕೆ, ಇನ್ನೊಂದು ಶಿಕ್ಷಣ ಮಾರಾಟ ಮಾಡುವ ಶಿಕ್ಷಣ ಸಂಸ್ಥೆಗಳ ಬೆಲೆ ಏರಿಕೆ. ಅದರಲ್ಲೂ ವೃತ್ತಿ ಶಿಕ್ಷಣ ಕೋರ್ಸ್‌ಗಳಾದ ವೈದ್ಯಕೀಯ, ಇಂಜಿನಿಯರಿಂಗ್, ಬಿಸಿನೆಸ್ ಮ್ಯಾನೇಜ್‌ಮೆಂಟ್ (ಬಿ.ಬಿ.ಎಂ), ಕಂಪ್ಯೂಟರ್ ಸೈಯಿನ್ಸ್, ಹೋಟೆಲ್ ಮ್ಯಾನೇಜ್‌ಮೆಂಟ್, ಮೈಕ್ರೋ ಬಯಾಲಜಿ, ಬಯೋಟೆಕ್ನಾಲಜಿ, ಕಾನೂನು ಶಿಕ್ಷಣ, ಬಿ.ಎಡ್.

ಡೋನೇಷನ್ ಕಡಿಮೆ ತಗೊಳ್ಳಿ ಅಂದ್ರೆ ಸೀಟು ಇಲ್ಲ ಅಂತಾರಾರೆ

"ನನ್ನ ಮಗಳನ್ನು 1ನೇ ತರಗತಿಗೆ ಇಂಗ್ಲೀಷ್ ಮಿಡಿಯಂ ಶಾಲೆಗೆ ಸೇರಿಸಿದ್ದೀನಿ. ತಿಂಗಳಿಗೆ 3000 ರೂಪಾಯಿ ಫೀಸು ಕೇಳುತ್ತಾರೆ. ಈಗ 30 ಸಾವಿರ ಡೋನೇಷನ್ ಕೊಟ್ಟಿದ್ದೀವಿ. ನನಗೆ ಭಯ ಆಗುತ್ತಿದೆ. 1ನೇ ತರಗತಿಗೆ ಇಷ್ಟಾದರೆ ಮುಂದೆ ಇವಳ ವಿದ್ಯಾಭ್ಯಾಸ ಮಾಡಿಸೋದು ಹೇಗಂತ, ನನ್ನ ಸಂಬಳ ಪೂರ್ತಿ ಮನೆ ಖರ್ಚಿಗೆ ಆಗುತ್ತದೆ. ನನ್ನ ಹೆಂಡ್ತಿ ಸಂಬಳ ನನ್ನ ಒಬ್ಬಳೇ ಮಗಳ ವಿದ್ಯಾಭ್ಯಾಸಕ್ಕೆ ಸಾಕುವುದಿಲ್ಲ. ಇಷ್ಟೊಂದು ಡೋನೇಷನ್ ತೆಗೆದುಕೊಂಡ್ರೆ ನಮ್ಮಂತಹ ಮಧ್ಯಮ ವರ್ಗದ ಜನರ ಗತಿ ಏನು? ಯಾಕೆ ಇಷ್ಟು ? ಸ್ವಲ್ಪ ಕಡಿಮೆ ತೆಗೆದುಕೊಳ್ಳಿ ಅಂದ್ರೆ ಸೀಟೇ ಇಲ್ಲ ಅನ್ನುತ್ತಾರೆ. ಬೆಂಗಳೂರಿನಲ್ಲಿ ವಿಪರೀತ ಟ್ರಾಫಿಕ್. ಮನೆಹತ್ತಿರ ಇರೋ ಶಾಲೆಗೆ ಸೇರ್ಸಬೇಕು. ನಮಗೆ ನಿಜವಾಗಲು ದಿಗಿಲು ಆಗ್ತಾ ಇದೆ. ರಾಜ್ಯ ಸರ್ಕಾರ ಈ ಬಗ್ಗೆ ಸಿರಿಯಸ್ ಇಲ್ಲ. ಹೀಗಾಗಿ ಪೋಷಕರು ಒಗ್ಗಟ್ಟಾಗಿ ಡೋನೇಷನ್ ವಿರುದ್ಧ ಹೋರಾಡಬೇಕು".



ಹರೀಶ್, ಕಂಪ್ಯೂಟರ್ ಇಂಜಿನಿಯರ್

ಡೊನೇಷನ್ ಹಾವಳಿ ಕಾನೂನು ಏನನ್ನುತ್ತದೆ ?

ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಲಾಸಿಫಿಕೇಷನ್, ರೆಗ್ಯುಲೇಶನ್ ಮತ್ತು ಪ್ರಸ್ಕ್ರೀಪೇಶನ್ ಕರಿಕ್ಯುಲಾ ಮುಂತಾದ) ನಿಯಮಗಳ (ರೂಲ್ಸ್) 1995ರ ಅಡಿಯಲ್ಲಿ ಮಾಡಿದ ನಿಯಮಗಳು 28.10.1999ರಲ್ಲಿ ಜಾರಿಗೆ ಬಂದಿದೆ. ನಿಯಮಗಳಲ್ಲಿ ಪ್ರಮುಖವಾಗಿ ರೂಲ್ಸ್ ನಂ.10(2)-ಟರ್ಮ್ ಫೀ, ಟ್ಯೂಷನ್ ಫೀ, ವಿಶೇಷ ಡೆವೆಲಪ್‌ಮೆಂಟ್ (ಡೋನೇಷನ್) ವಂತಿಗೆ ಫೀ ಮುಂತಾದ ಯಾವುದೇ ಇರಲಿ ಸರ್ಕಾರ ನಿಗದಿ ಪಡಿಸಿದ್ದನ್ನೇ ಶಾಲಾ-ಕಾಲೇಜುಗಳು ಸ್ವೀಕರಿಸಬೇಕು. ಅದರಂತೆ ರೂಲ್ಸ್ ನಂ.10(3) ಸಿ ವಿಶೇಷ ಅಭಿವೃದ್ಧಿ ವಂತಿಗೆ (ಡೋನೇಷನ್) ಶುಲ್ಕವನ್ನು ಪ್ರತಿವರ್ಷ ಅನುದಾನಿತ ಶಿಕ್ಷಣ ಸಂಸ್ಥೆಗಳು ರೂ.500 ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳು ರೂ.600 ಸ್ವೀಕರಿಸಬಹುದು. ಇದಕ್ಕೆ ರಸೀದಿ ನೀಡಬೇಕು. ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಪೋಷಕರ ಮತ್ತು ಶಿಕ್ಷಕರ ಸಮಿತಿ ಶೈಕ್ಷಣಿಕ ವರ್ಷದ ಆರಂಭದ 30 ದಿವಸಗಳೊಳಗೆ ಸಭೆ ನಡೆಸಬೇಕು. ಮೀಸಲಾತಿಯನ್ನು ಜಾರಿಗೆ ತರಬೇಕು. ಪ್ರವೇಶ ಪ್ರಕ್ರಿಯೆ, ಶುಲ್ಕ ಇತ್ಯಾದಿ ಎಲ್ಲವನ್ನು ಫಲಕ ಪಟ್ಟಿಗಳಲ್ಲಿ ಹಚ್ಚಿ ಎಲ್ಲರಿಗೂ ಗೊತ್ತಾಗುವಂತಾಗಬೇಕು. ಅದರಲ್ಲೂ ಪ್ರಾಥಮಿಕ ಶಿಕ್ಷಣ ಪ್ರವೇಶಕ್ಕೆ (ಅಡ್ಮಿಷನ್) ಯಾವುದೇ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಪಾಲಕರ ಸಂದರ್ಶನ ಮತ್ತು ಪ್ರದೇಶ ಪರೀಕ್ಷೆಗಳನ್ನು ಮಾಡಬಾರದು. ಇಂತಹ ಹಲವಾರು ನಿಯಮಗಳನ್ನು ಪಾಲಿಸದೆ ಇದ್ದಲ್ಲಿ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಆಥಾರಿಟಿಯವರ ಗಮನಕ್ಕೆ ತರುವುದು. ಈ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿ, ಜಿಲ್ಲಾ ಡಿ.ಡಿ.ಪಿ.ಐ. ಕಾರ್ಯದರ್ಶಿಗಳಿರುತ್ತಾರೆ ಮತ್ತು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ, ಪಿ.ಯು.ಸಿ.ಯ ಉಪನಿರ್ದೇಶಕರು, ಜಿಲ್ಲಾ ಮುಖ್ಯ ಇಂಜಿನಿಯರ್, ಪೋಷಕರ ಸೇರಿದಂತೆ ಸದಸ್ಯರಿರುತ್ತಾರೆ. ಈ ಸಮಿತಿಗೆ ದೂರನ್ನು ವಿದ್ಯಾರ್ಥಿ ಪೋಷಕರು ಕೊಡಬಹುದು. ಈ ಸಮಿತಿ ವಿಚಾರಣೆ ಮಾಡಿ ನಿರ್ಣಯಕೊಡಲು ಹಕ್ಕು ಇದೆ. ವಿಪರ್ಯಾಸವೇನೆಂದರೆ ಈ ಸಮಿತಿಗಳು ಸಭೆ ಸೇರುವುದಿರಲಿ, ಡೋನೇಷನ್ ಹಾವಳಿ ಇನ್ನಿತರ ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿ ಪೋಷಕರು ದೂರುಗಳನ್ನು ನೀಡಬಹುದೆಂಬುದರ ಬಗ್ಗೆಯೇ ಅರಿವು ಯಾರಿಗೂ ಇಲ್ಲದಂತೆ ಈ ಕಾನೂನೆಲ್ಲ ಕೇವಲ ಪುಸ್ತಕದಲ್ಲಿ ಮಾತ್ರ ಜಾರಿಯಲ್ಲಿದೆ.

ಈ ಕಾನೂನಿನ ಆಧಾರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಜರುಗಿಸುವ ಜವಾಬ್ದಾರಿಯನ್ನು ಹೊಂದಿರುವ ಸರ್ಕಾರಕ್ಕೆ ಮೊದಲಿಗೆ ಇಚ್ಛಾಶಕ್ತಿಯೇ ಇಲ್ಲ. ಪ್ರಸಕ್ತ ವರ್ಷದ ಪ್ರವೇಶಕ್ಕೆ ಸಂಬಂಧಿಸಿದಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ಜನವರಿ-ಫೆಬ್ರವರಿ ತಿಂಗಳಿನಲ್ಲೇ ಪ್ರವೇಶ ಪ್ರಕ್ರಿಯೆ, ಡೋನೇಷನ್ ಇತ್ಯಾದಿ ದಂಧೆಗಳನ್ನು ಮುಗಿಸಿರುತ್ತವೆ. ಕಳ್ಳ ಮನೆಗೆ ಕನ್ನ ಹಾಕಿ ದೋಚಿದ ನಂತರ ಮನೆಗೆ ಕಾವಲುಗಾರನನ್ನು ಹಾಕಿದಂತೆ ಪ್ರಸಕ್ತ ವರ್ಷದಲ್ಲಿ ಮೇ 29,2007 ರಂದು ಡೋನೇಷನ್ ಹಾವಳಿ ಬಗ್ಗೆ ಮಾಹಿತಿ ಇದ್ದರೆ ತಾಲ್ಲೂಕು, ಜಿಲ್ಲಾ ಶಿಕ್ಷಣಾಧಿಕಾರಿಗಳ ಗಮನಕ್ಕೆ, ತರುವುದೆಂಬ ಕಾಟಚಾರದ ಆದೇಶವನ್ನೇ ಶಿಕ್ಷಣ ಇಲಾಖೆ ಹೊರಡಿಸಿದೆ.

ಶಿಕ್ಷಣರಂಗದ ಮೇಲೆ ವಿಶೇಷ ಕಾಳಜಿ ಇದೆಯೆಂಬ ಗೋಸುಂಬೆತನವನ್ನು ಪ್ರದರ್ಶಿಸುವ ಪ್ರಾಥಮಿಕ ಶಿಕ್ಷಣ ಸಚಿವರಾದ ಬಸವರಾಜ ಹೊರಟ್ಟಿಯವರ ಶಿಕ್ಷಣ ಸಂಸ್ಥೆಗಳೇ ಡೋನೇಷನ್ ವಸೂಲಿ ಮಾಡುತ್ತಿರುವಾಗ ಬೇರೆ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸುವ ನೈತಿಕ ಶಕ್ತಿ ಇವರಿಗೆಲ್ಲಿಂದ ಬರಬೇಕು.

ಡಿಎಡ್, ನರ್ಸಿಂಗ್, ಐಟಿಐ ಪಾಲಿಟೆಕ್ನಿಕ್ ಒಟ್ಟಾರೆ ವೃತ್ತಿ ಪರ ಕೋರ್ಸುಗಳಿಗೆ ಇನ್ನೆಲ್ಲಿಲ್ಲದ ರೇಟುಗಳು. ನಮ್ಮ ರಾಜ್ಯದಲ್ಲಿ ಕೆಲ ಸ್ವಾಯತ್ತ ಕಾಲೇಜುಗಳಲ್ಲಂತೂ ಫಲಿತಾಂಶ ಹೊರ ಬೀಳುವ ಮೊದಲೇ ಎಲ್ಲಾ ಸೀಟುಗಳು. ಅರ್ಜಿ ಫಾರಂಗಳೇ ದೊರೆಯುವುದಿಲ್ಲ. ಇಲ್ಲಿ ನೀವು ಮೀಸಲಾತಿ, ಮೆರಿಟ್, ಅದು-ಇದು ರಾಗ ತೆಗೆದರೆ ಪೋಲಿಸ್, ಅಥವಾ ಗೂಂಡಾಗಳ ಕೈಯಲ್ಲಿ ಒದೆ ಗ್ಯಾರಂಟಿ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.15-20 ರಷ್ಟು ಜನ ಮಾತ್ರ ಆರ್ಥಿಕ-ಸಾಮಾಜಿಕ-ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತಿ ಸಾಧಿಸಿದ ಜನತೆಯ ಅಗತ್ಯಗಳ ಪೂರೈಕೆಗೆ ಬೇಕಾದಂತಹ ಕೋರ್ಸುಗಳಿಗೆ ಮಾತ್ರ ಮಾಧ್ಯಮಗಳು ಪ್ರಚಾರ ಕೊಡುವುದು, ಮಾಧ್ಯಮ ವರ್ಗದ ಜನವಂತೂ ಇಂಥ ಕೇಸುಗಳಿಗೆ ನಮ್ಮ ಮಕ್ಕಳೂ ಸೇರಿಲ್ಲವೆಂದರೆ ಭೂಮಿ ಮೇಲಿದ್ದು ವೇಸ್ಟ್ ಎಂಬ ಭ್ರಮೆಗೆ ಒಳಗಾಗಿ ತಮ್ಮ ಮಕ್ಕಳ ಮೇಲೆ, ಒತ್ತಡ ತರುವುದು.

ತಮ್ಮ ತಂದೆ-ತಾಯಂದಿರ ಆಸೆ ಪೂರೈಸಲಾಗದೆ ಮಕ್ಕಳು ಆತ್ಮಹತ್ಯೆಯ ಹಾದಿಯನ್ನು ಹಿಡಿಯುವುದು. ಇಲ್ಲವೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹೇಳಿದ ರೇಟಿಗೆ ಹಣ ತೆತ್ತು ವಿವಿಧ ಕೋರ್ಸಿಗೆ ಮಕ್ಕಳನ್ನು ಸೇರಿಸುವುದು, ಬಡ ವಿದ್ಯಾರ್ಥಿಗಳು ಓದಲು ಅವಕಾಶವಿಲ್ಲದಂತಾದಾಗ ಬೆಂಗಳೂರಿನ ಪ್ರತಿಭಾ, ದಾವಣಗೆರೆಯ ಮಮತ, ವಿಜಯಲಕ್ಷ್ಮಿಯರಂತೆ ಆತ್ಮಹತ್ಯೆ ದಾರಿಹಿಡಿಯುವುದು. ಖಾಸಗಿ ಶಿಕ್ಷಣ ಸಂಸ್ಥೆಗಳು ಮಾರುಕಟ್ಟೆಯಲ್ಲಿ ಸರಕುಗಳನ್ನು ಬಿಕರಿ ಮಾಡುವಂತೆ, ದೊಡ್ಡ ದೊಡ್ಡ ವ್ಯಾಪಾರ ವಹಿವಾಟು ನಡೆಸುವಂತಹ ರೀತಿಯಲ್ಲಿ ಶಿಕ್ಷಣ ವ್ಯಾಪಾರ ನಡೆಸುವುದು. ಇಂತಹದ್ದು ಅವ್ಯಾಹಿತವಾಗಿ ನಡೆದಿದೆ. ಇತ್ತೀಚಿನ ದಿನಗಳಲ್ಲಿ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಏರುತ್ತಿರುವ ಬೇಡಿಕೆಗಳ ಆಧಾರದಲ್ಲಿ ಯಾವುದೇ ಕಡಿವಾಣ ರಾಜ್ಯ - ಕೇಂದ್ರಗಳ ತಕರಾರು ಇಲ್ಲದೆ ಅವು ಕೂಡ ಇವರ ಜೊತೆ ಸೇರಿರುವುದರಿಂದ ವೃತ್ತಿ ಶಿಕ್ಷಣ ಕೋರ್ಸುಗಳು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಚಿನ್ನದ ಮೊಟ್ಟೆ ಇಡುವ ಕೋಳಿಗಳಾಗಿವೆ. ವಿದ್ಯಾರ್ಥಿಗಳು ಪೋಷಕರು ಸಂಘಟಿತರಾಗುವುದು, ಶಿಕ್ಷಣದ ಖಾಸಗೀಕರಣಕ್ಕೆ ತಡೆ ಹಾಕಿ ಸರ್ಕಾರಗಳು ಶಿಕ್ಷಣಕ್ಕೆ ಅಗತ್ಯ ಹಣ ನೀಡುವಂತೆ ಹೋರಾಡುವುದೇ ಸಮಸ್ಯೆಗೆ ಮೂಲಭೂತ ಪರಿಹಾರ. ಪಶ್ಚಿಮ ಬಂಗಾಳ, ಕೇರಳದಂತಹ ರಾಜ್ಯಗಳಿಂದ ಸಾಕಷ್ಟು ಕಲಿಯಬಹುದು.

○

ನಾವು ಬಡವರು... ನಮ್ಗೆ ಸರ್ಕಾರಿ ಸ್ಕೂಲೇ ಗಟ್ಟಿ

"ನಾನೊಬ್ಬ ಕ್ಷೌರಿಕ, 3 ಜನ ಮಕ್ಕಳು, ಒಬ್ಬಳು ಚೆನ್ನಾಗಿ ಓದುತ್ತಾಳಾಂತ ಇಂಗ್ಲೀಷ್ ಶಾಲೆಗೆ ಹಾಕ್ರಿ ಅಂದ್ರು. ಶಾಲೆಗೆ ವಿಚಾರಿಸಿದ್ರೆ ತಿಂಗಳು ತಿಂಗಳು 500 ಕೊಡಿ, ಮೊದ್ಲು 5000 ಸಾವಿರ ಕೊಡಿ ಅಂದ್ರು, ನನಗೆ ಸಂಪಾದನೆ ಕಡಿಮೆ. ಸಾಲ ಮಾಡಿ 5000 ಕೊಡಬಹುದು. ಆ ಮೇಲೆ ತಿಂಗಳು - ತಿಂಗಳು ಸಾಲ ತೀರಿಸಲು ಹೋದರೆ ಶಾಲೆಗೆ 500 ಕೊಡಬೇಕಲ್ಲ. ಅದಕ್ಕೆ ಬಡವರು ನಾವು ನಮ್ಮ ಹಣ್ಣೇಲಿ ಬರದಂಗ ಆಯ್ತದೆ ಅಂತ ಮೂರು ಮಕ್ಕಳನ್ನು ಸರ್ಕಾರಿ ಶಾಲೆಗೆ ಹಾಕ್ತೀನಿ ಸಾರ್. ಬಡವರಿಗೆ ಒಳ್ಳೆ ಶಿಕ್ಷಣ ಸಿಗಲ್ಲ ಬಿಡಿ ಸಾರ್. ಸರ್ಕಾರಿ ಶಾಲೇಲಿ ಟೀಚರ್ ನಿಧಾನವಾಗಿ ಬರುತ್ತಾರಂತೆ, ಬಿಸಿಯೂಟ ಏನೋ ಕೊಡ್ತರೆ, ಆದರೆ ರೂಂ ಸರಿಯಲ್ಲ ಅಂತಾರೆ ನಮ್ಮ ಮಕ್ಕಳು, ಖಾಸಗಿ ಶಾಲೆಯಂತೆ ಸರ್ಕಾರದೊರು ಸರ್ಕಾರಿ ಶಾಲೆನ್ನೂ ಚೆನ್ನಾಗಿ ಮಾಡಿದ್ರೆ. ಎಲ್ಲಾ ಸವಲತ್ತು ಕೊಟ್ಟು ಯಾಕೆ ಎಲ್ಲಾ ಇಂಗ್ಲೀಷ್ ಶಾಲೆಗೆ ಹೊಗ್ತಾರೆ ಸಾರ್. ಎಲ್ಲಾ ಸರ್ಕಾರದ್ದೇ ತಪ್ಪು ಅನ್‌ಸ್ತದೆ ನನಗೆ"

ಗಿರಿಯಪ್ಪ, ಕ್ಷೌರಿಕ, ಜರಗನಹಳ್ಳಿ

ಬಾಡಿಗೆ ಹೊರೆಯಲಿ ಕರಗಿದೆ ದುಡಿಮೆ... ಸೊರಗಿದೆ ಬದುಕು....

ದುಡಿಯುವ ಜನವರ್ಗದ ವಿಶಾಲ ವಿಭಾಗಕ್ಕೆ ಸ್ವಂತ ಮನೆ ಬರೀ ಕನಸಷ್ಟೇ. ಇನ್ನು ಬಾಡಿಗೆ ಮನೆಯ ಪಡಿಪಾಟಲನ್ನು ಏನೆಂದು ಹೇಳುವುದು?

■ ಕೆ.ಎನ್.ಉಮೇಶ್

ಬೆಂಗಳೂರಿನ ರಿಂಗ್ ರೋಡ್ ಬಸ್ಸುಗಳನ್ನು ಬಿ.ಎಂ.ಟಿ.ಸಿ. ಆರಂಭಿಸಿದಾಗ, ಇದರಲ್ಲಿ ಯಾರಪ್ಪ ಪ್ರಯಾಣ ಮಾಡೋರು ಎಂಬ ಅನುಮಾನವಿತ್ತು. ಆದರೀಗ ರಿಂಗ್‌ರೋಡ್ ಬಸ್ಸುಗಳು ಭರ್ಜರಿ ರಷ್! ಅದು ಕೆಲಸಕ್ಕೆ ಹೋಗುವ ಹಾಗೂ ಕೆಲಸದಿಂದ ಬರುವ ಸಮಯಗಳಲ್ಲಿ. ಅಂತೆಯೇ ರಾತ್ರಿ 10ಕ್ಕೆ ಬಸ್ ಹತ್ತಿದರೆ ಹತ್ತಾರು ಹುಡುಗರು ಮೈ ಮೇಲೆ ಜ್ಞಾನವಿರದಂತೆ ನಿದ್ರೆಯಲ್ಲಿರುತ್ತಾರೆ. ಒಮ್ಮೆ ವಿಚಾರಿಸಿದಾಗ ಅವರ ಬಾಯಿಂದ ಬಂದದ್ದು "ಪೀಣ್ಯದಲ್ಲಿ ಕೆಲಸ ಸಾರ್. ಬೆಳಿಗ್ಗೆ 5.30ಕ್ಕೆ ಮನೆ ಬಿಟ್ಟರೆ 6 ಕ್ಕೆ ಬಸ್ಸು 7.30 ಕ್ಕೆ ಫ್ಯಾಕ್ಟರಿ ತಲುಪುತ್ತೀವಿ. ರಾತ್ರಿ 8ರವರೆಗೆ ಕೆಲಸ. ಬರೋ ಸಂಬಳ 3 ರಿಂದ 4 ಸಾವಿರ ಸಾರ್. ಮೀಟಿಂಗ್ ಭಾನುವಾರ ಬೆಳಿಗ್ಗೆ ಬೇಡ ಸಾರ್, ಮಧ್ಯಾಹ್ನದ ಮೇಲೆ ಇರಲಿ. ಬೆಳಿಗ್ಗೆ ಓ.ಟಿ. ಸಿಗುತ್ತೆ ಸಾರ್. ತಿಂಗಳಲ್ಲಿ ಬರೋದು ನಾಲ್ಕೆ ಭಾನುವಾರ ಅಲ್ವಾ ಸಾರ್. ಭಾನುವಾರ ಓ.ಟಿ.ಗೆ ಜಾಸ್ತಿ ಸಂಬಳ ಬರುತ್ತೆ ಸಾರ್. ಅಂಗೆ ಸಿಕ್ಕಿದರೆ ಮಾತ್ರ ಬೆಂಗಳೂರಲ್ಲಿ ಬದುಕಬೋದು. ಇಲ್ಲಂದ್ರೆ ಬಾಡಿಗೆ ಕಟ್ಟೋದು ಹೆಂಗೆ ಹೇಳಿ" ಅಂತಾರೆ ಬಹಳಷ್ಟು ಗುತ್ತಿಗೆ ಕಾರ್ಮಿಕರು.



ವರದಕ್ಷಿಣೆ ಬೇಡ ಆದರೆ ಮನೆ ಕೊಡಿಸಿ

'ಇಷ್ಟೊಂದ್ ಮನೆ ಇಲ್ಲಿ ಯಾವುದು ನನ್ಗೆ ಬಾಡಿಗೆಗೆ ಸಿಗೋಮನೆ' ಅನ್ನೊ ಪ್ರಶ್ನೆ ಬಹುತೇಕ ಜನರನ್ನು ದುಡಿದು ತಿನ್ನೋರನ್ನ ಕಾಡುತಿರೋ ಪ್ರಶ್ನೆ. ಸಣ್ಣ ರೂಂ, ಅಡಿಗೆ ಜಾಗ, ಬಚ್ಚಲು ಟಾಯಲೆಟ್ ಇದ್ದರೆ ಸಾಕು. ಶೀಟ್ ಮನೆ ಆದರೂ 30ರಿಂದ 40 ಸಾವಿರ ಅಡ್ವಾನ್ಸು, ಕನಿಷ್ಟ ರೂ.1500 ದಿಂದ ಬಾಡಿಗೆ ಆರಂಭ. ಮೌಲ್ಯ ಇದ್ದರಂತೂ ಮುಗಿದೆ ಹೋಯ್ತು 2,3,4 ಸಾವಿರ ಹೀಗೆ ಏರುತ್ತಲೇ ಇರುತ್ತೆ ಬಾಡಿಗೆ. ಹಾಗಾಗಿ ಕಾರ್ಖಾನೆ ಯಾವುದೋ ಒಂದು ದಿಕ್ಕಿಲ್ಲಿದ, ಕಾರ್ಮಿಕರ ಮನೆ ಇನ್ನೊಂದು ದಿಕ್ಕಲ್ಲಿದ್ದರೆ ಇರುತ್ತೆ. ಹಾಗಾಗೇ ಕೆಲಸಕ್ಕೆ ಹೋಗೋ ಜನರನ್ನು ಹೊತ್ತೊಯ್ಯೊಕ್ಕೆ ಎಷ್ಟು ಬಸ್ಸಾದರೂ ಸಾಲದು. ಎಲ್ಲಾ ಬಸ್ಸು ತುಂಬಿ ತುಳುಕುತ್ತವೆ. ಟ್ರಾಫಿಕ್ ಜಾಸ್ತಿ ಆಗುತ್ತೆ.

ಮದುವೆ ಆಹ್ವಾನ ನೀಡಿದ ಕಾರ್ಮಿಕನ್ನ ವಿಚಾರಿಸಿದರೆ "ವರದಕ್ಷಿಣೆ ಏನಿಲ್ಲಾ, ಬೆಂಗಳೂರಲ್ಲಿ ಬದುಕಬೇಕೆಲ್ಲಾ ಬಾಡಿಗೆ ದುಬಾರಿ ಅಲ್ಲ ಸಾರ್, ಅದಕ್ಕೆ ಒಂದು ಮನೆ ಲೀಸ್‌ಗೆ ಹಾಕಿಸಿಕೊಡಿ ಅಂದ್ವಿ. ಆಯ್ತು ಅಂದ್ರು. ಒಂದು ಲಕ್ಷ ಕೊಟ್ಟು ಹಾಕಿಸಿ ಕೊಟ್ರು". ಅಂತ ಅನ್ನೋ ಮಾತು ಸಾಮಾನ್ಯ ವಿಚಾರ ಆಗಿ ಬಿಟ್ಟಿದ್ದಾವೆ!

ಅಡಗಿದ ನೋವು

"ಇರೋಕೆ ಜಾಗ ಕೊಟ್ಟು ಒಂದು 3 ಸಾವಿರ ಸಂಬಳ ಬಂದರೆ ಹೆಂಗೋ ಬದುಕಬಹುದು ಸಾರ್" ಅಂತಾರೆ. ಇನ್ನು ಕಾರ್ಖಾನೆಗಳೇ ಹೆಚ್ಚಿರೋ ಪೀಣ್ಯಾ, ವೈಟ್‌ಫೀಲ್ಡ್, ಹೊಸೂರು ರಸ್ತೆ ಕಡೆ ಹೋದರಂತು ಮುಗಿದೆ ಹೋಯ್ತು. ಸಣ್ಣ ಸಣ್ಣ ಗೂಡಂಗಡಿಯಂತಾ ಮನೆಗಳು ಅವಕ್ಕೆ 1 ರಿಂದ 2 ಸಾವಿರದವರೆಗೆ ಬಾಡಿಗೆ, ಚೀಟಿ ಗೀಟಿ ಹಾಕಿ ಕೂಡಿಟ್ಟ ಹಣ ಅಡ್ವಾನ್ಸ್‌ಗೆ ಅನ್ನೋ ಮಾತಲ್ಲೇ ಅಡಗಿರೋ ನೋವು ಕಾಣುತ್ತೆ.

ಶಿಫ್ಟ್ ಬೇಕೇ ಬೇಕು

ಈ ಮನೆಯಾದರೂ ಸುಮ್ನೆ ಸಿಗ್ತಾವ ಅಂದ್ರೆ, ಜಾತಿ, ಕುಲ, ಊರು, ಕೇರಿ ವಿಚಾರಿಸಿಕೊಂಡೆ ಸಿಗೋದು ಸುಮ್ನೆ ಅಂತೂ ಅಲ್ಲಾ. ಗಾಳಿ ಬೆಳಕು ಅಪ್ಪಿತಪ್ಪಿ ನೆಂಟ್ರು ಬಂದ್ರೆ ಅದೆಲ್ಲಾ ಕೇಳಂಗೆ ಇಲ್ಲ. "ಈ ಬಾಡಿಗೆ ಜತೆಗೆ ಆಗಿಂದಾಗ್ಗೆ ಹೆಚ್ಚೊ ಕರೆಂಟು, ನೀರ್ ಬಿಲ್. ಇದು ಬೇರೆ ರಾಮಾಯಣ ಸಾರ್! ಅಂತಾರೆ ಕಡಿಮೆ ಬಾಡಿಗೆಗೆ ಅಂತ ದೂರಹೋಗಿ ಮನೆ ಮಾಡ್ತೀವಿ. ಬಸ್ ಪಾಸ್‌ಗೆ ಬೆಲೆ ತೆತ್ತಬೇಕು ನೋಡಿ ಸಾರ್" ಅಂತ ಕೆಲವರಂದ್ರೆ ಇನ್ನು ಕೆಲವರಂತೂ ಈ ಬೆಂಗಳೂರು ಸಹವಾಸವೇ ಬೇಡ ಅಂತ, ತುಮಕೂರು, ಕೋಲಾರ, ಕೆ.ಜಿ.ಎಫ್. ತಿಪಟೂರು, ಅರಸಿಕೆರೆ, ಮೈಸೂರು, ಮಂಡ್ಯದಲ್ಲಿ ಮನೆ ಮಾಡಿ ಅಲ್ಲಿಂದ ದಿನಾ ರೈಲಲ್ಲೋ ಬಸ್ಸಲ್ಲೋ ಬಂದು ಕೆಲಸ ಮಾಡಿ ಮನೆಗೆ ಹೋಗ್ತಾರೆ. "ಹಾಗೆ ಮಾಡಬೇಕಾದರೆ ಆಫೀಸ್ ಡ್ಯೂಟಿ ಇರಬೇಕು. ಬೆ.10ರಿಂದ ಸಂಜೆ 5ರವರೆಗೆ ಕಾರ್ಖಾನೆಯಲ್ಲಿ ಎಲ್ಲಿ ಸಾರ್ ಹಾಗೆ ಮಾಡಕೆ ಆಗುತ್ತೆ. ಈ ದರಿದ್ರ ಶಿಫ್ಟ್ ಬೇರೆ ಇದಾವಲ್ವಾ" ಅಂತ ಗೋಗೆರೆಯುತ್ತಾರೆ.

ಸಂಬಳದಲ್ಲಿ ಕೊಡೋ ಹೆಚ್.ಆರ್.ಎ(ಮನೆ ಬಾಡಿಗೆ ಭತ್ಯೆ) ಮಾತ್ರ ಗುತ್ತಿಗೆ ಕಾರ್ಮಿಕರಿಗೆ ಕೆಲವರಿಗೆ ದಿನಕ್ಕೆ ರೂ.18 ರಿಂದ ರೂ.23 ಇನ್ನು 'ಸಿ' ದರ್ಜೆ ನೌಕರರಿಗೆ ಅದೂ ಇಲ್ಲಾ! ಇನ್ನು ಸಾರಿಗೆ ವೆಚ್ಚ ಕೆಲವೆಡೆ 'ಸೈಕಲ್ ಭತ್ಯೆ' ಅಂತಾ ದಿನಕ್ಕೆ ರೂ.5 ರಿಂದ ರೂ.8 'ಸಿ' ದರ್ಜೆಯವರಿಗೆ ಅದು ಇಲ್ಲ! ಇದರಲ್ಲಿ ಬಾಡಿಗೆ ಕಟ್ಟೋದು ಹೇಗೆ ಹೇಳಿ ಅಂತ ಕೇಳುತ್ತಾರೆ ಕಾರ್ಮಿಕರು.

'ಅಂದದೂರು ಬೆಂಗಳೂರು, ಏನಾದರೂ ಮಾಡಿ ಬದುಕಬಹುದು ಅಂತಾ ಬಂದು ಸೇರಿಕೊಂಡೋರಿಗೆ ಆನಂದದ ತವರೂರಂತು ಆಗುತ್ತಿಲ್ಲ. ಕಷ್ಟಪಟ್ಟರೂ ನೆಮ್ಮದಿಯಾಗಿ ಇರೋಕೆ ಆಗ್ತಿಲ್ಲಾ. ದುಡಿದಿದ್ದೆಲ್ಲಾ ಬಾಡಿಗೆಗೆ ಆಯ್ತುಲ್ಲ' ಅನ್ನೋ ಗೋಳು ಎದೆಯಾಳದಲ್ಲೇ ಕುದಿತಿರೋ ಜ್ವಾಲೆಯಾಗಿದೆ. ಒಂದೆಡೆ ಅಪಾರ್ಟ್ ಮೆಂಟ್‌ಗಳಲ್ಲಿ ಕನಿಷ್ಠ 10 ಸಾವಿರದಿಂದ ಮೇಲ್ಪಟ್ಟ ಬಾಡಿಗೆ, ಇನ್ನೊಂದೆಡೆ ಊರಿಂದ ಆಚೆಗೆ ಬಡವರ ಬದುಕುವ ಬವಣೆಯ ಮನೆಗಳು. ಅದು ಬಾಡಿಗೆ ಮನೆಗಳು ಅನ್ನೋಚಿತ್ರ ಕಣ್ಣ ಕಟ್ಟುವಂತೆ ರಾಚುತ್ತದೆ.

ನಗರದಿಂದ ಆಚೆ - ಹೊರವಲಯಕ್ಕೆ

ಬೆಂಗಳೂರು ಅಂತರರಾಷ್ಟ್ರೀಯ ಬಂಡವಾಳದ ಕೇಂದ್ರ ಆಗುತ್ತಿರೋ ಹಾಗೆ ಬೆಂಗಳೂರಿನ ಹೃದಯಭಾಗದಲ್ಲಿ ಹುಟ್ಟಿ ಬೆಳೆದೋರೋ ಬೆಂಗಳೂರಿನ ಹೊರಹೊಲಯಕ್ಕೆ ಸರಿಯುತ್ತಿದ್ದಾರೆ. ಹೊರ ವಲಯದಲ್ಲಿದ್ದೋರೋ ಗ್ರಾಮಾಂತರ ಜಿಲ್ಲೆ, ಪಕ್ಕದ ಜಿಲ್ಲೆಗೆ ಮನೆ ಹುಡುಕಿ ಹೊರಡುವಂತಾಗಿದೆ.

ಪರಿಣಾಮವಾಗಿ ಬೆಂಗಳೂರು ಯದ್ವಾತದ್ವಾ ಬೆಳೆತಾಯಿದೆ. ಇದು ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿ.ಎಂ.ಪಿ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯನ್ನಾಗಿಸುತ್ತಿದೆ. (ಬಿ.ಬಿ.ಎಂ.ಪಿ) ಬೆಂಗಳೂರು ತುಂಬಾ ಹರಡಿರುವ ವೃತ್ತಿಪರ ಕಾಲೇಜುಗಳು ಅದರಲ್ಲಿ ಓದಲು ಬರುತ್ತಿರುವ ಹೊರ ರಾಜ್ಯ

ಪುಟ 12 ಕ್ಕೆ

'ಅರ್ಧ ಸಂಬಳ ಮನೆ ಬಾಡಿಗೆಗೆ ಹೋಗುತ್ತೆ'

" ನಾನು 15 ವರ್ಷದಿಂದ ಮೈಕೋ ಫ್ಯಾಕ್ಟರಿಯಲ್ಲಿ ಕಾಂಟ್ರಾಕ್ಟ್ ವರ್ಕರ್ ಆಗಿದ್ದೀನಿ, ತಿಂಗಳಿಗೆ ಮೂರು, ಮೂರುವರೆ ಸಾವಿರ ಸಂಬಳ ಸಿಗುತ್ತೆ, ನಮ್ಮ ದೊಡ್ಡಮ್ಮ, ನನ್ನ ತಮ್ಮ ಸೇರಿ. ನಾವು ಒಟ್ಟು ಜನ ನಮ್ಮ ಮನೆಯಲ್ಲಿದ್ದೇವೆ. ಆಡುಗೋಡಿಯಲ್ಲಿ ಬರೇ ಒಂದು ಹಾಲ್, ಅಡಿಗೆ ಮನೆ ಇರೋ ಶೀಟಿನ ಮನೆಗೆ ತಿಂಗಳಿಗೆ 2000 ಮನೆ ಬಾಡಿಗೆ ಕಟ್ಟುತ್ತಿದ್ದೇವೆ. ಇಪ್ಪತ್ತು ಸಾವಿರ ರೂಪಾಯಿ ಅಡ್ವಾನ್ಸ್ ಅಂತ ಕೊಟ್ಟಿದ್ದೇವೆ. ಇದಲ್ಲದೇ ಕರೆಂಟ್ ಚಾರ್ಜು ಬೇರೆ ಕಟ್ಟಬೇಕು. ನಮಗೆ ರೇಷನ್ ಕಾರ್ಡ್ ಕೂಡ ಇಲ್ಲ. ಬರೋ ಮೂರು-ಮೂರುವರೆ ಸಾವಿರ ಸಂಬಳದಲ್ಲಿ 2 ಸಾವಿರ ಮನೆ ಬಾಡಿಗೆಗೆ ಕೊಟ್ಟರೆ ನಾವು ಜೀವನ ಮಾಡೋದು ಹೇಗೆ? ಏನೋ ನನ್ನ ಹೆಂಡತಿ ಸ್ವಲ್ಪ ಟೈಲಿರಿಂಗ್, ಜಿಗ್‌ಜಾಗ್ ಅಂತ ಮಾಡೋದ್ರಿಂದ ಹೇಗೋ ಜೀವನ ದೂಡ್ತಾ ಇದ್ದೀವಿ"

ಹೆಸರು : ರಂಗಸ್ವಾಮಿ

ಉದ್ಯೋಗ: ಮೈಕೋ ಕಾರ್ಖಾನೆಯ ಕಾಂಟ್ರಾಕ್ಟ್ ಕಾರ್ಮಿಕ

ನಮ್ಮ ಜೀವನಕ್ಕೇನು

"ನಾವು ಒಟ್ಟು 5 ಜನ ಮನೆಯಲ್ಲಿದ್ದೀವಿ. ಯಲಚೇನಹಳ್ಳಿ ಯಲ್ಲಿ ಮನೆ. 30 x 18 ಅಳತೆಯ ಮೋಲ್ಡ್ ಮನೆಗೆ 35 ಸಾವಿರ ಅಡ್ವಾನ್ಸ್, ತಿಂಗಳಿಗೆ 1900 ರೂಪಾಯಿ ಬಾಡಿಗೆ ಕಟ್ಟುತ್ತೇವೆ. ಆಟೋದಲ್ಲಿ ಪ್ರತಿದಿನ 12 ಗಂಟೆ ದುಡಿದರೆ ತಿಂಗಳಿಗೆ ನಾಲ್ಕು ಸಾವಿರ ರೂಪಾಯಿ ದುಡಿಯಬಹುದು. ಈ ದುಡಿಮೆಯಲ್ಲಿ ಮನೆ ಬಾಡಿಗೆ ಕಟ್ಟೋದು ಹೇಗೆ. ನಮ್ಮ ದುಡಿಮೆಯ ಅರ್ಧಕ್ಕರ್ಧ ಮನೆ ಬಾಡಿಗೆಗೆ ಹೋಗುತ್ತೆ. ತಂಗಿ, ತಮ್ಮ ಸಣ್ಣ ಪುಟ್ಟ ಕೆಲಸ ಮಾಡ್ತಾ ಇರೋದ್ರಿಂದ ಹೇಗೋ ಜೀವನ ಮಾಡ್ಕೊಂಡೋಗ್ತಿದೀವಿ"

ಹೆಸರು: **ವೆಂಕಟೇಶ್**

ವೃತ್ತಿ : ಆಟೋ ಚಾಲಕ





ಅವರ ಕಣ್ಣಲ್ಲಿ ವಿಚಿತ್ರ ಭಯ, ತಲ್ಲಣ ಕಾಲೂರಿತ್ತು

ದಲಿತ ಬಾಲಕ ಮೇಗಲ ಕೇರಿಯಲ್ಲಿ ಸೈಕಲ್ ತುಳಿದಿದ್ದಕ್ಕೆ ಇಷ್ಟಾದರೆ ಇನ್ನೂ...

ಐದನೇಯ ತಾರೀಖು ಬೆಳಗಿನ ಜಾವದಲ್ಲೇ ಕಲ್ಬುರ್ಗಿ ಸೂರ್ಯ ತನ್ನ ತಲೆಯ ಮೇಲೆ ಲಿಗಿ ಲಿಗಿ ಬೆಂಕಿ ಜ್ವಾಲೆಯ ಕಿರೀಟ ಹೊತ್ತು ಪಯಣ ಹೊರಟಿದ್ದ. ಬಸವ ಭಕ್ತರ ಮನೆಯ ಮುಚ್ಚಿದ ಬಾಗಿಲ ಸಂದಿನಿಂದ ವಚನವೊಂದು ಸುಶ್ರಾವ್ಯವಾಗಿ ಹರಿದು ಬರುತ್ತಿತ್ತು.

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ....

ಚಾತುರ್ವರ್ಣದ ಕೋಟೆಯ ಕಲ್ಲುಗಳನ್ನು ಕಿತ್ತಿ ಹಾಕಲು ಕಲ್ಯಾಣದ ನೆಲಕ್ಕೆ ರಕ್ತದ ವೀರಗಾಥೆ ಬರೆದ ಕಾಯಕ ಜೀವಿಗಳು ವಚನದೊಂದಿಗೆ ನೆನಪಾದರು. ಅಂದಿನ ಪಾಳೇಗಾರರು ಶರಣರ ಕಣ್ಣು ಕಿತ್ತಿ ಪಟ್ಟಣದ ಬೀದಿಯಲ್ಲಿ ವಿಳೆಹೂಟೆ ಮಾಡಿದರು. ಆದರೆ ಅಸಂಖ್ಯಾತ ಜನರ ಕಣ್ಣುಗಳಲ್ಲಿ ನಂದದ ಕ್ರಾಂತಿ ದೀಪ ಇಂದಿಗೂ ಬೆಳಗುತ್ತಲೇ ಇದೆ.

'ದನಕ್ಕೆ ಬಡಿದಂಗೆ ಬಡಿದಾರ....'

ಪಕ್ಷದ ಕಛೇರಿಯಿಂದ ಬಂದ ಫೋನು 'ಉರ್ಕಿ ಅನ್ನಾ ಹಳ್ಳ್ಯಾಗ ದಲಿತ ಹುಡುಗ್ರಿಗಿ ದನಕ್ಕ ಬಡದಂಗ ಬಡದಾರಂತ. ಜರಾ ಆ ಊರಿಗೆ ಹೋಗಿ ಬರ್ರಿ' ತಲ್ಲಣಿಸುವ ಸುದ್ದಿ ಬಿತ್ತರಿಸಿತು. ತಕ್ಷಣ ಸಂಗಾತಿಗಳೊಂದಿಗೆ ಜೀಪು ಹತ್ತಿ ಬಸವಕಲ್ಯಾಣದತ್ತ ಧಾವಿಸಿದೆವು. ಇದೆಂಥ ವ್ಯಂಗ್ಯ?! 12ನೇ ಶತಮಾನದಲ್ಲೇ ಅಸಮಾನತೆಯ ವಿರುದ್ಧ, ವರ್ಗ, ವರ್ಣ, ಜಾತಿ, ಲಿಂಗ ತಾರತಮ್ಯದ ವಿರುದ್ಧ ಕ್ರಾಂತಿಯ ಕಹಳೆ ಮೊಳಗಿದ ಕಲ್ಯಾಣದ ನಾಡಿನಲ್ಲೇ ದಲಿತರ ಮೇಲೆ ಅಮಾನವೀಯ ದೌರ್ಜನ್ಯ! ಹೌದು, ಹೋರಾಟದ ಬೆಳಕು ಮುಗಿಲ ಮರೆಯ ಕೋಲ್ಮಿಂಚಿನಂತೆ ಫಳಫಳಿಸಿ ಹೋದರೆ ಸಾಲದು. ಅದೊಂದು ನಿರಂತರ ಹರಿವ ನದಿಯಾಗಬೇಕು. ಹಾಗಾಗದ ಫಲವೇ ಈ ಅಸಂಖ್ಯಾತ ದೌರ್ಜನ್ಯಗಳು.

ಸವರ್ಣೀಯರ ಅಟ್ಟಹಾಸ

ರಾಷ್ಟ್ರೀಯ ಹೆದ್ದಾರಿ 9 ರ ಮೇಲಿನ ದೌಡಾಯಿಸಿದ ನಮ್ಮ ಜೀಪು ಎಡಕ್ಕೆ ಹೊರಳಿ, ಕೆಮ್ಮಣ್ಣು ಚಿಮ್ಮಿಸುತ ಮಂಡಾಳಾ ಎಂಬ ಗ್ರಾಮ ದಾಟಿ ಸರಿಯಾಗಿ ಮೂರು ಕಿಲೋ ಮೀಟರ್ ಕಚ್ಚಾ ರಸ್ತೆ ಸವೆಸಿದರೆ ಉರ್ಕಿ ಎಂಬ ಪುಟ್ಟ ಹಳ್ಳಿ ಭೇಟಿಯಾಗುತ್ತದೆ. ಸುಮಾರು 1200 ರಿಂದ 1500 ದಷ್ಟು ಜನಸಂಖ್ಯೆ. ಎಲ್ಲ ಜಾತಿಯ ಜನಗಳ ಸಂಗಮ. 60-65 ಮರಾಠ ಮನೆಗಳು. 30ರಿಂದ 40 ಲಿಂಗಾಯುತ ಮನೆಗಳು. ಒಂಬತ್ತರಷ್ಟು ಮುಸ್ಲಿಂ ಮನೆಗಳಿದ್ದರೆ ಕಬ್ಬಲಿಗರ ಮನೆಗಳು 35 ರಷ್ಟು 5 ಕುಂಬಾರ 5 ಸ್ವಾಮಿ (ಜಂಗಮ), 30 ರಿಂದ 35 ರಷ್ಟು ದಲಿತ ಮನೆಗಳುಳ್ಳ ಉರಕಿಯಲ್ಲಿ ಮೂರು ದಿನಗಳ ಹಿಂದೆಯೇ ಕಾರಣವೇ ಇಲ್ಲದೆ ಸುನೀಲ ಎಂಬ ದಲಿತ ಯುವಕನನ್ನು, ಸವರ್ಣಿಯನಾದ ದಯಾನಂದ ಪಾಟೀಲ ತನ್ನ ಮನೆಯಂಗಳಕ್ಕೆ ಕರೆದು ಬಡಿದಿದ್ದಾನೆಂದು, ಯಾಕೆಂದು ಕೇಳಿದ್ದಕ್ಕೆ, 50-60 ಜನ ಸವರ್ಣಿಯರ ಗುಂಪು ಹೋ... ಎಂದರಚುತ್ತ ದಲಿತ ಕೇರಿ ನುಗ್ಗಿ ಕೈಗೆ ಸಿಕ್ಕವರನ್ನೆಲ್ಲ ಚಚ್ಚಿ ಹಾಕಿತು.

ದಲಿತ ಕೇರಿ ಬಿಕ್ಕುತ್ತಿತ್ತು

ನಾವು ಸಮುದಾಯ ಭವನದ ಮುಂದೆ ಕೂತು ದಲಿತ ಹೆಂಗಸರು, ಗಂಡಸರು, ಮಕ್ಕಳು ಹೇಳುವ ಶೋಕದ ಕತೆಗೆ ಕಿವಿಯಾದೆವು. ಇಡೀ ದಲಿತ ಕೇರಿ ಭಯ ಬಿದ್ದ ಮಗುವಿನಂತೆ ಬಿಕ್ಕುತ್ತಿತ್ತು. ಅವರ ಕಣ್ಣಿನಲ್ಲಿ ವಿಚಿತ್ರ ನಮೂನೆಯ ಭಯ-ತಲ್ಲಣ ಕಾಲೂರಿತ್ತು. ಅಲ್ಲಿರುವ ಯಾವ ಕುಟುಂಬಕ್ಕೂ ಐದು ಎಕರೆಯಷ್ಟು ಭೂಮಿ ಇಲ್ಲ. ಒಂದೂವರೆ-ಎರಡು ಎಕರೆಯಷ್ಟು ಕೆಲವೊಬ್ಬರಿಗಿದ್ದರೂ ಹತ್ತಾರು ಕಿ.ಮೀ. ಆಚೆಗೆ ಗುಡ್ಡದ ಪಕ್ಕದಲ್ಲಿದೆ. ರೇಷನ್ ಕಾರ್ಡ್‌ಗಳು ಎಲ್ಲರಿಗೂ ಇಲ್ಲ. ಉದ್ಯೋಗ ಖಾತ್ರಿ ಕಾಯ್ದೆಯು ಈ ಊರಿಗೆ ಹಣಿಕು ಹಾಕಿಲ್ಲ. ಕೂಲಿಗಾಗಿ ಕಾಳು ಯೋಜನೆ ಬರದಂತೆ ತಡೆಗಟ್ಟಲಾಗಿದೆ. ಇಡೀ ದಿನ ಇದ್ದವರ ಹೊಲಕ್ಕೆ ಹೋಗಿ ಕೂಲಿ ಮಾಡಿದರೆ ರಾತ್ರಿ ಹೊತ್ತಲ್ಲಿ ಕೈಗೆ ಬರುವುದು ಹೆಂಗಸರಿಗೆ 20ರೂ. ಗಂಡಸರಿಗೆ ರೂ.40-50 ಮಾತ್ರ. ಇಷ್ಟು ಮಾತ್ರ ಅಲ್ಲ. ಈ ಹಳ್ಳಿಗೆ ಸರ್ಕಾರದ ಕೆಂಪು ಬಸ್ಸು ಬಂದೇ ಇಲ್ಲ!

ಯಾವುದೋ ಎನ್.ಜಿ.ಓ. ಸಂಸ್ಥೆಯೊಂದು ಜಿ.ಪಂ.ನಿಂದ ಪಡೆದ ಜಲಾನಯನ ಯೋಜನೆಯಲ್ಲಿ ಕೆಲವು ದಲಿತರು, ಕೂಲಿ ಕೆಲಸ ಮಾಡುತ್ತಾರೆ. ದತ್ತು ಮೋರೆ ಎಂಬ ಎನ್.ಜಿ.ಓ. ಸಂಯೋಜಕನೊಂದಿಗಿನ ಜಗಳ ಕಾದ ದಯಾನಂದನು, ತಮ್ಮ ಪಾಡಿಗೆ ತಾವು ಕಾಯಕ ಮಾಡಿಕೊಂಡು ಬದುಕುತ್ತಿರುವ ದಲಿತರ ಮೇಲೆ ಎರಗಿ ಬಿದ್ದಿದ್ದಾನೆ. ಅತ್ತ ಸರ್ಕಾರಿ ಕೆಲಸ ಇಲ್ಲ. ಇತ್ತ ಬದುಕಲು ಆಧಾರ ಇಲ್ಲ. ಬದುಕಿನ ಬಂಡಿ ನಡೆಸಲು ಎನ್.ಜಿ.ಓ. ಕೊಟ್ಟ ಕೂಲಿ ಕೆಲಸ ಮಾಡಿದ್ದು ದಲಿತರ ತಪ್ಪೇ? 'ತಮ್ಮ ಮಗನನ್ನು ಕಾರಣವಿಲ್ಲದೆ ಯಾಕೆ ಹೊಡೆದೆ'? ಎಂದು ಕೇಳಿದ್ದೇ ದಯಾನಂದನಿಗೂ ಇತರರಿಗೂ ಸಿಟ್ಟು-ಆವೇಷ ಬರಲು ಕಾರಣ ವಾಯಿತಂತೆ.

ಮುಟ್ಟಿ ಮುಟ್ಟಿ ಹೊಡೆದರು!!!

04 ಮೇ 2007 ರಂದು ಸಾಯಂಕಾಲದ ಹೊತ್ತಲ್ಲಿ ನೂರಾರು ಜನ ದಲಿತರ ಕೇರಿಗೆ ದಾಳಿಯಿಟ್ಟು ಅಮಾಯಕ ದಲಿತರನ್ನೆಲ್ಲ ಚಚ್ಚಿ ಹಾಕಿದ ಬರ್ಬರತೆಗೆ ಮನೋಜ ಎಂಬ ಯುವಕನಿಗೆ ಮಾರಣಾಂತಿಕ ಗಾಯಗಳಾಗಿವೆ. ಸುನೀಲನೂ ಮತ್ತು ಇತರ ಮೂರು ಜನ ದಲಿತ ಯುವಕರೂ ಕಾಲ್ತುಳಿತದಲ್ಲಿ ಜರ್ಜರಿತರಾಗಿದ್ದಾರೆ. ತಮ್ಮ ಕರುಳ ಕುಡಿಗಳು ನರಳುವುದನ್ನು ಕಂಡ ಹೆಂಗಸರು ಗೊಳೋ ಎಂದು ಮುಗಿಲಿಗೆ ಮೊರೆಯಿಟ್ಟಿದ್ದಾರೆ. ತಕ್ಷಣ ಆಸ್ಪತ್ರೆಗೆ ಹೋಗಲು ವಾಹನ ಕೇಳಿದರೆ ಮೇಲ್ಜಾತಿಯ ಚಾಲಕನಾದ್ದರಿಂದ ಬರಲಿಲ್ಲ. ದಲಿತರ ಮೇಲೆ ಹಲ್ಲೆ ದೌರ್ಜನ್ಯ ನಡೆಸುವುದು ತಮ್ಮ ಹಕ್ಕೆಂದು ಭಾವಿಸಿದ್ದ ಸವರ್ಣಿಯರ ಗುಂಪು ದಾಳಿ ಮಾಡಿ ವಾಪಸ್ಸಾಯಿತು. ದಲಿತ ಕೇರಿ ಮಾತ್ರ ಶೋಕ ಸಾಗರದಲ್ಲಿ ಮುಳುಗಿತು. ಕುಡಿವ ನೀರಿನ ಬಾವಿ ಮುಟ್ಟಿಸದ, ಹೋಟೇಲ್‌ನಲ್ಲಿ ಪ್ರತ್ಯೇಕ ಚಾ ಗ್ಲಾಸಿಟ್ಟ ಸವರ್ಣಿಯರು, ಅಂದು ಮಾತ್ರ ಮುಟ್ಟಿ ಮುಟ್ಟಿ ಹೊಡೆದರು! ಕೇರಿಗೆ ನುಗ್ಗಿ ಹೊಡೆದರು. ಕಟ್ಟಿಗೆಯಿಂದ ತಿವಿದರು. ನೆಲಕ್ಕೆ ಬಿದ್ದವರನ್ನು ಮತ್ತೂ ಒದ್ದರು. ಹಳ್ಳಿಯ ಕಟ್ಟ ಕಡೆಗೆ ಮುದುಡಿ ಮೂಲೆ ಹಿಡಿದು ಕೂತಂತಿರುವ ದಲಿತ ಕೇರಿ ಅಂದು ತತ್ತರಿಸಿ ಹೋಯಿತು.

ಹೋರಾಟದ ಕಹಳೆ

ಸುದ್ದಿ ತಿಳಿದ ಪಕ್ಕದ ಹಳ್ಳಿ ಚಿಟ್ಟಾ ದಲಿತ ಯುವಕರು ಉರ್ಕಿಗೆ ಧಾವಿಸಿ ಬಂದರು. ನೀರು ಕೇಳಿದರೆ ಮೂತ್ರ ಹೋಯ್ದ ಸವರ್ಣೀಯರ ವಿರುದ್ದ ಬಂಡೆದ್ದ ದಲಿತರು ಈಗ ಕೆಂಬಾವುಟ ಹಿಡಿದು ಉರ್ಕಿಗೆ ಬಂದರು. ಕೇಸು ಮಾಡಿದರು. ಹಲ್ಲೆಗೊಳಗಾದವರನ್ನು ಆಸ್ಪತ್ರೆಗೆ ದಾಖಲಿಸಿದರು. ಹೋರಾಟದ ಕಹಳೆ ಊದಿದರು.

ದಲಿತ ಬಾಲಕ ಸೈಕಲ್ ತುಳಿಯಬಾರದೇ

ನಾವು ಸಭೆಯಲ್ಲಿ ಕೂತಾಗ ದಲಿತ ಯುವಕ ವಿಲಾಸರಾವ್ ಹೇಳುತ್ತಿದ್ದ. ನಾಲ್ಕು ವರ್ಷದ ಹಿಂದೆ ಅದೊಂದು ಮಧ್ಯಾಹ್ನ ದಲಿತ ಬಾಲಕ ಸೈಕಲ್ ಕಲಿಯುವ ಹಠದಿಂದ ಬಿದ್ದು ಎದ್ದು ಮೊಳಕಾಲು ತರಚಿಕೊಂಡು, ಕಡೆಗೂ ಸೈಕಲ್ ಕಲಿತೇ ಬಿಟ್ಟ. ಅಸಾಧ್ಯವಾದುದನ್ನು ಸಾಧಿಸಿದ ಉಮೇದಿನಲ್ಲಿ ಊರ ತುಂಬ ಕೇರಿ ತುಂಬ ಸೈಕಲ್ ಓಡಿಸಿ ವಿಜಯ ಸಂದೇಶ ಸಾರಲು ಹೊರಟ. ಕೇರಿ ತುಂಬ ಸೈಕಲ್ ತುಳಿಯಬಹುದು. ಊರ ತುಂಬ ಹೇಗೆ? ಅದರಲ್ಲೂ ಸವರ್ಣೀಯರು ನಡೆದಾಡುವ ಬೀದಿ ತುಂಬ...? ಆದರೆ ಆ ಎಳೆ ಬಾಲಕನಿಗೇನು ಗೊತ್ತು... ಆ ದಿನ ಆ ಹುಡುಗ ಗಡಿ ದಾಟಿದ. ದಲಿತ ಕೇರಿಯಿಂದ ಸೈಕಲ್ ಸವಾರಿ ಹೊರಟೇ ಬಿಟ್ಟಿತು. ನೋಡ ನೋಡುತ್ತಲೇ ಪೆಡಲ್ ತುಳಿಯುವ ಪಾದಗಳು ವೇಗವಾಗಿ ಪಯಣ ಬಿರುಸಾಗಿ ಲಿಂಗಾಯುತರ ಮನೆಗಳು, ಮರಾಠ ಮನೆಗಳು... ಹೀಗೆ ಮೇಲಿನ ಕೇರಿಯ ಬೀದಿ ಹಾಯ್ದು ಹಾರುತ ಬಂದ ಹುಡುಗ ಹೆಂಡಿ (ಸೆಗಣಿ) ಬಳಿಯುವ ಅವ್ವನ ಕುತ್ತಿಗೆ ಜೋತು ಬಿದ್ದು ಖುಷಿಯ ಕೇಕೆ ಹಾಕಿದ. ಆದರೆ ಆ ತಾಯಿ ಮಗನ ಖುಷಿ ಕ್ಷಣಿಕವಾಗಿತ್ತು. ದಲಿತ ಹುಡುಗ ಮೇಲಿನ ಬೀದಿಯಲ್ಲಿ ವೇಗವಾಗಿ ಸೈಕಲ್ ತುಳಿದದ್ದೇ ತಪ್ಪಾಗಿ ಸವರ್ಣೀಯರ ಗುಂಪೊಂದು ಬಾಲಕನನ್ನು ಥಳಿಸಿತು. ಕ್ಷಣದ ಹಿಂದೆಯೇ ಏಕಲವ್ಯನ ಸ್ವರೂಪದಂತಿದ್ದ ಮಗನನ್ನು ಮುದ್ದಿಸಿದ್ದ ತಾಯಿಯ ಎದೆ ಒಡೆದು ಚೂರಾಯಿತು. ಏಕಲವ್ಯನ ಹೆಬ್ಬೆರಳು ಪಡೆದ ದ್ರೋಣಾಚಾರ್ಯನಂತೆ ಸವರ್ಣಿಯರ ಗುಂಪು ದಾಳಿ ಮಾಡಿ ಹೋಯಿತು. ಬಾಲಕ ಮಾಡದ ತಪ್ಪಿಗೆ ಬಿಕ್ಕಿ ಬಿಕ್ಕಿ ಅಳುತ್ತ ಮೂಲೆ ಸೇರಿದ.

ಎಷ್ಟೊಂದು ಮರ್ಮಾಘಾತ ಘಟನೆಗಳು?!

ಬೀದರ್ ಜಿಲ್ಲೆಯಲ್ಲಿ 588 ಹಳ್ಳಿಗಳ ಪೈಕಿ 193 ಗ್ರಾಮಗಳಲ್ಲಿ ಅಮಾನವೀಯ ತೆರದಿ ಅಸ್ಪೃಶ್ಯತೆ ಆಚರಣೆಯಲ್ಲಿದೆ. ಈ ಸರ್ವೆ ಮಾಡಿರುವ ಸಮಾಜ ಕಲ್ಯಾಣ ಇಲಾಖೆಯು ಒಂದೇ ಒಂದು ಸಾಮಾಜಿಕ ನ್ಯಾಯದ ಕಾರ್ಯ ಚಟುವಟಿಕೆ ಕೈಗೊಳ್ಳುವುದಿಲ್ಲ. ಪ್ರತಿ ವರ್ಷ 8 ಲಕ್ಷದಷ್ಟು ಹಣ ಪೋಲಾಗುತ್ತದೆ.

ನಾವು ಉರ್ಕಿಯ ತುಂಬ ಪಾದ ಸಂಚಾರ ಹೊರಟೆವು. 'ಮಾದಾರ ಚೆನ್ನಯ್ಯನ ಮನೆಯ ಮಗ ನಾನು, ಎನಗೆ ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ' ಎಂದ ಬಸವಣ್ಣನ ಸಂದೇಶ ಊರವರ ಮುಂದಿಟ್ಟು ಪ್ರಶ್ನಿಸಿದೆವು. ದಲಿತರ ಮೇಲಿನ ದೌರ್ಜನ್ಯ ಸಮರ್ಥಿಸುವವರು ಬಸವಣ್ಣನ ತುಕಾರಾಮನ ಫೋಟೋ ಇಡಬೇಡಿ ಎಂದೆವು. ಅನೇಕ ಜನ ನಮ್ಮ ಮಾತಿಗೆ ಹೌದೆಂದರು. ಆದರೆ ಅಂತರಂಗದ ಮಾತು...!

ಉರ್ಕಿಯ ದಲಿತರಿಗೆ ಹೋರಾಟ ಬಿಟ್ಟರೆ ಅನ್ಯ ಮಾರ್ಗವೇ ಇರಲಿಲ್ಲ. ಕೇಸು ದಾಖಲಾಗಿದೆ. ಆದರೆ ಆರೋಪಿಗಳು ಪರಾರಿ ಹಿಡಿಯುವುದು ಪೋಲೀಸರಿಗೂ ಬೇಕಿಲ್ಲ.

ಬೀದರ್ ಜಿಲ್ಲೆಗೆ ಮುಖ್ಯಮಂತ್ರಿ ಬರುವ ಸುದ್ದಿ ಹಬ್ಬಿತು. ಉರ್ಕಿಯ ಯುವಕರಾಗಿ ಮಹಿಳೆಯರು ಚಿಟ್ಟಾದ ಸಂಗಾತಿಗಳ ನೇತೃತ್ವದಲ್ಲಿ ಕೆಂಬಾವುಟ ಕೈಗೆತ್ತಿಕೊಂಡು ಹೊರಟರು. ನ್ಯಾಯ ಕೇಳಿ ಹೊರಟರು. 'ವೇದ ಗಡಗಡ ನಡುಗಿತ್ತು. ಶಾಸ್ತ್ರ ಕೆಲ ಸಾರಿತ್ತು. ಆಗಮ ಹೆರ ತೊಲಗಿತ್ತು', ದಲಿತರ ಕೈಗೆ ಕೆಂಬಾವುಟ ಶಕ್ತಿಯಾಗಿ ಬಂದ ಕಾರಣ...

23 ಮೇ 2007ರಂದು ಸಿಪಿಐ(ಎಂ) ಪಕ್ಷದಡಿ ದಲಿತ ಜನತೆ ಬಸವಕಲ್ಯಾಣದ ನೆಲದಲ್ಲಿ ಮೆರವಣಿಗೆ ನಡೆಸಿದರು. ಜಾತಿ ಪದ್ದತಿಗೆ ಧಿಕ್ಕಾರ ಸಾರಿದರು. ಸ್ವಾಭಿಮಾನ ದಿಂದ ಬದುಕುವ ಹಕ್ಕನ್ನು ರುಜು ಗೊಳಿಸಿದರು.

ದೂರದಿಂದ ಸಂತನೊಬ್ಬ ಏಕತಾರಿ ಮಿಡಿದು ದನಿಯೆತ್ತಿ ಹಾಡುತ್ತಿದ್ದ;

'ಮುಡಿಚೆಟ್ಟೆನೊಳ ಬಂದು ಮುಟ್ಟಿ ತಟ್ಟಿ ಅಂತೀರಿ.
ಮುಡಿಚೆಟ್ಟ್ಯಾವಲ್ಲಾದ ಹೇಳಣ್ಣ...?'

○

ಸ್ವಲ್ಪ ಇಲ್ನೋಡಿ, ದೇಶ ಪ್ರೇಮಿಗಳು ಕೃಷ್ಣನ ಜನ್ಮಸ್ಥಳದಲ್ಲಿದ್ದಾರೆ

ಇಲ್ಲಿ ನೋಡಿ! ನೀವು ಈ ದೇಶ ಪ್ರೇಮಿಗಳನ್ನು, ಧರ್ಮ ಬೀರುಗಳನ್ನು ಪರಿಚಯಿಸಿಕೊಳ್ಳಬೇಕು. ಅವರೆಂದರೆ. ಕಡಬದ ಬಾಲ್ಯ ಪುತ್ತಿಲ ಮನೆ ನಿವಾಸಿ ಶೀನಪ್ರಸಾದ್‌ರ ಪುತ್ರ ರವಿಯಾನೆ ನವೀನ (24) ಓಣಿ ಬಾಗಿಲು ನಿವಾಸಿ ಸೇಸಪ್ಪ ಸಾತರ ಪುತ್ರ ಸತೀಶ್ (19) ಕೇವಳದ ಪಾಂಡುರಂಗನ ಗೌಡರ ಪುತ್ರ ಮಿಥುನ್ (22) ಇವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕಡಬದ ಬಳಿಯ ಊರಿನವರು.

ಇವರು ದೇಶಪ್ರೇಮಿಗಳೆಂದೂ, ಧರ್ಮ ರಕ್ಷಕರೆಂದೂ ಸರ್ಟಿಫಿಕೆಟ್‌ನ್ನು ಆರ್.ಎಸ್.ಎಸ್. ನೀಡಿರುವುದರಿಂದ ಅವರ ಅರ್ಹತೆಯನ್ನು ಪ್ರಶ್ನಿಸುವ ಅಗತ್ಯವೇ ಇಲ್ಲ.

ಈ ಮೂರವರು 'ದೇ.ಭ' ಮತ್ತು 'ಧ ರ' ಗಳು ಸೇರಿ ಒಂದು ಮಹತ್ಕಾರ್ಯ ಮಾಡಿದ್ದಾರೆ. ತಮ್ಮೂರಿನ ಬಳಿಯೇ ಒಂದು 800 ರಷ್ಟು ವರ್ಷಗಳ ಹಳೆಯದಾದ ಪುರಾತನ ದೇವಾಲಯ ಶಿಥಿಲ ಸಾಮ್ರಾಜ್ಯದಲ್ಲಿ ನಾವಾರಿನ ಶಂಕರ ನಾರಾಯಣ ದೇವಸ್ಥಾನದಲ್ಲಿ ಶಿವ ಮತ್ತು ವಿಷ್ಣುವಿನ ಸಂಗಮವಾದ ವಿಗ್ರಹವೊಂದಿತ್ತು. ಪುರಾತನವನ್ನು ದೇವರ ಮೇಲೆ ವಿಪರೀತ ಪ್ರೀತಿಇರುವ ಈ ಮೂವರು ಆ ಅನುಸುತ್ತಾಗಿ ದೇವರ ವಿಗ್ರಹವನ್ನು (ವಜ್ರ ಲೇಪಿತ) ಹೊಳಪಿನ ಮಧ್ಯರಾತ್ರಿಯಲ್ಲಿ ಕಿತ್ತ ಕಳ್ಳತನದಿಂದ ಸಾಗಿಸುವಾಗ ಮಾಲು ಸಮೇತ ಪೋಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಈ ಮನೋಭಾವರನ್ನು ವಿಚಾರಿಸಲಾಗಿ ಭಜರಂಗದಳ, ಆರ್.ಎಸ್.ಎಸ್. ಬಿಜೆಪಿಯ ಸರ್ಟಿಫಿಕೆಟ್ ತೋರಿಸಿದ್ದಾರೆ. ಅಂತೂ ಈಗ ಕೇಸ್ ಹಾಕಿಕೊಂಡು ಕೃಷ್ಣನ ಜನ್ಮಸ್ಥಳದಲ್ಲಿ ಪವಡಿಸುತ್ತಿದ್ದಾರೆ. ಹೇಗಿದೆ ದೇಶಭಕ್ತರ ಸತ್ಕಾರ್ಯ ಅಂತೂ ಇನ್ನೂ ಚಿಡ್ಡಿಪಡೆ ಇವರ ಬಿಡುಗಡೆಗಾಗಿ ಬೀದಿಗಿಳಿದ ಸುದ್ದಿಯಿಲ್ಲ.! ಗೊತ್ತಾಯ್ತಲ್ಲ.. ಯಾಕೆ ಈ ಪರಿವಾರ ಧರ್ಮ ದೇವರ ಬಗ್ಗೆ ಅಷ್ಟೊಂದು ಬಾಯ್ಬಡಿದುಕೊಳ್ಳುತ್ತೇ ಅಂತಾ! ಆಹಾ ರಕ್ಷಣೆಯ ಎಂತಹ ತಂತ್ರ!

ಅಂದ್ಹಾಗೆ ಹೈದ್ರಾಬಾದ್ ನಗರದ ಬಿಜೆಪಿ ಅಧ್ಯಕ್ಷ ಪುರಾತನ ಗಣೇಶನ ವಿಗ್ರಹ ಕಳ್ಳಸಾಗಾಣಿಕೆ ಮಾಡುವಾಗ ಸಿಕ್ಕಿಬಿದ್ದ ಕೇಸ್ ಎದುರಿಸುತ್ತಿದ್ದುದು ನೆನಪಿದೆಯೇ? ಇದ್ದಾರೆ ಇದನ್ನು ಸೇರಿಸಿಕೊಳ್ಳಿ.

ದಲಿತರ ಮೇಲಿನ ದೌರ್ಜನ್ಯಗಳು-ಆತಂಕಕಾರಿ ಘಟನೆಗಳು

ಹಲವು ಕಂಬಾಲಪಲ್ಲಿ ಸೃಷ್ಟಿಯಾಗಬೇಕೆ?

ರಾಜ್ಯದಾದ್ಯಂತ ಸರಣಿ ಎಂಬಂತೆ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಲೇ ಇವೆ. ಇದಕ್ಕೆ ಕೊನೆ ಎಂದು ?

ಕಂಬಾಲಪಲ್ಲಿಯ ಏಳು ಜನ ದಲಿತರ ಸಜೀವ ದಹನಕ್ಕೆ ನ್ಯಾಯ ಒದಗಿಸುವಲ್ಲಿ ನಮ್ಮ ಇಡೀ ವ್ಯವಸ್ಥೆಯೇ ವಿಫಲವಾಯ್ತು. ದಲಿತರ ಮೇಲಿನ ದೌರ್ಜನ್ಯದ ಪ್ರಶ್ನೆ ಬಂದಾಗ ನಮ್ಮ ನ್ಯಾಯಾಲಯಗಳು, ಸರ್ಕಾರ ಆ ಪ್ರಕರಣವನ್ನು ಇತರೆ ಕ್ರಿಮಿನಲ್ ಪ್ರಕರಣಗಳಂತೆ ಪರಿಗಣಿಸಿ ಕೈ ತೊಳೆದುಕೊಂಡಿದ್ದೇ ಇದಕ್ಕೆ ಪ್ರಮುಖ ಕಾರಣ. ಹೀಗಾಗಿ ಈ ಪ್ರಕರಣವನ್ನು ಪುನರ್ ವಿಚಾರಣೆಗೊಳಪಡಿಸಬೇಕು ಎಂಬ ಬೇಡಿಕೆಗೆ ರಾಜ್ಯದ ನಿರ್ಲಜ್ಜ ಸರ್ಕಾರ ತಲೆ ಕೆಡಿಸಿಕೊಂಡಿಲ್ಲ. ಕೇವಲ ಮೇಲ್ಮನವಿಯ ನಾಟಕೀಯ ಕ್ರಮಕ್ಕೆ ಮುಂದಾಗಿರುವ ಪರಿಣಾಮ ಕಂಬಾಲಪಲ್ಲಿ ದಲಿತರಿಗೆ ನ್ಯಾಯ ಸಿಗುವ ಯಾವುದೇ ಮುನ್ಸೂಚನೆ ಕಾಣುತ್ತಿಲ್ಲ.

ಈ ಮಧ್ಯೆ ಆತಂಕದ ಸಂಗತಿಯೆಂದರೆ ಕಂಬಾಲಪಲ್ಲಿಯ ನೊಂದ ದಲಿತರಿಗೆ ನ್ಯಾಯವೇ ಇನ್ನೂ ಮರೀಚಿಕೆಯಾಗಿರುವಾಗ ರಾಜ್ಯದ ಹಲವೆಡೆ ಇತ್ತೀಚಿನ ದಿನಗಳಲ್ಲಿ ದಲಿತರ ಮೇಲೆ ಮತ್ತೆ ಮತ್ತೆ ದೌರ್ಜನ್ಯಗಳು ಎಗ್ಗಿಲ್ಲದೆ ಮುಂದುವರೆದಿವೆ.

ಒಂದು ಕಡೆ ಆಧುನೀಕರಣ, ಜಾಗತೀಕರಣ ಅಂತೆಲ್ಲಾ ಭಾರೀ ಪ್ರಚಾರ ನಡೆಯುತ್ತಿರುವಾಗಲೇ ಗ್ರಾಮೀಣ ಭಾರತದಲ್ಲಿ ತಲತಲಾಂತರದಿಂದ ಅಸ್ಪೃಶ್ಯತೆಯ ಶಾಪವನ್ನು ಹೊತ್ತುಕೊಂಡೇ ಬಂದಿರುವ ದಲಿತರಿಗೆ ಅದರಿಂದ ಮುಕ್ತಿ ಸಿಗುತ್ತಿಲ್ಲ. ಜಾತಿಯ ಹೆಸರಲ್ಲಿ, ನೀರಿನ ಹೆಸರಲ್ಲಿ, ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಂಡ ನೆಪದಲ್ಲಿ, ಉತ್ತಮ ಶಿಕ್ಷಣ ಪಡೆದಿದ್ದಕ್ಕಾಗಿ, ಅನ್ಯಾಯವನ್ನು ಪ್ರಶ್ನೆ ಮಾಡಿದ್ದಕ್ಕಾಗಿ, ಅಷ್ಟೇಕೆ, ಒಳ್ಳೆಯ ಬಟ್ಟೆ ಧರಿಸಿದ್ದಕ್ಕಾಗಿಯೇ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ ಆಶ್ಚರ್ಯ ಎಂದರೆ ಇದು ಬಹಳಷ್ಟು ಜನರಿಗೆ ಒಂದು ಗಂಭೀರ ಪ್ರಶ್ನೆಯೇ ಅಲ್ಲ ಇದು ನಿಜಕ್ಕೂ ಆತಂಕಕಾರಿ ವಿಷಯ.

ರಾಜ್ಯದಲ್ಲಿ ದಲಿತರ ಮೇಲೆ ನಿರಂತರ ದಬ್ಬಾಳಿಕೆಗಳ ಸರಣಿಯೇ ಮುಂದುವರೆದಿದೆ. ಕೇವಲ ಒಂದು ತಿಂಗಳೊಳಗಾಗಿ ವರದಿಯಾಗಿರುವ ಸ್ಯಾಂಪಲ್‌ಗಳು ಮಾತ್ರ ಇಲ್ಲಿವೆ.

■ ಸತ್ತ ಸುದ್ದಿ ಒಯ್ಯದಿದ್ದಕ್ಕಾಗಿ 65 ವರ್ಷ ವಯಸ್ಸಿನ ದಲಿತರ ವ್ಯಕ್ತಿಯೊಬ್ಬರ ಮೇಲೆ ಸವರ್ಣೀಯರು ಹಲ್ಲೆ ನಡೆಸಿದ ಘಟನೆ ಗದಗ್ ಜಿಲ್ಲೆಯಲ್ಲಿ ನಡೆದಿದೆ. ತೀವ್ರವಾಗಿ ಗಾಯಗೊಂಡ ಆ ದಲಿತ ವೃದ್ಧರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.


■ ಅನಕ್ಷರಸ್ಥ ಮುಗ್ಧ ದಲಿತ ಮಹಿಳೆಯೊಬ್ಬರನ್ನು ವಂಚಿಸಿ ಆಕೆಯ ಭೂಮಿಯನ್ನು ಕಬಳಿಸಿದ ಘಟನೆ ಕೋಲಾರ ಜಿಲ್ಲೆ ಬಂಗಾರಪೇಟೆಯಲ್ಲಿ ನಡೆದಿದೆ. ಅದೇ ಜಿಲ್ಲೆಯ ಚಿಂತಾಮಣಿ ತಾಲೂಕಿನ ಮದ್ದಲಹಳ್ಳಿಯಲ್ಲಿ ದಲಿತ ಮಹಿಳೆ ಮೇಲೆ ಹಲ್ಲೆ ನಡೆಸಲಾಗಿದೆ.

■ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ದೊಡ್ಡ ಅರಳಗೆರೆಯ ಸರ್ವೆ ನಂ.45-45, ಎಕರೆ ಭೂಮಿ ದಲಿತರಿಗೆ ಸೇರಿದ್ದು. ಆದರೆ ಅದನ್ನು ಕಬಳಿಸಿ ದಲಿತರಿಗೆ ಅನ್ಯಾಯ ಮಾಡಿರುವ ಘಟನೆ ನಡೆದಿದೆ.

ಅಂದು ಕಂಬಾಲಪಲ್ಲಿ ಈಗ ಕಡಕೋಳ.... ಕನ್ನಘಟ್ಟ.... ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಕಡಕೊಳದಲ್ಲಿ ವರ್ಷದಿಂದ ಹೊತ್ತಿರುವ ಸಂಘರ್ಷದ ಬೆಂಕಿ ಇನ್ನೂ ಆರಿಲ್ಲ. ಅದು ಆರುವ ಲಕ್ಷಣ ಕಾಣುತ್ತಿಲ್ಲ.

ಈಗ್ಗೆ ಎಂಟು ತಿಂಗಳ ಹಿಂದೆ ಜಾಗೃತಗೊಂಡ ದಲಿತ ಯುವಕರು ಊರಿನ ಮೇಲ್ವರ್ಗದವರ ಶೋಷಣೆ ವಿರುದ್ಧ ತಿರುಗಿದ್ದೇ ಇದಕ್ಕೆ ಕಾರಣ. ಆಗ ಇಡೀ ಊರೇ ಹತ್ತಿ ಉರಿದಿತ್ತು. ಜಿಲ್ಲಾಡಳಿತ ಮಧ್ಯೆ ಪ್ರವೇಶಿಸಿ ದಲಿತರಿಗಾಗಿಯೇ ಪ್ರತ್ಯೇಕ, ಹಿಟ್ಟಿನ ಗಿರಣಿ, ಕಿರಾಣಿ ಅಂಗಡಿ, ಫೋನ್ ವ್ಯವಸ್ಥೆ, ನೀರಿನ ವ್ಯವಸ್ಥೆ ಮಾಡಿತ್ತು. ಆದರೆ ಮೇಲ್ವರ್ಗದವರಿಗೆ ಈ ದಲಿತರ ವಿರುದ್ಧ ಸೇಡು ತೀರಿಸಿಕೊಳ್ಳುವ ಹಗೆ ಹಾಗೆ ಇತ್ತು. ಇದೀಗ ದಲಿತರನ್ನೇ ಎರಡು ಗುಂಪುಗಳನ್ನಾಗಿ ಒಡೆದು, ಒಂದು ಗುಂಪನ್ನು ಎತ್ತಿ ಕಟ್ಟಲು ಪ್ರಯತ್ನಿಸಿ ಮತ್ತೆ ಜಾತಿ ವೈಷಮ್ಯದ ಕಿಡಿ ಹೊತ್ತಿಸಿದ್ದಾರೆ. ಹೀಗಾಗಿ ಪುನಃ ಕಡಕೊಳ ಇತ್ತೀಚೆಗೆ ಉದ್ವಿಗ್ನಗೊಂಡಿದೆ.

ಅಂದು ಸಂತ ಕಡಕೋಳ ಮಡಿವಾಳಜ್ಜನ ಸೌಹಾರ್ದತೆ ಸಂದೇಶ ಸಾರಿದ್ದ ಕಡಕೋಳ ಇಂದು ದಲಿತರ ಮೇಲಿನ ದೌರ್ಜನ್ಯದಿಂದ ಕುಖ್ಯಾತಿ ಪಡೆಯುತ್ತಿದೆ.



ತಮ್ಮ ಕುಟುಂಬದವರ ಕೂದಲನ್ನು ತಾವೇ ಕತ್ತರಿಸಿಕೊಳ್ಳಬೇಕಾದ ದಲಿತರ ಸ್ಥಿತಿ

ಸಿಹಿ ನೀರು ಕೇಳಿದ್ದಕ್ಕಾಗಿ ಊರು ಬಿಟ್ಟ ಯುವಕ :

ಗ್ರಾಮದಲ್ಲಿ ಇರುವುದು ಸರ್ಕಾರದಿಂದ ಕೊರೆಸಲಾದ 3 ಕೊಳವೆ ಬಾವಿಗಳು. ದುರಾದೃಷ್ಟವೆಂಬಂತೆ ದಲಿತರ ಕೇರಿಯಲ್ಲಿ ಬಿದ್ದಿದ್ದು ಮಾತ್ರ ಉಪ್ಪು ನೀರು. ಇದು ತುಮಕೂರು ಜಿಲ್ಲೆ ತಿಪಟೂರಿನ ಕನ್ನಘಟ್ಟ ಗ್ರಾಮದ ಕಥೆ. ಕುಡಿಯುವ ನೀರಿಗಾಗಿ ಮೇಲ್ವರ್ಗದ ಕೇರಿಯಲ್ಲಿದ್ದ ಸಿಹಿ ನೀರಿಗಾಗಿ ದಲಿತರು ಕಾಲಿಟ್ಟಿದ್ದೇ ಬಂತು. ಕೆಂಡಾಮಂಡಲದಿಂದ ಮೇಲ್ವರ್ಗದ ಜನ ದಲಿತರಿಗೆ ನೀರು ನೀಡದೆ ಧಮಕಿ ಹಾಕಿದರು. ಇದನ್ನು ಪ್ರಶ್ನಿಸಿದ ದಲಿತ ಪದವೀದರ ಯುವಕನಿಗೆ ಸಿಕ್ಕಿದ್ದು ಜೀವ ಬೆದರಿಕೆ ಮಾತ್ರ. ಪರಿಣಾಮವಾಗಿ ದಲಿತರಿಗೆ ಸಿಹಿ ನೀರಿಗಾಗಿ ಹೋರಾಡಿದ ಆ ಯುವಕನನ್ನು ಊರು ಬಿಡಿಸಿ ಓಡಿಸಿದ ಘಟನೆ ನಡೆದಿದೆ.

ಹೀಗೆ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿನಿತ್ಯ ಒಂದಲ್ಲ ಒಂದು ದೌರ್ಜನ್ಯ ದಬ್ಬಾಳಿಕೆ ಪ್ರಕರಣಗಳು ನಿರಂತರವಾಗಿ ನಡೆಯುತ್ತಲೇ ಇವೆ. ಇವು ಕೆಲವೊಮ್ಮೆ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಗಳಾಗಿ ಮುದ್ರಣವೂ ಆಗುತ್ತಿವೆ. ಆದರೆ ಇದಕ್ಕೆ ಪರಿಹಾರ ಮಾತ್ರ ಸಿಗುತ್ತಿಲ್ಲ. ರಾಜ್ಯದ ಸಮ್ಮಿಶ್ರ ಸರ್ಕಾರ ಮತ್ತು ಸ್ವತಃ ಗೃಹ ಖಾತೆ ಹೊಂದಿರುವ ಲೋಹಿಯಾವಾದಿ, ಬುದ್ಧಿಜೀವಿ ಎಂದು ಹೇಳಿಕೊಳ್ಳುವ ಎಂ.ಪಿ.ಪ್ರಕಾಶ್ ಹೇಳಿಕೆ ಬಿಟ್ಟರೆ ಮತ್ತಿನ್ನೇನೂ ಮಾಡುತ್ತಿಲ್ಲ.

ಸರ್ಕಾರದ ಇಂತಹ ನಿರ್ಲಕ್ಷವನ್ನು ಬದಲಾಯಿಸಲು, ದಲಿತರಲ್ಲಿ ಬೆಳೆದಿರುವ ಜಾಗೃತಿಯನ್ನು ಬಳಸಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಟ್ಟುವುದು ಈಗಿರುವ ದಾರಿ. ಈ ದಿಶೆಯಲ್ಲಿ ಎಲ್ಲಾ ಜನಪರ ಸಂಘಟನೆಗಳು ಕೆಲಸ ಮಾಡಬೇಕಿದೆ. ಇಲ್ಲದಿದ್ದಲ್ಲಿ ಮತ್ತೆ ಮತ್ತೆ ಕಂಬಾಲಪಲ್ಲಿಯಂತಹ ಘಟನೆಗಳು ಮರುಕಳಿಸುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

● ಕೆ.ಮಹಾಂತೇಶ್



■ ಜಯ

ನ್ಯೂಕ್ಲಿಯರ್ (ಅಣು) ಶಕ್ತಿಯಿಂದ ವಿದ್ಯುತ್ ತಯಾರಿಸುವುದು ಹೇಗೆ?

ಉಷ್ಣ (ಥರ್ಮಲ್) ವಿದ್ಯುತ್ ಘಟಕಗಳಲ್ಲಿ ಸಾಮಾನ್ಯವಾಗಿ ಕಲ್ಲಿದ್ದಲು, ಪೆಟ್ರೋಲಿಯಂ ಉತ್ಪನ್ನ, ಇತ್ಯಾದಿಗಳನ್ನು ಉರುವಲಾಗಿ ಬಳಸಿ ಅದರಿಂದ ವಿದ್ಯುತ್ ಉತ್ಪಾದಿಸಲಾಗುತ್ತದೆ. ಉದಾಹರಣೆಗೆ: ರಾಯಚೂರು ಉಷ್ಣ ವಿದ್ಯುತ್ ಘಟಕ, ಇತ್ಯಾದಿ. ಆದರೆ ಅಣು ವಿದ್ಯುತ್ ಸ್ಥಾವರ ಘಟಕಗಳಲ್ಲಿ ಯುರೋನಿಯಂನ್ನು ಇಂಧನವಾಗಿ ಬಳಸಲಾಗುತ್ತದೆ. ಉದಾ: ಕೈಗಾ ಅಣು ಶಕ್ತಿ ವಿದ್ಯುತ್ ಘಟಕ, ಇತ್ಯಾದಿ. ವಿಶ್ವದಾದ್ಯಂತ ಭೂಗರ್ಭದ ಶಿಲೆಗಳಲ್ಲಿ ಯುರೋನಿಯಂ ದೊರೆಯುತ್ತದೆ. ಫ್ರಾನ್ಸ್‌ನಲ್ಲಿ ದೇಶದ ಒಟ್ಟು ವಿದ್ಯುತ್‌ನಲ್ಲಿ ಶೇ. 75ರಷ್ಟು ಅಣು ವಿದ್ಯುತ್ ಉತ್ಪಾದಿಸಿದರೆ, ಅಮೇರಿಕಾ ದಲ್ಲಿ ಶೇ. 15ರಷ್ಟು, ಮತ್ತು ಭಾರತದಲ್ಲಿ ಕೇವಲ ಶೇ. 3ರಷ್ಟು ಅಣುವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ.

ಅಣು ವಿದ್ಯುತ್

ಯಾವುದೇ ವಸ್ತುವು ಮೂಲತ: ಮೂಲವಸ್ತುಗಳಿಂದ ರಚನೆಯಾಗಿರುತ್ತದೆ. ಮೂಲವಸ್ತುವಿನಲ್ಲಿ ಅತಿ ಸಣ್ಣ ಕಣಗಳಾದ ಪರಮಾಣುಗಳು ಒಂದಕ್ಕೊಂದು ಅಂಟಿಕೊಂಡಂತೆ ಒಂದು ನಿರ್ದಿಷ್ಟ ಆಕಾರದಲ್ಲಿ ಬಂಧಿಸಲ್ಪಟ್ಟಿರುತ್ತವೆ. ಅವುಗಳನ್ನು ಹಿಡಿದಿಟ್ಟಿರುವ ಬಂಧಕ್ಕೆ ಅಗಾಧ ಶಕ್ತಿಯಿದೆ. ಪ್ರತಿಯೊಂದು ಪರಮಾಣುವಿನ ಕೇಂದ್ರದಲ್ಲಿ ನ್ಯೂಕ್ಲಿಯಸ್ ಇದ್ದು ಅದರ ಸುತ್ತಲೂ ಎಲೆಕ್ಟ್ರಾನ್‌ಗಳು ಸುತ್ತುತ್ತಿರುತ್ತವೆ. ಒಂದು ಭಾರ ಪರಮಾಣುವಿನ ನ್ಯೂಕ್ಲಿಯಸ್ (ಉದಾಹರಣೆಗೆ: ಯುರೇನಿಯಂ)ನ್ನು ಎರಡು ಲಘು ಪರಮಾಣುಗಳಾಗಿ ವಿಭಜಿಸಿದಾಗ ಈ ಬೈಜಿಕ ಕ್ರಿಯೆಯಲ್ಲಿ ಅತೀವ ಪ್ರಮಾಣದ ಶಕ್ತಿಯು ಬಿಡುಗಡೆಯಾಗುತ್ತದೆ. ಇದನ್ನು ಬೈಜಿಕ ವಿದಲನ (ನ್ಯೂಕ್ಲಿಯರ್ ಫಿಜ಼ನ್) ಕ್ರಿಯೆ ಎಂದು ಕರೆಯಲಾಗುತ್ತದೆ. ಹಾಗೆಯೇ, ಎರಡು ಲಘು ಪರಮಾಣುಗಳನ್ನು ಒಟ್ಟಿಗೆ ಸೇರಿಸಿದಾಗ ದೊಡ್ಡದೊಂದು ಪರಮಾಣು ರೂಪುಗೊಂಡು ಈ ಕ್ರಿಯೆಯಲ್ಲೂ ಅತೀವ ಪ್ರಮಾಣದ ಶಕ್ತಿಯು ಬಿಡುಗಡೆಯಾಗುತ್ತದೆ. ಇದನ್ನು ಬೈಜಿಕ ಸಂಲಯನ (ನ್ಯೂಕ್ಲಿಯರ್ ಫ್ಯೂಸನ್) ಎಂದು ಕರೆಯಲಾಗುತ್ತದೆ. ಹೀಗೆ ಬೈಜಿಕ ವಿದಲನ ಅಥವಾ ಬೈಜಿಕ ಸಂಲಯನ ಕ್ರಿಯೆಗಳಿಂದ ಬಿಡುಗಡೆಯಾಗುವ ಅಪಾರ ಪ್ರಮಾಣದ ಉಷ್ಣಶಕ್ತಿಯನ್ನೇ ಬಳಸಿ ವಿದ್ಯುತ್ ತಯಾರಿಸಲಾಗುತ್ತದೆ. ಯುರೋನಿಯಂನ್ನು ಗಣಿಗಳಿಂದ ಹೊರತೆಗೆದು ಸಂಸ್ಕರಿಸಿ ಸಣ್ಣ ಸಣ್ಣ ಪೆಲೆಟ್‌ಗಳ ರೂಪಕ್ಕೆ ತರಲಾಗುತ್ತದೆ. ಯುರೋನಿಯಂನಲ್ಲಿ ವಿಕಿರಣವನ್ನು ಹೊರಸೂಸುವ ಗುಣವಿದ್ದು ಈ ವಿಕಿರಣವು ವಾತಾವರಣಕ್ಕೆ ಹೊರಸೂಸದಂತೆ ಎಚ್ಚರ ವಹಿಸಲಾಗುತ್ತದೆ. ಇಲ್ಲದಿದ್ದಲ್ಲಿ ನ್ಯೂಕ್ಲಿಯರ್ ವಿಷವು ಸುತ್ತಲಿನ ವಾತಾವರಣದ ಮೇಲೆ ನಿಯಂತ್ರಿಸಲಾಗದ ಅಪಾಯಕಾರಿ ದುಷ್ಪರಿಣಾಮಗಳನ್ನು ಬೀರುತ್ತದೆ.

ಅಣು ವಿದ್ಯುತ್ ಸ್ಥಾವರಗಳಲ್ಲಿ ಯುರೋನಿಯಂನ್ನು ವಿಭಜನೆಗೊಳಿಸಿದಾಗ ಅದರಿಂದ ಉಂಟಾಗುವ ಶಾಖದಿಂದ ನೀರನ್ನು ಕುದಿಸಿ ಹಬೆಯಾಗಿಸಲಾಗುತ್ತದೆ. ಈ ರೀತಿ ಉಂಟಾದ ಹಬೆಯಿಂದ ಟರ್ಬೈನ್- ಜನರೇಟರ್‌ಗಳನ್ನು ತಿರುಗಿಸಿ ವಿದ್ಯುತ್‌ನ್ನು ಉತ್ಪಾದಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ನ್ಯೂಕ್ಲಿಯರ್ ತ್ಯಾಜ್ಯ ವಸ್ತುವು ಬಿಡುಗಡೆಯಾಗುತ್ತದೆ. ಈ ತ್ಯಾಜ್ಯ ವಸ್ತುವನ್ನು ಪರಿಸರಕ್ಕೆ ಹಾನಿಯಾಗದಂತೆ ವಿಲೇವಾರಿ ಮಾಡುವುದೇ ಅತಿ ದೊಡ್ಡ ಸಮಸ್ಯೆಯಾಗಿದೆ. ಜೊತೆಗೆ ಅಣು ಸ್ಥಾವರ ವಿದ್ಯುತ್ ಘಟಕಗಳ ಸುರಕ್ಷತೆಯು ಮತ್ತೊಂದು ಸವಾಲಿನ ವಿಷಯವೆನಿಸಿದೆ.

ಅಣು ವಿದ್ಯುತ್ ಸ್ಥಾವರದಿಂದ ಬಿಡುಗಡೆಯಾಗುವ ನ್ಯೂಕ್ಲಿಯರ್ ತ್ಯಾಜ್ಯ ವಸ್ತುವನ್ನು ಪುನರ್-ಸಂಸ್ಕರಿಸಿ ಶೇ. 95ರಷ್ಟು ಯುರೋನಿಯಂನ್ನು ಮತ್ತೆ ಪಡೆಯಬಹುದಾದರೂ ಅದಕ್ಕೆ ತಗಲುವ ವೆಚ್ಚ ಅಧಿಕ ಮತ್ತು ತಂತ್ರಜ್ಞಾನ ಆಧುನಿಕವಾದದ್ದು. ಇದರಿಂದ ತ್ಯಾಜ್ಯವಸ್ತುವಿನಲ್ಲಿ ವಿಕಿರಣ ವಸ್ತುವಿನ ಪಾಲನ್ನು ಕಡಿಮೆ ಮಾಡಬಹುದು.

ಏನಿದು ಭಾರತ-ಅಮೇರಿಕಾ 123 ಒಪ್ಪಂದ?:

123 ಒಪ್ಪಂದವೆಂದೇ ಕರೆಯಲಾಗಿರುವ ಅಮೇರಿಕಾ ಅಣುಶಕ್ತಿ ಕಾಯಿದೆ 1954ರ ಸೆಕ್ಷನ್ 123ರ ಭಾರತ-ಅಮೇರಿಕಾ ಅಣ್ವಸ್ತ್ರ ಒಪ್ಪಂದ ಇನ್ನೂ ನೆನೆಗುದಿಯಲ್ಲೇ ಇದೆ. ಈ ಒಪ್ಪಂದದ ಮೂಲಕ ಭಾರತವನ್ನು ಅಣ್ವಸ್ತ್ರ ನಿಷೇಧ ಒಪ್ಪಂದದ ಬಲೆಯೊಳಗೆ ತರುವುದು, ಚೀನಾ ಮತ್ತು ಉತ್ತರ ಕೊರಿಯಾಗಳಿಗೆ ಪರ್ಯಾಯ ಶಕ್ತಿಯಾಗಿ ಭಾರತವನ್ನು ಛೂ ಬಿಡುವುದು, ಮಧ್ಯ ಏಷ್ಯಾದಲ್ಲಿ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಭಾರತದ ಸಹಾಯ ಪಡೆಯುವುದು ಮತ್ತು ಭಾರತದ 14 ನಾಗರೀಕ ಅಣುಸ್ಥಾವರ ಘಟಕಗಳನ್ನು ತಪಾಸಣೆ ಮಾಡಲು ಅವಕಾಶ ಪಡೆಯುವುದು - ಇವು ಅಮೇರಿಕಾದ ಮನದಾಳದ ಆಸೆಗಳು. ಆದರೆ, ಭಾರತವು ನಾಗರೀಕ ಮತ್ತು ಮಿಲಿಟರಿ ಅಣುಸ್ಥಾವರಗಳ ನಡುವೆ ಸ್ಪಷ್ಟವಾಗಿ ಇನ್ನೂ ಗೆರೆ ಎಳೆದುಕೊಂಡಿಲ್ಲದ ಕಾರಣ, ಈ ಒಪ್ಪಂದಕ್ಕೆ ತಿದ್ದುಪಡಿ ತರದೆ ಭಾರತವೇನಾದರೂ ಸಹಿ ಹಾಕಿದಲ್ಲಿ ಭಾರತದ ಮಿಲಿಟರಿ ಕ್ಷೇತ್ರಕ್ಕೆ ಅಮೇರಿಕಾವನ್ನು ಕರೆತಂದಾಗುತ್ತದೆ. ಇನ್ನೊಂದೆಡೆ, ಭಾರತದಲ್ಲಿ ಯುರೋನಿಯಂ ಕಡಿಮೆ ಪ್ರಮಾಣದಲ್ಲಿರುವುದರಿಂದ ಭಾರತವು ತನ್ನ ಅಣು ವಿದ್ಯುತ್ ಸ್ಥಾವರ ಘಟಕಗಳಿಗೆ ಅಮೇರಿಕಾದಿಂದ ಯುರೋನಿಯಂ ಪಡೆದು ತನ್ನ ಆಂತರಿಕ ಯುರೋನಿಯಂ ನ್ನು ಮತ್ತಷ್ಟು ನ್ಯೂಕ್ಲಿಯರ್ ಬಾಂಬುಗಳ ತಯಾರಿಕೆಗಾಗಿ ಬಳಸಿಕೊಳ್ಳಲು ಹವಣಿಸುತ್ತಿದೆಯೆಂಬುದು ಪಾಕಿಸ್ತಾನದ ಅಭಿಪ್ರಾಯವಾಗಿದೆ. ನ್ಯೂಕ್ಲಿಯರ್ ತ್ಯಾಜ್ಯ ವಸ್ತುವನ್ನು ತಾನು ಪುನರ್-ಸಂಸ್ಕರಿಸಲು ಅನುಮತಿ ನೀಡಬೇಕೆಂಬುದು ಭಾರತದ ಬೇಡಿಕೆಯಾಗಿದೆ. ಇಲ್ಲದಿದ್ದಲ್ಲಿ ಪುನರ್- ಸಂಸ್ಕರಣೆಯನ್ನೇ ದೊಡ್ಡ ವ್ಯಾಪಾರವನ್ನಾಗಿ ಮಾಡಿಕೊಂಡಿರುವ ಜಿ-5 ರಾಷ್ಟ್ರಗಳ ಹಿಂದೆ ಭಾರತ ತನ್ನ ನ್ಯೂಕ್ಲಿಯರ್ ತ್ಯಾಜ್ಯ ವಸ್ತು ಪುನರ್- ಸಂಸ್ಕರಣೆಗಾಗಿ [illegible] ಪಡಬೇಕಾಗುತ್ತದೆ.

ಸಾಲದೇ ಶಂಕರ್ ಮೂರ್ತಿಯವರು ಸ್ನಾತಕೋತ್ತರ ಪ್ರವೇಶಕ್ಕೆ ರಾಜ್ಯಮಟ್ಟದ ಸಿಇಟಿ ನಡೆಸಲು ಹೊರಟಿದ್ದಕ್ಕೆ ಗುಲ್ಬರ್ಗಾದಲ್ಲಿ ತೀವ್ರವಾದ ವಿರೋಧ

ಗುಲಬರ್ಗಾ: ಬಾಡಿದ ಕಮಲ ▪ ಬಿ.ಆರ್.ಪಾಟೀಲ್ ಮೇಲೆ ಸು.ಗುತ್ತೇದಾರ ಆರೋಪ ▪ ಮುಖ್ಯಮಂತ್ರಿ ಸ್ವಾಗತಕ್ಕೆ ಶವದ ಮೆರವಣಿಗೆ

ಚುನಾವಣೆಯಲ್ಲಿ ಆದಾನ ನಂತರ ಈಗ ಉಳ್ಳಾಲವಲ್ಲಿ ಗಟ್ಟಿರುವ ಕಾಂಗ್ರೆ ಪಕ್ಷಕ್ಕೆ ಜಿಲ್ಲೆಯಲ್ಲಿ ಹೊಸ ಹುರುಪು ಮೂಡಿದೆ. ಮೂಲೆಗೆ ಸೇರಿದ್ದ ಪಕ್ಷದ ಕಾರ್ಯಕರ್ತರು ಪುಳಕಿತಗೊಂಡು ಹೊರಬಂದಿದ್ದಾರೆ. ಅವರು ಮತ್ತು ಕೈಯಲ್ಲಿ ಪತ್ರಿಕೆಗಳನ್ನು ಹಿಡಿದುಕೊಂಡು ಸ್ಟೇಷನ್ ಬಜಾರ್ ಹಾಗೂ ಸೂಪರ್ ಮಾರ್ಕೆಟ್ಟಿನ ಕಾಮತ್ ಹೋಟೆಲ್‌ಗಳ ಎದುರಿಗೆ ಜಮಾಯಿಸುತ್ತಿದ್ದಾರೆ. ಜೂನ್ 6 ರಂದು ಮಧ್ಯಮ ಮಟ್ಟದ ಕಾರ್ಯಕರ್ತರು ಉಳ್ಳಾಲ ಗೆಲುವಿನ ಆಚರಣೆ ಮಾಡಿದ್ದಾರೆ. ಆಚರಣೆಯಲ್ಲಿ ಜಿಲ್ಲಾ ಮುಖಂಡರಾಗಲಿ ರಾಜ್ಯ ಮುಖಂಡರಾರು ಇರದೇ ಇರುವುದು ಒಂದು ವೈಪರಿತ್ಯವೇ ಸರಿ. ಅವರಿನ್ನೂ ಬೆಂಗಳೂರಿನಲ್ಲಿಯೇ ಹಗಲು ರಾತ್ರಿ ಆಚರಣೆಯಲ್ಲಿ ತೊಡಗಿರಬಹುದು.

ಇತ್ತ ಕಮಲವು ಬಾಡಿದಂತೆ ಕಾಣುತ್ತಿದೆ. ಆ ಕಾರ್ಯಕರ್ತರು ನಗರದ ಆಯಕಟ್ಟಿನ ಸ್ಥಳದಿಂದ ದೂರ ಉಳಿದು ಬಾಯಿಗೆ ಫೆವಿಕಾಲ್ ಹಚ್ಚಿಕೊಂಡಿದ್ದಾರೆ. ಜೆಡಿ(ಎಸ್) ನ ಹುಲ್ಲಿನ ಹೊರೆ ಪಾರ್ಟಿಯ ಮುಖಂಡರು ಅಂಡರ್‌ಗ್ರೌಂಡ್ ಹೋಗಿದ್ದಾರೆ. ಪಕ್ಷದ ಮಧ್ಯಮ ಮತ್ತು ಕೆಳ ಮಟ್ಟದ ಕಾರ್ಯಕರ್ತರು ಮುಖ ಸಿಂಡರಿಸಿಕೊಂಡು ತಮ್ಮ ತಮ್ಮ ಓಣಿಗಳಿಗೆ ವಾಪಸಾಗಿದ್ದಾರೆ.

ಜಿಲ್ಲೆಯ ಪ್ರಭಾವಿ ಜನತಾ ಪರಿವಾರದ ನಾಯಕರೆಂದೇ ಖ್ಯಾತಿ ಪಡೆದಿರುವ ಆದರೆ ಅಧಿಕಾರ ವಂಚಿತರಾಗಿರುವ ಮಾಜಿ ಕಾರ್ಮಿಕ ಸಚಿವ ಎಸ್.ಕೆ.ಕಾಂತಾರವರು ತಮ್ಮದೇ ಜೆಡಿ(ಎಸ್)ನ ಇಬ್ಬರು ಸಚಿವರ ವಿರುದ್ಧ ಚುನಾವಣಾ ವೆಚ್ಚದ ಬಗ್ಗೆ ಲೋಕಾಯುಕ್ತಕ್ಕೆ ಲಿಖಿತ ದೂರು ನೀಡಿ ಅವರನ್ನು ವಜಾ ಮಾಡುವಂತೆ ಲೋಕಾಯುಕ್ತವು ಸಿ.ಎಂ.ಗೆ ಶಿಫಾರಸ್ಸು ಮಾಡುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.


ಜೆಡಿ(ಎಸ್)ನಿಂದ ಅಮಾನತ್ತು ಗೊಂಡಿರುವ ಆಳಂದ ಶಾಸಕ ಬಿ.ಆರ್.ಪಾಟೀಲರ ಮೇಲೆ ಏಕ್‌ದಮ್ ಅಲ್ಲಿನ ಮಾಜಿ ಶಾಸಕ ಸುಭಾಷ್ ಗುತ್ತೇದಾರ ಎರಗಿ ಬಿದ್ದಿದ್ದಾರೆ. ಅವರು ಬಿ.ಆರ್.ಪಾಟೀಲರ ಮೇಲೆ ಕೇಂದ್ರ ರಾಜ್ಯ ಸರ್ಕಾರಗಳ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ ಮತ್ತು ಲೋಕಾಯುಕ್ತಕ್ಕೆ ಫಿರ್ಯಾದಿ ನೀಡುತ್ತೇ ವೆಂದು ಧಮಕಿ ಹಾಕಿದ್ದಾರೆ. ಇದಕ್ಕೆ ಸಮಂಜಸವಾದ ಉತ್ತರ ನೀಡದ ಬಿ.ಆರ್.ರವರು ಸುಭಾಷ್ ಮೇಲೆ ವೈಯಕ್ತಿಕ ಆರೋಪಕ್ಕೆ ಇಳಿದಿದ್ದಾರೆ.

ಇತ್ತೀಚಿಗೆ ಸಿ.ಎಂ. ಬೀದರಕ್ಕೆ ಬರುವ ಮುನ್ನ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಜನವಾದಿ ಮಹಿಳಾ ಸಂಘದ ಜಂಟಿ ಆಶ್ರಯದಲ್ಲಿ ಎಲ್ಲ ರಂಗಗಳಲ್ಲಿ ವಿಫಲರಾದ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತು ಕೃಷಿ ಸಚಿವ ಬಂಡೆಪ್ಪ ಕಾಶೆಂಪುರ ರವರ ಅಣುಕು ಶವಯಾತ್ರೆ ನಡೆದಿದೆ. ಇದಕ್ಕೆ ಜಿಲ್ಲೆಯಾದ್ಯಂತ ಉತ್ತಮ ಪ್ರತಿಕ್ರಿಯೇ ದೊರೆತಿದೆ. ಯಾಕೆಂದರೆ ಬೀದರ್‌ನಲ್ಲಿ ಜನರ ಸಮಸ್ಯೆಗಳ ಮಟ್ಟಿಗೆ ಹೇಳುವುದಾದರೆ ಅಲ್ಲಿ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳಲ್ಲಿ ಯಾವುದೇ ಅಂತರವಿಲ್ಲ. ಕಾಂಗ್ರೆ ಜೆಡಿ(ಎಸ್) ಬಿಜೆಪಿ ಒಟ್ಟಿಗೇನೇ ಜನರನ್ನು ಲೂಟಿ ಮಾಡುತ್ತಿದ್ದಾರೆ, ಜನರನ್ನು ನಿರ್ಲಕ್ಷಿಸಿದ್ದಾರೆ. ಸಿ.ಎಂ. ಬೀದರಕ್ಕೆ ಬಂದ ದಿವಸ ಸಿಪಿಐ(ಎಂ)ನವರು ಅವರಿಗೆ ಘೇರಾವ್ ಹಾಕಲು ಯತ್ನಿಸಿದರು. ಆ ಸಮಯದಲ್ಲಿ ಹುಮ್ನಾಬಾದ್ ಶಾಸಕ ಮಿರಾಜುದ್ದೀನ್ ಅಸಭ್ಯವಾಗಿ ನಡೆದು ಕೊಂಡಿದ್ದಾರೆ. ಅಷ್ಟೇ ಅಲ್ಲದೇ ಸಿ.ಪಿ.ಐ.(ಎಂ) ಸ್ಥಳೀಯ ಕಾರ್ಯಕರ್ತರ ಮೇಲೆ ಗೂಂಡಾಗಳನ್ನು ಛೂ ಬಿಟ್ಟಿದ್ದಾರೆ! ಇದರ ವಿರುದ್ಧ ಸಿಪಿಐ(ಎಂ) ಸಮರ ಸಾರಿದೆ.


ಎಸ್ ಎಸ್‌ಎಲ್‌ಸಿ ಪಿಯುಸಿ ಫಲಿತಾಂಶದಲ್ಲಿ ಗುಲಬರ್ಗಾ ಬೀದರ್‌ಗಳು ಎಂದಿನಂತೆ ಕೊನೆಯ ಸಾಲಿನಲ್ಲಿವೆ. ಇದಷ್ಟೇ ವ್ಯಕ್ತವಾಗಿದೆ. ಕಾಂಗ್ರೆ ಪಕ್ಷ (ಬಹುವಿರಳವಾಗಿ) ಇಂತಹದೊಂದು ಪ್ರಶ್ನೆ ಕೈಗೆತ್ತಿಕೊಂಡಿದೆ. ಅದರಂತೆ ಎಸ್.ಎಫ್.ಐ. ಸೇರಿದಂತೆ ಇತರ ಎಡ ಸಂಘಟನೆಗಳೂ ಪ್ರತಿಭಟಿಸಿವೆ. ಗುಲ್ಬರ್ಗ ಮಹಾನಗರಪಾಲಿಕೆಯ ಸುಮಾರು 500 ಜನ ಗುತ್ತಿಗೆ ಕಾರ್ಮಿಕರು 13 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದು ಅವರನ್ನು ಹಠಾತ್ತನೆ ವಜಾಗೊಳಿಸಿದ್ದುದನ್ನು ವಿರೋಧಿಸಿ ಆ ಕಾರ್ಮಿಕರು 29.08.2007ರಿಂದ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಪ್ರಾರಂಭಿಸಿದ್ದರು. ಅದಕ್ಕೆ ಸ್ಪಂದಿಸಿದ ಜಿಲ್ಲಾಡಳಿತ 04.06.2007ರಿಂದ ಮತ್ತೆ ಕೆಲಸಕ್ಕೆ ತೆಗೆದುಕೊಂಡಿದೆ. ಹೋರಾಟದ ನೇತೃತ್ವವನ್ನು ಎಸ್.ಕೆ. ಕಾಂತಾ ವಹಿಸಿದ್ದರು.

ಇತ್ತೀಚಿಗೆ ಖಾಸಗಿ ಕಾರ್ಯಕ್ರಮಕ್ಕೆಂದು ಗುಲ್ಬರ್ಗಾಕ್ಕೆ ಭೇಟಿ ಮಾಡಿದ ಡಿಸಿಎಂ ಯಡಿಯೂರಪ್ಪನವರು ಸಿಪಿಐ(ಎಂ) ನಿಂದ ರಾಜ್ಯ ಬಜೆಟ್‌ನ ಪೊಳ್ಳುತನದ ಕುರಿತು ನಡೆಸಿದ ವಿಚಾರಸಂಕಿರಣಕ್ಕೆ ಉತ್ತರವಾಗಿ, ಬಜೆಟ್‌ನಲ್ಲಿ ಹೈದ್ರಾಬಾದ್ ಕರ್ನಾಟಕಕ್ಕೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸಲಾಗುವುದೆಂದು ಹೇಳಿದ್ದಾರೆ.

ವರದಿ: **ಗಂಗಾ**



ಬೀದರ್‌ಗೆ ಮುಖ್ಯಮಂತ್ರಿಗಳನ್ನು ಆಹ್ವಾನಿಸಿದ್ದು ಆತ್ಮಹತ್ಯೆ ಮಾಡಿಕೊಂಡ ರೈತನ ಶವ ಮೆರವಣಿಗೆ ಮೂಲಕ. ಮಾನ್ಪಡೆ, ನೀಲಾ ಮುಂತಾದವರು



ಬಾಡಿಗೆ ಹೊರೆಯಲಿ ....

ಪುಟ 9 ರಿಂದ

ಹೊರ ದೇಶದ ಹುಡುಗರು ಧಾರಾಳವಾಗಿ ಬಾಡಿಗೆ ನೀಡಲು ಮುಂದಾಗುತ್ತಿರುವುದು, ಅಂತೆಯೇ ಐಟಿ ಬಿಟಿ ನೌಕರರಿಗೆ, ಉತ್ತಮ ಸಂಬಳ ಪಡೆವ ಇತರರಿಗೆ ಮೂರು ನಾಲ್ಕು ಸಾವಿರ ರೂಪಾಯಿಗಳನ್ನು ಬಾಡಿಗೆಗೆ ನೀಡುವುದು ಏನೂ ಅಲ್ಲಾ ಎಂಬಂತ ವಾಸ್ತವ ಪರಿಸ್ಥಿತಿ ನಿರ್ಮಾಣಗೊಂಡಿರುವುದು, ವ್ಯಾಪಕಗೊಂಡಿರುವ ರಿಯಲ್ ಎಸ್ಟೇಟ್ ಉದ್ದಿಮೆ, ಲಂಗು ಲಗಾಮು ಇಲ್ಲದ ಸರ್ಕಾರದ ನೀತಿಗಳು, ಬೆಂಗಳೂರಲ್ಲಿ ಸಾಮಾನ್ಯ ಜನ ವಾಸಿಸುವುದೇ ಕಷ್ಟ ಎಂಬ ಪರಿಸ್ಥಿತಿ ನಿರ್ಮಿಸುತ್ತಿವೆ. ನಿಯಂತ್ರಣ ವಿಲ್ಲದಂತೆ ಎಲ್ಲಾ ಊಹೆಗಳನ್ನು ಮೀರಿ ಮನೆ ಬಾಡಿಗೆ ದರಗಳು ಏರುತ್ತಿವೆ.

ಏನು ಮಾಡಬೇಕಿದೆ?

ಗಡಿದಾಟಿ ಬರುವ ಬಂಡವಾಳಕ್ಕೆ ಅನುವುಗೊಳಿಸಲು ಎಲ್ಲಾ ನೀತಿಗಳನ್ನು ಉದಾರೀಕರಿಸಬೇಕು, ಖಾಸಗೀಕರಣಕ್ಕೆ ಮುಕ್ತ ಅವಕಾಶ ಕಲ್ಪಿಸಬೇಕು ಎಂಬ ಎಲ್‌ಪಿಜಿ ನೀತಿಗಳ ಭಾಗವಾಗಿ 90ರ ಮಧ್ಯ ಭಾಗದಲ್ಲಿ ರಾಜ್ಯದಲ್ಲಿನ ಬಾಡಿಗೆ ನಿಯಂತ್ರಣ ಕಾಯ್ದೆ (Rent control Act) ಗೆ ತಿದ್ದುಪಡಿ ಮಾಡಿ, ಬಾಡಿಗೆದಾರರಿಗೆ ಇದ್ದ ಅಲ್ಪಸ್ವಲ್ಪ ರಕ್ಷಣೆಯೂ ಇಲ್ಲದಾದ ಮೇಲಂತೂ ಮನೆ ಬಾಡಿಗೆ ದರ ಎಗ್ಗಿಲ್ಲದೆ ಏರುತ್ತಿವೆ. ದುಡಿವ ಜನರನ್ನು ಬೆಂಗಳೂರಿನ ಗಡಿಯಿಂದಾಚೆ ದೂಡುತ್ತಿವೆ.


ಪರಿಣಾಮವಾಗಿ ದುಡಿಮೆಯ ಅರ್ಧಕ್ಕೂ ಹೆಚ್ಚು ಪಾಲು ಬಾಡಿಗೆಗೆ ಹೋಗುವಂಥ ಪರಿಸ್ಥಿತಿ ಗುತ್ತಿಗೆ ಕಾರ್ಮಿಕರು, ಗಾರ್ಮೆಂಟ್ಸ್, ಬೀಡಿ, ಅಗರಬತ್ತಿ, ಆಟೋ ಟ್ಯಾಕ್ಸಿ ಚಾಲಕರು ಮುಂತಾದ ಅಸಂಘಟಿತ ಕಾರ್ಮಿಕರಿಗೆ ಎದುರಾಗಿದೆ. ಬಾಡಿಗೆ ನಿಯಂತ್ರಣ ಕ್ರಮಗಳನ್ನು ಸರ್ಕಾರದ ವಸತಿ ನೀತಿಯ ಭಾಗವಾಗಿಯೇ ಬಿಗಿಗೊಳಿಸಬೇಕು ಎಂಬ ಕೂಗು ಸಾಮಾನ್ಯ ಜನರ ಕೂಗಾಗುತ್ತಿದೆ. ಪ್ರಾಮಾಣಿಕವಾಗಿ ಸಂಬಳವನ್ನೇ ನೆಚ್ಚಿ ಬದುಕುವ ಸರ್ಕಾರಿ ಅರೆ ಸರ್ಕಾರಿ ನೌಕರರು, ಪ್ರತಿಷ್ಠಿತ ಕಾರ್ಖಾನೆಗಳ ಕಾರ್ಮಿಕರು ಸಹ ಮನೆ ಬಾಡಿಗೆಯ ವಿಪರೀತ ಏರಿಕೆಗಳಿಂದಾಗಿ ತತ್ತರಿಸುವಂತಾಗಿದೆ.

ಬಾಡಿಗೆಯ ಹೊರೆಯಲ್ಲಿ ದುಡಿಮೆಯೆಲ್ಲಾ ಕರಗಿಹೋಗಿ ಬದುಕು ಸೊರಗುವಂತಾಗಿದೆ. ಇಂತಹ ಪರಿಸ್ಥಿತಿಯಿಂದ ಹೊರಬರಲು ಮನೆ ಬಾಡಿಗೆ ನಿಯಂತ್ರಣ ಕ್ರಮಗಳು ತುರ್ತಾಗಿ ಆಗಬೇಕಾದ ಜರೂರಿದೆ.

ಕವಿತೆ

ಪ್ರೀತಿಯಿರುವ ಕಡೆ

ಡಿ.ಬಿ. ಬಡಿಗೇರ




ಪ್ರೀತಿ ಅವಳು ನನ್ನದೆಯ ಗೆಳತಿ
ಬಾಳಿನ ಉಸಿರು ಕಾಯದ ಹೆಸರು ಅವಳದು
ಜಗದಗಲ ಜೀವನ, ಮುಗಿಲಗಲ ಚೇತನ, ಪ್ರಾಣಗಳ ಅನ್ನ, ತ್ರಾಣಗಳ ರನ್ನ
ಅವಳೊಂದು ಕಿರುನಗೆಯ ಬೀರಿದರೆ
ಕಲ್ಲುಗಳು ಬೆಲ್ಲಗಳಾಗುವುವು, ಹುಲ್ಲುಗಳು ಹೂವಾಗುವುವು, ಬಿಸಿಲು ಬೆಳದಿಂಗಳಾಗುವುದು
ಅವಳು ನಡೆದ ಹಾದಿಯಲಿ ತ್ರಿಶೂಲುಗಳು
ಬಸುರಿಯರ ಬಸಿರು ಬಗಿಯಲಾರವು ಬಾಂಬು ಬಂದೂಕುಗಳು ಸಂದೂಕು ಸೇರುವುವು ಲಾಂಗು ಚೈನುಗಳು ಮಾತು ಕಳೆದುಕೊಳ್ಳುವುವು
ಅವಳು ತಂಗಿರುವ ಮಂದಿರವದು ಮಸೀದಿಯ ಕೆಡವಲಾರದು ಮಸೀದಿಯದು ಮಂದಿರುವ ತಡವಲಾರದು
ಅವಳು ನೆಲೆಸಿರುವ ಊರಿನಲಿ ಜಾತಿಗಳ ಭೀತಿ ಕಾಡದು ಮತಗಳ ಚಿತೆ ಸುಡದು ಸಂಘಗಳ ಚಿಂತೆಯಿರದು
ಅವಳಿರುವ ಮನೆ ಮನೆಯಲಿ ಸ್ತ್ರೀ ಭ್ರೂಣ ಹತ್ಯೆಯಾಗದು ಅಗ್ನಿ ಅನಿಲ ತೈಲ ಹೆಣ್ಣುಗಳ ಮಣ್ಣಾಗಿಸವು ಅವಳಿರುವಲ್ಲಿ ಗೋಧ್ರಾ ಫಲಿಸದು ಕೊಲೆಗಳನು ಪಠಿಸದು
ಅವಳು ಅಡಿಗಳನಿಟ್ಟ ಕಡೆ ಬಿದ್ದವರು ಎದ್ದು ನಿಲ್ಲುವರು ಕದ್ದವರು ಬಿದ್ದು ಹೋಗುವರು ಅವಳು ಎಲ್ಲಾ ಅವಳಿಲ್ಲದಿರೆ ಇಲ್ಲಿ ಏನಿಲ್ಲಾ

ಹಂಪಿ: ಸೌಹಾರ್ದ ಪರಂಪರೆಗೆ ಚೆಡ್ಡಿಪಡೆಗಳ ಮಸಿ

ವಿಶ್ವಪರಂಪರೆ ಪಟ್ಟಿಯಲ್ಲಿರುವ ಐತಿಹಾಸಿಕ ಮಹತ್ವದ ಸ್ಥಳವಾದ ಹಂಪಿಯನ್ನು ಕೋಮುಗಲಭೆಯ ಕೇಂದ್ರವನ್ನಾಗಿಸುವ ಹುನ್ನಾರವನ್ನು ಸಂಘ-ಪರಿಹಾರ ನಡೆಸಿದೆ. ಇದಕ್ಕಾಗಿ ಕಳೆದ ಐದು ವರ್ಷಗಳಿಂದ ಹೊನ್ನೂರುವಲಿ ದರ್ಗಾ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದೆ.

ಸಂಘ ಪರಿವಾರಕ್ಕೆ ಹಂಪಿ ಯಾಕೇ ಬೇಕು?

ಹಂಪಿಯಲ್ಲಿ ಹಾಳಾಗಿರುವ ಬಹುತೇಕ ದೇವಸ್ಥಾನಗಳು ವೈಷ್ಣವ ಪಂಥಕ್ಕೆ ಸೇರಿದ್ದಾಗಿವೆ. ಶೈವ ದೇವಾಲಯಗಳು ಮಾತ್ರ ಉಳಿದುಕೊಂಡಿವೆ. ಜೀವಂತ ದೇವಾಲಯ ಎಂದು ಕರೆಸಿಕೊಳ್ಳುವ ವಿರೂಪಾಕ್ಷ, ಉದ್ದಾನ ವೀರಭದ್ರ ಇಲ್ಲಿ ನಿತ್ಯವೂ ಪೂಜೆಗೊಳ್ಳುತ್ತಿವೆ. ಸಂಘ ಪರಿವಾರ ಶಿವನನ್ನು ಎಂದೂ ಒಪ್ಪಿಕೊಂಡಿಲ್ಲ. ಈ ಅಸಹನೆಯೇ ಇಂತಹ ಧಾರ್ಮಿಕ ಕ್ಷೇತ್ರದ ಜನಪ್ರಿಯತೆಯನ್ನು ಕಳೆದು ಅದನ್ನು



ಊನಗೊಳಿಸುವ ಗುರಿ ಹೊಂದಿದೆ.

ಒಕ್ಕಲಿಗರು ಹಾಗೂ ಲಿಂಗಾಯಿತರನ್ನು ತಮ್ಮ ಕಡೆ ಸೇಳೆಯಲು ಕೇಶವ ಕೃಪ ಹೆಣೆದ ಅಜೆಂಡ್ ಅವರನ್ನು ಮುಸ್ಲಿಂರ ವಿರುದ್ಧ ನಿಲ್ಲಿಸುವುದಾಗಿದೆ.

ಕಳೆದ ಐದುವರ್ಷಗಳಿಂದ ಭಾವೈಕ್ಯತೆಯ ಸ್ಥಾನವಾಗಿದ್ದ ಹೊನ್ನೂರುವಲಿ ದರ್ಗಾ ಹಾಗೂ ಅದರ ಜೊತೆಯಲ್ಲಿ ಬೆರೆತು ಹೋಗಿರುವ

ಸೌಹಾರ್ದತೆಯ ಶಾಂತಿಯ ನೆಲೆಗಳ ನಾಶ ಮಾಡುವ ವಿಧ್ವಂಸಕ ಕಾರ್ಯಸೂಚಿಯ ಚೆಡ್ಡಿಪಡೆ ಈಗ ಹಂಪಿಗೆ ದಾಳಿ ಇಟ್ಟಿದೆ. ಸಾಮರಸ್ಯದ ಪರಂಪರೆಯ ನಾಶಕ್ಕೆ, ಕೋಮುದ್ವೇಷದ ಕೊಳ್ಳಿ ಹಿಡಿದು ಹೊರಟಿದೆ

ಈರಣ್ಣನನ್ನು ಬೇರ್ಪಡಿಸಿ ಈರಣ್ಣ ದೇವಸ್ಥಾನ ಎನ್ನುವುದೇ ಪ್ರತ್ಯೇಕ ಎಂದು ಇಲ್ಲಿ ಪೂಜೆಗೆ ಅವಕಾಶ ನೀಡಬೇಕೆಂದು ಉರುಸು ನಡೆಸುವ ಸಂದರ್ಭದಲ್ಲಿ ಹುಯಿಲೆಬ್ಬಿಸ ಲಾರಂಭಿಸಿದ್ದಾರೆ.

ಸಂಘ ಪರಿವಾರದ ಸುಳ್ಳು: ಈರಣ್ಣನ ದೇವಸ್ಥಾನ ಪ್ರದೇಶವನ್ನು ಮುಸ್ಲಿಂರು ಆಕ್ರಮಿಸಿಕೊಂಡು ಹೊನ್ನೂರುವಲಿ ದರ್ಗಾವನ್ನಾಗಿ ಮಾಡಿದ್ದಾರೆ. ಹಿಂದೂ ಸಾಮ್ರಾಜ್ಯದ ನೆಲದಲ್ಲಿ ಮುಸ್ಲಿಂರ ದರ್ಗಾ, ಮಸೀದಿಗಳು ತಲೆ ಎತ್ತುತ್ತಿವೆ ಎಂದು ಸೂರು ಹಾರಿ ಹೋಗುವಂತೆ ಅರಚಲಾರಂಭಿಸಿದ್ದಾರೆ. ಇದಕ್ಕೆ ಕೇಶವ ಕೃಪೆಯಲ್ಲಿ ಆಶ್ರಯ ಪಡೆದಿರುವ ಎಂ.ಚಿದಾನಂದ ಮೂರ್ತಿ ಧ್ವನಿಗೂಡಿಸಿದ್ದಾರೆ.

ಈರಣ್ಣ ಯಾರು?:

ಹೊನ್ನೂರುವಲಿ ತೋರುಗದ್ದುಗೆ ಇರುವ ಸ್ಥಳದಲ್ಲಿಯೇ ಒಂದು ಕಲ್ಲಿನ ಪೊಟರೆ ಇದೆ. ಇದರಲ್ಲಿ ಇರುವ ಕಲ್ಲೊಂದಕ್ಕೆ ಈರಣ್ಣ ಎಂದು ಜನಪದರು ಕರೆಯುತ್ತಾರೆ. ಈ ಈರಣ್ಣ ಹೊನ್ನೂರುಸ್ವಾಮಿ ಶಿಷ್ಯ. ದೀಕ್ಷೆ ತೆಗೆದುಕೊಂಡು ಇದೇ ಸ್ಥಳದಲ್ಲಿ ಐಕ್ಯನಾಗಿದ್ದರಿಂದ ಈತನ ನೆನಪಿನಾರ್ಥ ಉರುಸಿಗೆ ಬಂದ ಜನರು ಪೂಜೆ ಸಲ್ಲಿಸುತ್ತಾರೆ. ಪೂಜೆ ಸಲ್ಲಿಸುವವರು ಸಹ ದರ್ಗಾ ಪರಂಪರೆಯಿಂದ ಬಂದಿರುವ ಮುಸ್ಲಿಂರು ಹಾಗೂ ಹಿಂದುಗಳು. ಇಂತಹ ಈರಣ್ಣನನ್ನೇ ಬೇರ್ಪಡಿಸಿ ಈರಣ್ಣ ದೇವಸ್ಥಾನ ಎಂದು ನಂಬಿಸುವ ಕೆಲಸವನ್ನು ಸಂಘ ಪರಿವಾರ ನಡೆಸಿದೆ.

ಬಿಜಾಪುರದ ಆದಿಲ್‌ಷಾಹಿ ರಾಜ್ಯ ಪ್ರಭುತ್ವ ಹಾಗೂ ವಿಜಯನಗರದ ರಾಜ್ಯ ಪ್ರಭುತ್ವದ ರಾಜಕೀಯ ಹಂಗಿಗೆ ಒಳಗಾಗದೇ ತಮ್ಮದೇ ಆದ ಮಾರ್ಗ ಕಂಡುಕೊಂಡು ಸಂತರನ್ನು ಆ ಭಕ್ತ ಸಮೂಹವನ್ನು ದಿಕ್ಕು ತಪ್ಪಿಸಿ ಕೋಮುಗಲಭೆ ನಡೆಸುವ ಉದ್ದೇಶವನ್ನು ಸಂಘ ಪರಿವಾರ ಒಳಗೊಂಡಿದೆ ಎನ್ನುವುದಕ್ಕೆ ಬೇರಾವ ನಿದರ್ಶನ ಬೇಕಿದೆ.

ಮಾಧ್ಯಮಗಳ ಪಾತ್ರ: ಉರುಸು ಆರಂಭಗೊಳ್ಳುತ್ತದೆ ಎನ್ನುವಾಗ ಬೆರಳಣಿಕೆಯ ಸಂಘ-ಪರಿವಾರದ ಜನರು ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ರೀತಿಯ ಹೇಳಿಕೆಗಳಿರುವ ಸುದ್ದಿ ನೀಡಿ ಈರಣ್ಣನಿಗೆ ವಿಶೇಷ ಪೂಜೆ ನಡೆಸುತ್ತೇವೆಂದು ಅಬ್ಬರದ ಪ್ರಚಾರ ಪಡೆಯುತ್ತಾರೆ.

ಈ ವರ್ಷ ನಡೆದಿದ್ದು ಸಹ ಇದೇ ಆಗಿದೆ. 12 ಇಲಾಖೆಗಳು ಇಲ್ಲಿ ಗುಡಿ ಇತ್ತು ಎಂದು ದಾಖಲೆಗಳನ್ನು ನೀಡಿದೆ ಎಂದು ಹೇಳುತ್ತಾರೆ. ಯಾವ ಇಲಾಖೆಗಳು? ಯಾರಿಗೆ ದಾಖಲೆ ನೀಡಿವೆ? ದಾಖಲೆ ಎಲ್ಲಿವೇ? ಎಂಬ ಕನಿಷ್ಠ ಪ್ರಶ್ನೆಯನ್ನು ಮಾಡದೇ ಮಾಧ್ಯಮಗಳು ಇದನ್ನು ಪ್ರಚಾರ ಮಾಡುತ್ತವೆ. ಕೊನೆಗೆ ಉರುಸು ಆಚರಿಸಲಾರದ ಮುಸ್ಲಿಂ ಮುಖಂಡರನ್ನು ಅಧಿಕಾರಿಗಳು ಕರೆಸಿ ಮಾತನ್ನಾಡುತ್ತಾರೆ. ಅವರು ಉರುಸು ಮುಂದಕ್ಕೆ ಹಾಕಿದ್ದೇವೆ ಎಂದು ಹೇಳುತ್ತಾರೆ. ಮುಸ್ಲಿಂ ಮುಖಂಡರ ಜೊತೆ ಮಾತುಕತೆ: ಉರುಸು ಮುಂದಕ್ಕೆ ಎಂದು ಪತ್ರಿಕೆಗಳು ಬರೆದು ಕೈತೊಳೆದುಕೊಳ್ಳುತ್ತವೆ. ಒಂದುವೇಳೆ ಎಲ್ಲಾ ಮಾಧ್ಯಮಗಳು ಈ ಘಟನೆಯನ್ನು ಬಹಿಷ್ಕರಿಸಿದವು ಎಂದು ಭಾವಿಸೋಣ. ಆಗ ಈ ಘಟನೆ ಏನೇನೂ ಆಗುವುದಿಲ್ಲ. ಸಂಘ-ಪರಿವಾರ ಮಾಧ್ಯಮಗಳನ್ನು ಬಳಿಸಿಕೊಳ್ಳುವ ಪರಿ ಇದು. ಅಧಿಕಾರಿಗಳು ಬೆರಳೆಣಿಕೆಯ ಜನರನ್ನು ಬಂಧಿಸಿದರೆ ಅರ್ಧ



ಕಳೆದ ವರ್ಷ ಭಜರಂಗಿಗಳಿಂದ ಕಾವಿದೀಕ್ಷೆಗೊಳಗಾದ ಈರಣ್ಣನ ಗುಹೆವು

ಸಮಸ್ಯೆಯೇ ಬಗೆಹರಿಯುತ್ತದೆ. ಈ ಸಮಸ್ಯೆ ಬಗೆಹರಿಸಿದೆ ಅಧಿಕಾರಿಗಳು ಇವರಿಗೆ ಮಣೆ ಹಾಕಿ ಪ್ರಕರಣ ಉಲ್ಬಣಗೊಳಿಸುವಂತೆ ನೋಡಿಕೊಳ್ಳುತ್ತಾರೆ.

ಇಲ್ಲಿಗೆ ಈ ಸಮಸ್ಯೆ ಬಗೆಹರಿಯಿತೇ? ಉರುಸು ಆಚರಿಸಲು ಆರಂಭಿಸಿದಾಗ ಈ ಸಂಘ ಪರಿವಾರ ಆವಾಗಲೂ ಪೂಜೆ ನಡೆಸುತ್ತೇನೆಂದು ಇಂತಹ ಪ್ರಚಾರದ ಶೈಲಿ ಆರಂಭಿಸಿದರೆ ಹೇಗೆ ಎಂಬುದನ್ನು ಸ್ವಘೋಷಿತ ಮುಸ್ಲಿಂ ಮುಖಂಡರಾಗಲಿ ಅಥವಾ ಅಧಿಕಾರಿಗಳಾಗಲಿ ಪ್ರಶ್ನಿಸಿಕೊಳ್ಳುವುದಿಲ್ಲ. ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಎಂದು ಭಾವಿಸುತ್ತಾರೆ. ಆದರೆ ಈ ಬೀಸುವ ದೊಣ್ಣೆ ಇನ್ನಷ್ಟು ಹರಿತಗೊಂಡು ಆರೆಸೆಸ್ಸ್ ಲಾಠಿ, ತ್ರಿಶೂಲವಾಗುತ್ತದೆಂಬುದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಹಂಪಿಯಲ್ಲಿ ನಡೆದ ಈತ್ತೀಚಿನ ವಿದ್ಯಾಮಾನ ಇದೇ ಆಗಿದೆ.

- ವಸಂತ

ತುಮಕೂರು

ಶವ ಹೂಳುವ ನೆಲವನ್ನೂ ಬಿಡದ ಭೂ ಮಾಫಿಯಾ

ಬೆಂಗಳೂರು ಸಿಂಗಪೂರು ಆಗುತ್ತಿರುವಂತೆಯೇ ಅದರ ಬೂರಾನಜರ್ (ಕರಾಳ ಛಾಯೆ) ಪಕ್ಕದ ಜಿಲ್ಲೆಗಳಿಗೆ ಬೀಳ ತೊಡಗಿದೆ.

ಬೆಲೆ ಬಾಳುವ ಸ್ಮಶಾನವನ್ನು ವಶಪಡಿಸಿಕೊಳ್ಳಲು ಹುನ್ನಾರ ನಡೆಸುತ್ತಿದ್ದ ಭೂ ಮಾಫಿಯಾದವರ ಪ್ರಚೋದನೆಯಿಂದ ಶವಸಂಸ್ಕಾರಕ್ಕೆ ಅಡ್ಡಿಪಡಿಸಿದಾಗ ಎರಡು ಗುಂಪುಗಳ ನಡುವೆ ಘರ್ಷಣೆ ಸಂಭವಿಸಿ ಪೋಲೀಸರು ಸೇರಿದಂತೆ ಸುಮಾರು 20, ಜನ ತೀವ್ರವಾಗಿ ಗಾಯಗೊಂಡು ನಾಲ್ಕು ಪೋಲೀಸ್ ವಾಹನ ಜಖಂಗೊಂಡು ಮನೆಗಳಿಗೆ ಹಾನಿಯಾಗಿರುವ ಘಟನೆ ಬುಧವಾರ ನಡೆದಿದೆ.

ಮಂಗಳವಾರ ರಾತ್ರಿ ಮೃತಪಟ್ಟ ಗುರುವಯ್ಯ ಎಂಬುವರ ಶವಸಂಸ್ಕಾರ ಮಾಡುವ ಸಲುವಾಗಿ ಗುಂಡಿ ಅಗೆಯುತ್ತಿದ್ದ ದಲಿತರ ಮೇಲೆ ಏಕಾಏಕಿ ಭೂ ಮಾಫಿಯಾ ಪ್ರಚೋದಿತ ಮತ್ತೊಂದು ಗುಂಪು ಹಲ್ಲೆ ನಡೆಸಿತು. ಇದಕ್ಕೆ ಪ್ರತಿ ಹಲ್ಲೆ ನಡೆಸಿದ್ದರಿಂದ ಹೆಗ್ಗಡೆ ಕಾಲೋನಿ, ಜಯಪುರ ಸೇರಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುದ್ದಿ ಹಬ್ಬಿ ಎರಡು ಗುಂಪುಗಳ ನಡುವೆ ಸಂಘರ್ಷ ಏರ್ಪಟ್ಟಿತ್ತು. ಕೂಡಲೇ ನೂರಾರು ಜನರು ಮಾರಕಾಸ್ತ್ರಗಳನ್ನು ಹಿಡಿದು ರಸ್ತೆಯಲ್ಲಿ ಸಂಚರಿಸುತ್ತಿರುವ ದೃಶ್ಯ ಜನರನ್ನು ಭಯ ಭೀತಿಗೊಳಿಸಿತ್ತು. ಘಟನೆಯ ಸುದ್ದಿ ಹರಡುತ್ತಿದ್ದಂತೆ ಆತಂಕದಿಂದ ಜನ ಅಂಗಡಿ ಮತ್ತು ಮನೆಗಳ ಬಾಗಿಲು ಮುಚ್ಚಿ ಭದ್ರಗೊಳಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಆಗ ಮಧ್ಯ ಪ್ರವೇಶಿಸುವ ಪೋಲೀಸ್‌ರ ಮೇಲೂ ಗುಂಪುಗಳು ಕಲ್ಲು ತೂರಿ ಗಾಯಗೊಳಿಸಿದರು. ಪೋಲೀಸರ ಗುಂಪು ಚದುರಿಸಲು ನಡೆಸಿದ ಯತ್ನ ವಿಫಲವಾದಾಗ ಗಾಳಿಯಲ್ಲಿ ಗುಂಡು ಹಾರಿಸಿದರು.

ಘಟನೆಯ ಹಿನ್ನೆಲೆ : ತುಮಕೂರಿನ ಗುಬ್ಬಿಗೇಟ್‌ನಲ್ಲಿ ಹೊಸದಾಗಿ ನಿರ್ಮಿತಗೊಂಡಿರುವ ರಿಂಗ್ ರಸ್ತೆಯ ಪಕ್ಕದಲ್ಲಿನ ಶವಸಂಸ್ಕಾರ ನಡೆಸಿಕೊಂಡು ಬರುತ್ತಿದ್ದರು. ಇದಕ್ಕೆ ಆ ಜಮೀನಿನ ಮಾಲೀಕರು ಸಹ ತಕರಾರು ಇರಲಿಲ್ಲ ಇತ್ತೀಚೆಗೆ ನಗರದಲ್ಲಿ ಭೂಮಿ ಬೆಲೆ ಗಗನಕ್ಕೇರುತ್ತಿದ್ದಂತೆ ಭೂ ಮಾಫಿಯಾದವರು ಮಾಲೀಕರಿಂದ ಜಮೀನು ಖರೀದಿಯ ಒಪ್ಪಂದ ಮಾಡಿಕೊಂಡಿದ್ದರು.

ಈ ಮಧ್ಯೆ ದಲಿತರು ಅದೇ ಜಮೀನನ್ನು ಶವಸಂಸ್ಕಾರಕ್ಕೆ ಮಂಜೂರು ಮಾಡುವಂತೆ ನಗರಸಭೆಗೆ, ಜಿಲ್ಲಾಡಳಿತಕ್ಕೆ ಹಲವಾರು ಬಾರಿ ಹೋರಾಟ ನಡೆಸಿ ಮನವಿ ಸಲ್ಲಿಸಿದ್ದರು. ಜಿಲ್ಲಾಡಳಿತ ಸ್ಪಂದಿಸಿರಲಿಲ್ಲ. ಆದರೆ ನಗರಸಭೆ ತನ್ನ 5 ಲಕ್ಷ ರೂ.ಗಳನ್ನು ಮುಂಗಡವಾಗಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಜಿಲ್ಲಾಡಳಿತಕ್ಕೆ ಪಾವತಿಸಿತ್ತು. ಜಮೀನಿನ ಸ್ವಾಧೀನಪಡಿಸಿಕೊಳ್ಳುವ ಹಂತದಲ್ಲಿ ಸುಮಾರು 6 ರಿಂದ 7 ತಿಂಗಳಿಂದ ಭೂ ಮಾಫಿಯಾ ಇದನ್ನು ತಪ್ಪಿಸಲು ಭ್ರಷ್ಟ ಅಧಿಕಾರಿಗಳನ್ನು ಒಳಗೊಂಡು ಹುನ್ನಾರ ನಡೆಸಿದೆ.


ಕಳೆದ 6 ತಿಂಗಳಿಂದ ನಗರದಲ್ಲಿ ಭೂ ಮಾಫಿಯಾಗಳ ಚಲನಮನ ಚುರುಕಾಗಿದೆ. ದೀರ್ಘಕಾಲದಿಂದ ಕೋರ್ಟು ಕಛೇರಿಗಳಲ್ಲಿ ತಗಾದೆಗಳಿರುವ ಹಾಗೂ ವೈಯಕ್ತಿಕವಾಗಿ ಎರಡು ಗುಂಪುಗಳ ಮಧ್ಯೆ ಜಮೀನು ಮತ್ತು ನಿವೇಶನಗಳನ್ನು ಅತ್ಯಂತ ಕಡಿಮೆ ಬೆಲೆಗೆ ಅಗ್ರಿಮೆಂಟ್ ಮಾಡಿಸಿಕೊಂಡು ಸೆಟ್ಲ್‌ಮೆಂಟ್‌ನಲ್ಲಿ ಬಗೆಹರಿಸಿ.

ಅಂತ್ಯ ಸಂಸ್ಕಾರ: ಮೃತ ವ್ಯಕ್ತಿ ಗುರುವಯ್ಯಾನ ಶವಸಂಸ್ಕಾರ. ಅದೇ ಜಾಗದಲ್ಲಿ ಪೋಲೀಸ್‌ನ ಬಂದೋಬಸ್ತ್‌ನಲ್ಲಿ ನಡೆಯಿತು.

ಶಾಂತಿ ಸಭೆ : ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ:07.06.2007ರ ಸಂಜೆ 6.00 ಗಂಟೆಗೆ ಸಭೆ ನಡಸಿ ಎರಡು ಗುಂಪುಗಳ ಮುಖಂಡರುಗಳು ಮೊಕದ್ದಮೆಯನ್ನು ವಾಪಸ್ಸು ಪಡೆಯುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದರು. ಸಭೆಯಲ್ಲಿ ಜಿಲ್ಲೆಯ ಹಿರಿಯ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು, ಹಿರಿಯ ದಲಿತ ಸಾಹಿತಿ ಕೆ.ಬಿ. ಸಿದ್ದಯ್ಯ, ಕಾರ್ಮಿಕ ಮುಖಂಡ ಸೈಯದ್ ಮುಜೀಬ್, ಡಿ.ಎಸ್.ಎಸ್.ನ ನರಸಿಂಹಯ್ಯ, ಗಂಗಾಧರ್, ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ನರಸಿಂಹಮೂರ್ತಿ, ರೈತ ಮುಖಂಡ ಬಿ.ಉಮೇಶ್, ಜಮೀನಿನ ಮೂಲಕ ಮಾಲೀಕರು ಹಾಗೂ ಅಂಬೇಡ್ಕರ್ ಯುವಕ ಸಂಘದ ವಕೀಲರಾದ ನಾಗೇಶ್, ಕರಾರು ಮಾಡಿಕೊಂಡಿದ್ದ ಜನರು ಭಾಗವಹಿಸಿದ್ದರು. ಒಟ್ಟಾರೆ ಪರಿಸ್ಥಿತಿ ಈಗ ಶಾಂತವಾಗಿದೆ. ಜಮೀನನ್ನು ಮಂಜೂರು ಮಾಡಲು ಜಿಲ್ಲಾಡಳಿತ ವಶಕ್ಕೆ ತೆಗೆದುಕೊಂಡಿದೆ. ಒಟ್ಟು ನಾಲ್ಕು ಪ್ರಕರಣ ದಾಖಲಾಗಿದೆ.

ದಲಿತರು ಮತ್ತು ಮುಸ್ಲಿಂರ ನಡುವೆ ಇದೊಂದು ಕೋಮು ಗಲಭೆಯಾದ ಮಾರ್ಪಾಡಾಗ ಬಹುದಾಗಿದ್ದ ಘಟನೆಯು ನಾಗರೀಕರ, ಜಿಲ್ಲಾಡಳಿತದ ಸಕಾಲಿಕ ಮಧ್ಯಪ್ರವೇಶದಿಂದ ತಪ್ಪಿದೆ. ಈ ಸಮಸ್ಯೆಗೆ ಒಂದು ಶಾಶ್ವತ ಪರಿಹಾರ ದೊರೆಯಬೇಕಿದೆ.

ವರದಿ: **ಎನ್.ಕೆ.ಸುಬ್ರಮಣ್ಯ**



ಏಟು ತಿಂದು ಆಸ್ಪತ್ರೆ ಸೇರಿದವರು



ಗಲಭೆ ನಿರತರನ್ನು ಚದುರಿಸುತ್ತಿರುವ ಪೋಲೀಸರ ಗಾಳಿಯಲ್ಲಿ ಗುಂಡು

ಜಗದಗಲ

ಶರತ್‌ಚಂದ್ರ

ಅಮೆರಿಕ ಸೇನೆಯಲ್ಲಿ ವಿಚಿತ್ರ ಆತಂಕ

ಇರಾಕ್ ಮತ್ತು ಅಫಘಾನಿಸ್ತಾನದಲ್ಲಿ ನೆಲವೂರಿರುವ ಅಮೆರಿಕ ಪಡೆಗಳಿಗೆ ಈಗ ಹೊಸ ಚಿಂತೆ ಆರಂಭವಾಗಿದೆ. ಅಲ್ಲಿನ ಸೇನಾ ನೆಲೆಗಳಲ್ಲಿ ಬಂಧಿತ ಯೋಧರು ಮತ್ತು ನಾಗರಿಕರಿಗೆ ನೀಡುತ್ತಿರುವ ಚಿತ್ರಹಿಂಸೆಯಿಂದ ಸ್ವತಃ ಅಮೆರಿಕದ ಯೋಧರೇ ಕಂಗಾಲಾಗಿದ್ದಾರೆ. ಇರಾನ್ ಮತ್ತು ಅಫಘಾನಿಸ್ತಾನದ ಬಂಧಿತರನ್ನು ಮಾನಸಿಕ ಯಾತನೆ, ನೋವು, ಚಿತ್ರಹಿಂಸೆಗಳಿಗೆ ಗುರಿಮಾಡುವುದನ್ನು ನೋಡಿ ಅಮೆರಿಕ ಯೋಧರೆ ಕುಗ್ಗಿ ಹೋಗಿದ್ದಾರೆ. ರಜೆ ಮೇಲೆ ದೇಶಕ್ಕೆ ಮರಳಿರುವ ಸೇನಾ ಸಿಬ್ಬಂದಿ ಮತ್ತೆ ಶಿಬಿರಕ್ಕೆ ಮರಳುತ್ತಿಲ್ಲ ಎಂಬ ಅಚ್ಚರಿಯ ಅಂಶವನ್ನು ಅಮೆರಿಕ ಸೇನೆಯ ಮಾನಸಿಕ ತಜ್ಞರು ಬಹಿರಂಗ ಪಡಿಸಿದ್ದಾರೆ. ಯೋಧರು ಮಾನಸಿಕ ಅಸ್ವಸ್ಥತೆಯ ಕಾರಣ ನೀಡಿ ದೇಶದಲ್ಲೇ ಉಳಿಯಲು ಬಯಸುತ್ತಾರೆ. ಇಂತಹ ಹಲವು ಉದಾಹರಣೆಗಳು ದಾಖಲಾಗಿವೆ ಎಂದು ಅಮೆರಿಕ ನೌಕಾ ದಳದ ಅಧಿಕಾರಿ ಥಾಮಸ್ ಗ್ರೇಜರ್ ಹೇಳುತ್ತಾರೆ.



ಭೂಖಂಡಗಳನ್ನೇ ಹರಿದು ಹಂಚಿಕೊಳ್ಳುವ ಜಿ-8 ರಾಷ್ಟ್ರಗಳ ವಿರುದ್ಧ ಅಣುಕು ಪ್ರದರ್ಶನ

ಅಮೆರಿಕಕ್ಕೆ ಥಾಯ್ಲೆಂಡ್ ಅಸಹಕಾರ

ಜಗತ್ತಿನ ದೊಡ್ಡಣ್ಣನೆಂದು ಮೆರೆವ ಅಮೆರಿಕದ ಮುಖಕ್ಕೆ ಥಾಯ್ಲೆಂಡ್ ಸರಕಾರ ಚೆನ್ನಾಗಿ ಸೆಗಣಿ ಸವರಿದೆ. ಸ್ಥಳೀಯ ಸಮಸ್ಯೆ ವಿರುದ್ಧ ಮಿಲಿಟರಿ ಕಾರ್ಯಾಚರಣೆ ಹೆಸರಿನಲ್ಲಿ ದೇಶದ ಆಂತರಿಕ ವಿಚಾರದಲ್ಲಿ ಹಸ್ತಕ್ಷೇಪ ನಡೆಸುವುದು ಅಮೆರಿಕ ಸ್ಟೈಲ್. ಇದು ಅಮೆರಿಕದ ವಿದೇಶಾಂಗ ನೀತಿಯ ಭಾಗ. ಆದರೆ, ಇಂತಹ ಒಂದು ಪ್ರಸ್ತಾಪವನ್ನು ಥಾಯ್ಲೆಂಡ್ ಸ್ಪಷ್ಟವಾಗಿ ತಿರಸ್ಕರಿಸಿದೆ. ಅಲ್ಲಿ ತಲೆನೋವಾಗಿ ಪರಿಣಮಿಸಿದ ಮೂಲಭೂತವಾದಿಗಳ ವಿರುದ್ಧದ ಸಮರದಲ್ಲಿ ಅಮೆರಿಕದ ಸಹಾಯವನ್ನು ನಿರಾಕರಿಸಿದೆ. ಇದು ನಮ್ಮ ಆಂತರಿಕ ಸಮಸ್ಯೆ, ನಾವೇ ಅದನ್ನು ಬಗೆಹರಿಸುತ್ತೇವೆ ಎಂದು ಅಲ್ಲಿನ ಮಿಲಿಟರಿ ಮುಖ್ಯಸ್ಥರು ಬುಷ್ ಸರ್ಕಾರಕ್ಕೆ ಮನದಟ್ಟು ಮಾಡಿದ್ದಾರೆ.

ರಶ್ಯಕ್ಕೆ ಮಧ್ಯ ಏಶ್ಯಾ ಗ್ಯಾಸ್ ಪೈಪ್‌ಲೈನ್ ಸೆಣಸಾಟದಲ್ಲಿ ವಿಜಯ

ಮಧ್ಯ ಏಶ್ಯಾದ ಪ್ರಾಕೃತಿಕ ಗ್ಯಾಸ್‌ನ್ನು ಯುರೋಪ್ ಮತ್ತಿತರ ಪ್ರದೇಶಗಳಿಗೆ ರಫ್ತು ಮಾಡುವ ವಹಿವಾಟನ್ನು ರಶ್ಯಾ ಮತ್ತು ಮಾಜೀ ಸೋವಿಯೆಟ್ ದೇಶಗಳ ಕೈಯಿಂದ ಕಸಿದುಕೊಳ್ಳುವ ಹುನ್ನಾರವನ್ನು ಅಮೆರಿಕ-ಯುರೋಪಿಯನ್ ಒಕ್ಕೂಟ ಇತ್ತೀಚಿನ ವರ್ಷಗಳಲ್ಲಿ ತೀವ್ರವಾಗಿ ನಡೆಸಿದೆ. ಈ ವಹಿವಾಟಿನ ಮೇಲೆ ಅಮೆರಿಕ-ಯುರೋಪಿಯನ್ ಬಹುರಾಷ್ಟ್ರೀಯ ಕಂಪನಿಗಳು ನಿಯಂತ್ರಣ ಪಡೆಯಲು ತೀವ್ರ ಸೆಣಸಾಟ ನಡೆಸಿವೆ. ಇದಕ್ಕಾಗಿ ರಶ್ಯ ಮತ್ತು ಇತರ ಮಾಜೀ ಸೋವಿಯೆಟ್ ದೇಶಗಳ ನಡುವೆ ವಿವಾದ-ಬಿಕ್ಕಟ್ಟು ಸೃಷ್ಟಿಸುವ ಪ್ರಯತ್ನ ನಡೆಸಿವೆ.

ರಶ್ಯಾ ಎರಡು ಪ್ರಮುಖ ಗ್ಯಾಸ್ ಪೈಪ್‌ಲೈನ್ ಒಪ್ಪಂದಗಳಿಗೆ ಸಹಿ ಹಾಕುವ ಮೂಲಕ ಅಮೆರಿಕ- ಯುರೋಪಿಯನ್ ಸಂಚಿಗೆ 'ಶಾಕ್' ಕೊಟ್ಟಿದೆ. ತುರ್ಕಮಾನಿಸ್ತಾನ್, ಕಝಾಕಿಸ್ತಾನ್ ಮತ್ತು ರಶ್ಯಾಗಳ ನಡುವೆ - ತುರ್ಕಮಾನಿಸ್ತಾನ್ ದ ಗ್ಯಾಸ್‌ನ್ನು ಕಝಾಕಿಸ್ತಾನ್ ಮತ್ತು ರಶ್ಯಾಗಳ ಮೂಲಕ ಯುರೋಪಿಗೆ ಸಾಗಾಣಿಕೆ ಮಾಡಲು - ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದಕ್ಕಾಗಿ 500 ಕಿ.ಮೀ ಉದ್ದದ ಸುಮಾರು 100 ಕೋಟಿ ಡಾಲರ್ ವೆಚ್ಚದ ಗ್ಯಾಸ್ ಪೈಪ್‌ಲೈನ್ ನಿರ್ಮಾಣ ಮಾಡಲಾಗುತ್ತದೆ. ಇನ್ನೊಂದು ಒಪ್ಪಂದದ ಪ್ರಕಾರ ಸೋವಿಯೆಟ್ ಅವಧಿಯ ಗ್ಯಾಸ್ ಪೈಪ್‌ಲೈನ್‌ನ್ನು ವಿಸ್ತರಿಸುವ, ದುರಸ್ತಿ ಮಾಡುವ ಕೆಲಸವನ್ನು ಜಂಟಿಯಾಗಿ ಕೈಗೊಳ್ಳಲಾಗುವುದು. ಈ ಒಪ್ಪಂದಕ್ಕೆ ತುರ್ಕಮಾನಿಸ್ತಾನ್, ಕಝಾಕಿಸ್ತಾನ್ ಮತ್ತು ರಶ್ಯಾ ಗಳಲ್ಲದೆ, ಉಜ್ಬೇಕಿಸ್ತಾನ್ ಸಹ ಭಾಗಿಯಾಗಿದೆ. ಈ ಎರಡೂ ಗ್ಯಾಸ್ ಪೈಪ್‌ಲೈನ್ ಸೇರಿ 90 ಶತಕೋಟಿ ಘನ ಮೀಟರ್ ಗ್ಯಾಸ್ ನ್ನು 2028 ರ ಹೊತ್ತಿಗೆ ಯುರೋಪಿಗೆ ಸಾಗಾಣಿಕೆ ಮಾಡಲಾಗುವುದು. ರಶ್ಯಾವನ್ನು ಬದಿಗೆ ತಳ್ಳಿ ಅಜರಬೈಜಾನ್ ಮತ್ತು ಜಾರ್ಜಿಯ ಮೂಲಕ ಗ್ಯಾಸ್‌ನ್ನು ಸಾಗಿಸಲು ಅಮೆರಿಕದ ಯೋಜನೆ 'ಠುಸ್' ಆಗಿದೆ.

ವಿಶ್ವಬ್ಯಾಂಕಿನ 'ಬಂಡವಾಳ'

1944ರಲ್ಲಿ ನ್ಯೂ ಹ್ಯಾಂಪ್‌ಶೈರ್‌ನಲ್ಲಿ ಜರುಗಿದ ಬ್ರಿಟನ್‌ವುಡ್ಸ್ ಸಮ್ಮೇಳನದಲ್ಲಿ ತನ್ನ ಸೋದರ ಸಂಸ್ಥೆಯಾದ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಜೊತೆಗೆ ವಿಶ್ವ ಬ್ಯಾಂಕ್ ಸೃಷ್ಟಿಯಾಯಿತು.ಅಂತರ್ರಾಷ್ಟ್ರೀಯ ಹಣಕಾಸು ಮಾರುಕಟ್ಟೆಯ ಸ್ಥಿರತೆಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯನ್ನು ಐಎಂಎಫ್‌ಗೆ ವಹಿಸ ಲಾಯಿತು. ಅಧಿಕೃತವಾಗಿ ಪುನರ್ ನಿರ್ಮಾಣ ಹಾಗೂ ಅಭಿವೃದ್ಧಿಯ ಅಂತರ್ರಾಷ್ಟ್ರೀಯ ಬ್ಯಾಂಕ್ ಎಂದು ಗುರುತಿಸಲಾಗುವ ವಿಶ್ವಬ್ಯಾಂಕ್‌ಗೆ ಪ್ರಾರಂಭದಲ್ಲಿ ಯುರೋಪಿನ ಪುನರ್ ನಿರ್ಮಾಣದಲ್ಲಿ ಸಹಾಯ ಮಾಡುವ ಜವಾಬ್ದಾರಿಯನ್ನು ನೀಡಲಾಯಿತು. 1947ರಲ್ಲಿ ಈ ಬ್ಯಾಂಕಿನಿಂದ ಮೊತ್ತಮೊದಲ ಸಾಲ ಪಡೆದ ದೇಶ ಫ್ರಾನ್ಸ್. ವಾಷಿಂಗ್ಟನ್‌ನಲ್ಲಿ ಪ್ರಧಾನ ಕಛೇರಿ ಹೊಂದಿರುವ ವಿಶ್ವ ಬ್ಯಾಂಕ್ ತದನಂತರದಲ್ಲಿ ಅಭಿವೃದ್ಧಿ ಶೀಲ ದೇಶಗಳಿಗೆ ತನಗೆ ಸಂಯೋಜಿತವಾಗಿರುವ ಅಂತರ್ರಾಷ್ಟ್ರೀಯ ಅಭಿವೃದ್ಧಿ ಸಂಘಟನೆ (ಐಎಂಎ) ಯ ಜೊತೆ ಸೇರಿ 'ಮೃದು ಸಾಲ' ಎಂದರೆ ಬಡ್ಡಿರಹಿತ ಅಥವಾ ತೀರ ಕಡಿಮೆ ಬಡ್ಡಿಯ ಸಾಲವನ್ನು ನೀಡಲಾರಂಭಿಸಿತು.



ಎನ್.ವಿಜಯಕುಮಾರ್

ವಿಶ್ವಬ್ಯಾಂಕ್ ಹಾಗೂ ಅಂತರ್ರಾಷ್ಟ್ರೀಯ ಅಭಿವೃದ್ಧಿ ಸಂಘಟನೆ 2006 ರಲ್ಲಿ 23.6 ಬಿಲಿಯನ್ ಡಾಲರ್ ಸಾಲದ ವಾಗ್ದಾನವನ್ನು ನೀಡಿದೆ. ಈ ಸಾಲದ ಹೆಚ್ಚಿನ ಪ್ರಮಾಣ ಸಂದಾಯವಾದದ್ದು ಲ್ಯಾಟಿನ್ ಅಮೇರಿಕಾ (ಶೇ.25), ಆಫ್ರಿಕಾ (ಶೇ.20) ಮತ್ತು ದಕ್ಷಿಣ ಏಷ್ಯಾದ ಹಾಗೂ ಕೆರಿಬಿಯನ್ ದೇಶಗಳಿಗೆ ಬಹುತೇಕ ಹಣ (ಶೇ.75 ರಿಂದ ಶೇ.80) ಬ್ಯಾಂಕ್ ಹೇಳುವಂತೆ ಹೂಡಿಕೆಯಾಗಿ ಅಥವಾ ಯೋಜನಾ ಸಲುವಾಗಿ ಬಳಕೆಯಾಗುತ್ತದೆ. ಮುಂದಿನ ದಿನಗಳಲ್ಲಿ ರಸ್ತೆ, ಅಣೆಕಟ್ಟೆಯಂತಹ ಭೌತಿಕ ಮೂಲಭೂತ ಯೋಜನೆಗಳಿಗೆ ಸಾಲ ನೀಡಲಾಗುತ್ತಿತ್ತು. ಮುಂದೆ 1967ರಲ್ಲಿ ವಿಯಟ್ನಾಂ ಯುದ್ಧದ ಸಂದರ್ಭದಲ್ಲಿ ಅಮೇರಿಕಾದ ರಕ್ಷಣಾ ಕಾರ್ಯದರ್ಶಿ ಯಾಗಿದ್ದ ರಾಬರ್ಟ್ ಮ್ಯಾಕ್‌ನಮಾರ್ ವಿಶ್ವಬ್ಯಾಂಕ್‌ನ ಅಧ್ಯಕ್ಷನಾದಾಗ ಸಾಲದ ಜಾಗತೀಕರಣಕ್ಕೆ ಮುಂದಾದ. ತನ್ನ 13 ವರ್ಷಗಳ ಅಧ್ಯಕ್ಷ ಗಿರಿಯಲ್ಲಿ ಸುವ್ಯವಸ್ಥೆಯಲ್ಲಿದ್ದ ವಿಶ್ವಬ್ಯಾಂಕ್‌ನ ಸಾಲದ ಪ್ರಮಾಣ ದಿಢೀರನೆ ಎಚ್ಚೆತ್ತು ಹದಿಮೂರು ಪಟ್ಟು ಹೆಚ್ಚಿತು.

ಹೀಗೆ ಹರಿದ ಹಣ ಬ್ಯಾಂಕಿನ ಪ್ರತಿಷ್ಟೆಯನ್ನು ಹೆಚ್ಚಿಸಲು ಸಾಧ್ಯಯಾಯಿತೇ ಆಗಲಿ ದಾರಿದ್ರ್ಯ ನಿವಾರಣೆ ಬಳಕೆ ಯಾಗಲಿಲ್ಲ.

1980ರಲ್ಲಿ ವಿಶ್ವ ಬ್ಯಾಂಕ್ ಹಾಗೂ ಐಎಂಎಫ್ ಎರಡೂ 'ವಾಷಿಂಗ್ಟನ್ ಸರ್ವ ಸಮ್ಮತಿ' ಯನ್ನು ಆರ್ಥಿಕ ನೀತಿಗಳಿಗೆ ಸಂಬಂಧಿಸಿದಂತೆ ಒಪ್ಪಿಕೊಂಡವು. ಮುಕ್ತ ಮಾರುಕಟ್ಟೆ, ಖಾಸಗೀಕರಣ ಹಾಗೂ ಆರ್ಥಿಕತೆಯಲ್ಲಿ ಸರ್ಕಾರಗಳ ಕನಿಷ್ಟ ಪಾಲ್ಗೊಳ್ಳುವಿಕೆ ಎನ್ನುವ ಜಾಗತಿಕ ಅಸಮಾನತೆಯನ್ನು ಸೃಷ್ಟಿಸುವ ಏಕಮುಖಿ ನಿರ್ಧಾರವೇ ಈ 'ವಾಷಿಂಗ್ಟನ್ ಸರ್ವ ಸಮ್ಮತಿ' ಅಭಿವೃದ್ಧಿ ಸಾಧನೆಗೆ ಇದು ಅನಿವಾರ್ಯ ಎಂದು ಬಿಂಬಿಸಲಾಗುತ್ತಿದೆ. ಈ ನಿರ್ದೇಶನಗಳ ಅನುಷ್ಠಾನ ಜಾರಿಯನ್ನು ಸಮ್ಮತಿಸುವ ದೇಶಗಳಿಗೆ ಸಾಲ ನೀಡಲಾಗುತ್ತಿದೆ. ವಿಶ್ವಬ್ಯಾಂಕ್ ಹಾಗೂ ಐಎಂಎಫ್, ಈ ಎರಡೂ ಸಂಸ್ಥೆಗಳು ಬಡ ದೇಶಗಳ ಮೇಲೆ ನವ ಉದಾರೀಕರಣ ಆರ್ಥಿಕ ನೀತಿಯನ್ನು ಹೇರುತ್ತಿವೆ ಎನ್ನುವುದು ಸರ್ವೇ ಸಾಮಾನ್ಯವಾದ ಅಪವಾದ. ಇದು ಸತ್ಯವೂ ಹೌದು.

ಚೀನಾ ಹಾಗೂ ಬೋಟ್ಸ್‌ವಾನಾ ದೇಶಗಳು ವಿಶ್ವಬ್ಯಾಂಕ್ ಐಎಂಎಫ್ ಗಳ ಸಾಲದ ಹಂಗಿಲ್ಲದೆಯೂ ಅಭಿವೃದ್ಧಿಯನ್ನು ಸಾಧಿಸಬಹುದು ಎಂದು ಸಾಧಿಸಿ ತೋರಿಸಿವೆ ಮಾತ್ರವಲ್ಲ ವಾಷಿಂಗ್ಟನ್ ಸರ್ವ ಸಮ್ಮತಿ ಎನ್ನುವ ಬಂಡವಾಳಶಾಹಿ ದೇಶಗಳ ಕಪಟ ನಾಟಕವನ್ನು ಬಯಲು ಮಾಡಿವೆ.

ವಿಶ್ವಬ್ಯಾಂಕ್ ನಿಯಂತ್ರಣ ಯಾರದು?

ದಿನ ನಿತ್ಯದ ಕಾರ್ಯನಿರ್ವಹಣೆಯನ್ನು ಬ್ಯಾಂಕಿನ ಅಧ್ಯಕ್ಷ ನಡೆಸುತ್ತಾನೆ. ಆದರೆ ಬ್ಯಾಂಕಿನ 185 ಸದಸ್ಯ ರಾಷ್ಟ್ರಗಳ ಪರವಾದ ಜವಾಬ್ದಾರಿಯನ್ನು ಬ್ಯಾಂಕಿನ 24 ಕಾರ್ಯಕಾರಿ ನಿರ್ದೇಶಕರ ಮಂಡಳಿ ಹೊರುತ್ತದೆ. ಸದಸ್ಯ ರಾಷ್ಟ್ರಗಳಿಂದ ಬ್ಯಾಂಕಿನ ಖಜಾನೆಗೆ ಸಂದಾಯವಾಗುವ ನಿಧಿಯ ಪ್ರಮಾಣದ ಮೇಲೆ ಮತಗಳು ನಿರ್ಧಾರವಾಗುತ್ತವೆ. ನವೆಂಬರ್ 2006 ರವರೆಗೆ ಒಟ್ಟು ಮತಗಳಲ್ಲಿ ಅಮೇರಿಕಾ ಶೇ.16.4, ಜಪಾನ್ ಶೇ.7.9, ಜರ್ಮನಿ ಶೇ.4.5 ಬ್ರಿಟನ್ ಹಾಗೂ ಫ್ರಾನ್ಸ್ ತಲಾ ಶೇ.4.3 ಪಾಲನ್ನು ಹೊಂದಿವೆ. ಪ್ರಮುಖ ತೀರ್ಮಾನಗಳಿಗೆ ಶೇ. 85 ಮತ ಪಡೆಯುವುದು ಕಡ್ಡಾಯ. ಹೀಗಾಗಿ ಅಮೇರಿಕಾ ಕೇವಲ ಶೇ.16.4 ಮತಗಳನ್ನು ಹೊಂದಿದ್ದರೂ ನಿರ್ದೇಶಕರ ಮಂಡಳಿಯ ತೀರ್ಮಾನಗಳನ್ನು ನಿಷೇಧಿಸುವ ಅಧಿಕಾರವನ್ನು ಇಟ್ಟುಕೊಂಡಿದೆ.


ವಿಶ್ವಬ್ಯಾಂಕಿನ ಅಧ್ಯಕ್ಷ ಅಮೇರಿಕದವನೇ ಏಕೆ?

ಈ ಸಂಪ್ರದಾಯ ಬ್ಯಾಂಕಿನ ಸ್ಥಾಪನೆಯ ದಿನದಿಂದಲೂ ಇದೆ. ಈವರೆಗಿನ ಹತ್ತು ಜನ ಅಧ್ಯಕ್ಷರೂ ಅಮೇರಿಕದಿಂದಲೇ ಆಯ್ಕೆಯಾದವರು. ಏಕೆಂದರೆ ಅಮೇರಿಕ ಬ್ಯಾಂಕಿನ ದೊಡ್ಡ ಪಾಲುದಾರ. ಇದಕ್ಕೆ ಪ್ರತಿಯಾಗಿ ಐಎಂಎಫ್‌ನ ಆಡಳಿತ ನಿರ್ದೇಶಕ ಯುರೋಪಿನವನೇ ಆಗಿರುತ್ತಾನೆ. ಇದು ಜಗತ್ತಿನ ಬಂಡವಾಳಶಾಹಿ ದೇಶಗಳ ಮಧ್ಯೆ ಜರುಗುವ ಆಂತರಿಕ ಒಪ್ಪಂದದ ಫಲಶ್ರುತಿ. ಅಧ್ಯಕ್ಷ, ಆಡಳಿತ ನಿರ್ದೇಶಕರ ಆಯ್ಕೆಯ ಪ್ರಕ್ರಿಯೆ ಮುಕ್ತವಾಗಿ, ಪಾರದರ್ಶಕವಾಗಿ ಇರಬೇಕೆಂಬ ಕೂಗಿವೆ. ಈಗಾಗುತ್ತಿರುವುದು ಬಲಾಢ್ಯ ದೇಶಗಳ ಒಳಕೋಣೆಯ ಒಪ್ಪಂದ. ನೇರವಾಗಿ ಹೇಳುವುದಾದರೆ 'ಡೀಲು ಕುದುರಿಸುವುದು'

ಆರ್ಥಿಕತೆ ಮುರಿದಿಕ್ಕುವ ಬಂಡವಾಳ ತಂತ್ರ

ಷೇರು ಪೇಟೆಯಲ್ಲಿ ಬಂಡವಾಳ ವಾಪಸ್ ಪಡೆಯುವ ಮೂಲಕ ಯಾವುದೇ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ತಲ್ಲಣ ಮೂಡಿಸುವುದು ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಚಿಟಿಕೆ ಹೊಡೆದಷ್ಟು ಸಣ್ಣ ಕೆಲಸ. ಇಂತಹ ಕೆಲಸವನ್ನು ವಿದೇಶಿ ಸಾಂಸ್ಥಿಕ ಹೂಡಿಕೆದಾರರು ವ್ಯವಸ್ಥಿತವಾಗಿ ಮಾಡುತ್ತಾರೆ. 1997-98ರಲ್ಲಿ ಇಂಡೋನೇಷ್ಯ, ದಕ್ಷಿಣ ಕೊರಿಯಾ, ಥಾಯ್ಲೆಂಡ್ ಮತ್ತು ಫಿಲಿಪ್ಪೀನ್‌ನಲ್ಲಿ ನಡೆದದ್ದೂ ಅದೇ. ಈಗಲೂ ಇಂತಹ ಘಟನೆ ಮರುಕಳಿಸುವ ಸಾಧ್ಯತೆ ಇದೆ ಎಂದು ವಿಶ್ವಸಂಸ್ಥೆ ಎಚ್ಚರಿಕೆ ನೀಡಿದೆ. ಕಳೆದ ಆರ್ಥಿಕ ವರ್ಷದಲ್ಲಿ ಅಲ್ಲಿನ ಕರೆನ್ಸಿ ಮೌಲ್ಯ ಅಮೆರಿಕನ್ ಡಾಲರ್‌ಗೆ ಹೋಲಿಸಿದರೆ ಭಾರಿ ಏರಿಕೆ ದಾಖಲಿಸಿತ್ತು. ಇದು ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸುವ ತಂತ್ರ ಇರಬಹುದು ಎಂಬ ಗುಮಾನಿ ಇದೆ. ಈ ಕುರಿತಂತೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಬಂಡವಾಳ ತಂತ್ರಗಳ ಬಗ್ಗೆ ಗಮನ ಇಟ್ಟಿರುವುದಾಗಿ ಅದು ಹೇಳಿದೆ.

‘ಆವರಣ’ ಯುದ್ಧ ಕಾಲದ ಚರಿತ್ರೆಯಲ್ಲ - ವರ್ತಮಾನದಲ್ಲಿ ದ್ವೇಷ ಹುಟ್ಟಿಸುವಂತಹದ್ದು



‘ಆವರಣ’ದ ಕುರಿತ ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ. ಯು.ಆರ್.ಅನಂತಮೂರ್ತಿ ಯವರ ಮಾತುಗಳನ್ನು ತಿರುಚಿ ವಿವಾದಗೊಳಿಸಿ ಗದ್ದಲವೆಬ್ಬಿಸಲಾಗಿದೆ. ಈ ಹಿನ್ನೆಲೆಯಲ್ಲಿ ಒಂದು ಸಂದರ್ಶನ.

ಸಂದರ್ಶಕರು : ಎಸ್.ವೈ.ಗುರುಶಾಂತ್, ಆರ್.ರಾಮಕೃಷ್ಣ



ಜನಶಕ್ತಿ: *‘ಆವರಣ’ ಕಾದಂಬರಿಯ ಕುರಿತು, ಭೈರಪ್ಪನವರ ಬಗೆಗೆ ತಾವು ಆಡಿರುವ ಮಾತುಗಳ ಬಗೆಗೆ ಬಾರಿ ವಾದ ವಿವಾದಗಳೆದ್ದಿವೆ. ಯಾಕೆ ಇದು. ನಡೆದದ್ದು ಏನು?*

ಯು.ಆರ್. : ಆವರಣದ ವಿಷಯವಾಗಿ ತುಂಬಾ ಚರ್ಚೆ, ವಿವಾದ ನಡೆದಿದೆ. ನಿಜವಾಗಿ ನನಗೆ ಆವತ್ತು ಹೋಗಿ ಸಮಾರಂಭದಲ್ಲಿ ಮಾತನಾಡುವುದು ಇಷ್ಟವೇ ಇರಲಿಲ್ಲ. ಏಕೆಂದರೆ ಅವರಿಗೆ (ಸಂಘಪರಿವಾರ) ನಿಜವಾಗಿಯೂ ಬೇಕಾಗಿರೋದೇನೆಂದರೆ ಈ ಬಗೆಗೆ ವಿವಾದಗಳಾಗಬೇಕು, ಮುಸ್ಲಿಂ ಯುವಕರು ಸಿಟ್ಟಿಗೇಳಬೇಕು, ಆಂದೋಲನ ಶುರು ಮಾಡಬೇಕು. ಹಿಂದೂ ಮುಸ್ಲಿಂ ಗಲಭೆಗಳಾಗಬೇಕು. ಕೊಲೆ ಆಗಬೇಕು. ಇದರಿಂದ ರಾಜಕಾರಣ ಮಾಡಿ ಅಧಿಕಾರಕ್ಕೆ ಬರಬೇಕು.

ಈ ರೀತಿಯ ರಾಜಕೀಯ ಜರ್ಮನಿಯಲ್ಲಿ ನಡೆದಿದೆ. ಫ್ಯಾಸಿಸಂ ಬೆಳೆದಂತೆ ಇದು ಆಗುತ್ತೆ. ಜರ್ಮನಿಯಲ್ಲಿ ಫ್ಯಾಸಿಸಂ ವಿರುದ್ಧ ನಿಜವಾಗಿಯೂ ಹೋರಾಟ ಮಾಡಿದ್ದು ಕಮ್ಯೂನಿಸ್ಟರು. ಆ ಕಾಲಕ್ಕೆ ಫ್ಯಾಸಿಸಂನ ಅಪಾಯಗಳನ್ನು ಅರ್ಥ ಮಾಡಿಕೊಂಡು ಅದನ್ನು ಎದುರಿಸೋದಕ್ಕೆ ಬಹಳ ಜನ ಮುಂದಾಗಲಿಲ್ಲ.

ಕೆಲವರು ಕನ್ಸರ್‌ವೇಟಿವ್ ಯಥಾಸ್ಥಿತಿವಾದಿಗಳು ಇರ್ತಾರೆ. ವಸ್ತುಸ್ಥಿತಿಯಲ್ಲಿ ಹೆಚ್ಚು ಬದಲಾವಣೆಗಳು ಆಗಬಾರದು ಎನ್ನುವವರು. ಡಿ.ವಿ.ಜಿ, ರಾಜಗೋಪಾಲಾಚಾರಿ ಈ ಥರದವರು. ಈ ರೀತಿ ಇರೋದ್ರಿಂದ ಅಂಥಾ ಅಪಾಯವಾಗಲಿಕ್ಕಿಲ್ಲ. ಆದರೆ ಹಿಂದೂ ಮುಸ್ಲಿಂರ ನಡುವೆ ದ್ವೇಷ ಕೆರಳಿಸುವ ರಾಜಕೀಯ ಅಪಾಯಕಾರಿ. ಆವರಣ ಕಾದಂಬರಿಯನ್ನು ಅದಕ್ಕಾಗೆ ಬರೆದದ್ದು, ಕೊನೆಯಲ್ಲಿ ಬ್ಯಾನ್ ಆಗುವ ಸೂಚನೆಗಳೂ ಇವೆ. ಕೆಲವರು ಹೇಳುತ್ತಾರೆ. ಇದರಲ್ಲಿ ಬಿಜೆಪಿಯ ಒಳ ರಾಜಕೀಯವೂ ಇದೆ ಅಂತ. ಯಡಿಯೂರಪ್ಪ ಮುಖ್ಯಮಂತ್ರಿ ಆಗಬಾರದೆನ್ನುವ ಅವರ ವಿರೋಧಿಗಳ ತಂತ್ರವೂ ಇದೆಯಂತೆ.

ಸೋವಿಯತ್ ಯೂನಿಯನ್ ಕುಸಿದ ಮೇಲೆ ಅಮೇರಿಕಾದ ಅಧಿಪತ್ಯಕ್ಕೆ ಒಂದು ದೊಡ್ಡ ಪ್ರತಿರೋಧವೇ ಇಲ್ಲದಂತಾಗಿದೆ. ಪರಿಣಾಮ ಅಮೇರಿಕಾದ ವಿರುದ್ಧ ಇಸ್ಲಾಂ ಮೂಲಭೂತವಾದಿ ಶಕ್ತಿಗಳು ಪ್ರತಿಕ್ರಿಯಿಸುತ್ತಿವೆ. ಹೀಗಾಗಿ ಕೆಲವರಿಗೆ ಇದೇ ದಾರಿ ಅನ್ನೋ ರೀತಿಯ ಭಾವನೆ ಬೆಳಿತಾ ಇದೆ. ಭಾರತದಲ್ಲೂ ಹಾಗೇ ಆಗುತ್ತಿದೆ.

ನನಗೆ ತುಂಬಾ ದುಃಖವಾಗಿರುವುದು ಭೈರಪ್ಪನವರ ಬಗ್ಗೆ ಅಲ್ಲ. ಅವರೊಂದಿಗೆ ಮಾತನಾಡಬಹುದು, ಆರ್.ಎಸ್.ಎಸ್‌ನವರು ಅಡ್ಡ ಬರದಿದ್ದರೆ! ಕನ್ನಡದ ಎರಡು ಪತ್ರಿಕೆಗಳು ನನ್ನ ಮಾತುಗಳನ್ನು ತಿರುಚಿ ಬರೆದವು.

ಒಂದು ಆರೆಸ್ಸೆಸ್‌ನಲ್ಲಿವವರು ನಡೆಸುವ ಪತ್ರಿಕೆ. ಇನ್ನೊಂದು ಹಿರಿಯ ಕಾಂಗ್ರೆಸ್ ಮುಖಂಡರು ನಡೆಸೋ ಪತ್ರಿಕೆ. ನಾನು ಹೇಳಿದ್ದನ್ನು ತಿರುಚಿ ತುಂಬಾ ತಪ್ಪು ತಪ್ಪಾಗಿ ವರದಿ ಮಾಡಿವೆ. ವಿಜಯ ಕರ್ನಾಟಕಕ್ಕೆ ನನ್ನ ಭಾಷಣದ ಪೂರ್ತಿ ವಿವರಗಳನ್ನೆಲ್ಲಾ ಪತ್ರ ಬರೆದು ಕಳಿಸಿದೆ. ಅದನ್ನೂ ಕೂಡ ಪ್ರಕಟಿಸಲಿಲ್ಲ. ಈ ರೀತಿ ತಿರುಚಿ ವರದಿ ಮಾಡುವುದು ಗೊಬೆಲ್ಸ್ ತಂತ್ರ.

ಟೈಮ್ಸ್ ಆಫ್ ಇಂಡಿಯಾನವರು ಕನ್ನಡ ಅನುವಾದದ ಕನ್ನಡ ಟೈಮ್ಸ್ ಆಫ್ ಇಂಡಿಯಾ ತರುವಾಗ ನಾನೊಬ್ಬನೇ ಅದನ್ನು ವಿರೋಧಿಸಿದ್ದು. ಅನುವಾದ ಪತ್ರಿಕೋದ್ಯಮ ಅಲ್ಲ ನಮಗೆ ಬೇಕಾಗಿರೋದು. ಹಳ್ಳಿ ಹಳ್ಳಿಗಳಲ್ಲೂ ನಮ್ಮದೇ ಪತ್ರಕರ್ತರು ಬೆಳೆದು ಬರಬೇಕು.

ಜನಶಕ್ತಿ : ಅದೇ ತಾವು ಎಂಜಲು ಪತ್ರಿಕೋದ್ಯಮ ಅಂತ ತೀಕ್ಷ್ಣವಾಗಿಯೇ ಟೀಕೆ ಮಾಡಿದ್ದೀರಿ..........

ಯು.ಆರ್.: ವಿಜಯ ಮಲ್ಯರಂತಹ ಉದ್ಯಮಿಗಳು ರಾಜ್ಯ ಸಭೆಗೆ ಆಯ್ಕೆಯಾಗಿದ್ದು ನೋಡಿ. ಈ ವಿಷಯದಲ್ಲಿ ಹೆಗಡೆಯವರನ್ನು ಕೂಡ ನಾನು ಕ್ಷಮಿಸುವುದಿಲ್ಲ. ದೇವೇಗೌಡರು ಅದನ್ನೇ ಮಾಡಿದ್ದಾರೆ. ಈಗ ಬಿಜೆಪಿಯವರು ಮಾಡಿದ್ದಾರೆ. ಒಂದೊಮ್ಮೆ ಪ್ರಸಂಗದಲ್ಲಿ ಚರ್ಚೆಗಳು ನಡೆದು ಅಭಿಪ್ರಾಯಪಟ್ಟಿದ್ದನ್ನು ಬಿಜೆಪಿಯವರು ಕೇಳಿಸಿಕೊಂಡ್ರು. ಆದರೆ ರಾಮಜೋಯಿಸರಂತಹವರನ್ನು ಬಿಟ್ಟರು. ದೊಡ್ಡ ಉದ್ಯಮಿಯೊಬ್ಬರನ್ನು ಗೆಲ್ಲಿಸಿದರು.

ಜನಶಕ್ತಿ : ಭೈರಪ್ಪನವರು ತಾವು ಬರೆದಿರೋದೆಲ್ಲಾ ಸತ್ಯ ಸತ್ಯ ಅಂತ ಪದೇ ಪದೇ ಹೇಳ್ತಾ ಇದಾರಲ್ಲ.....

ಯು.ಆರ್.: ಸತ್ಯ ಎಂದರೇನು ಅಧಿಕಾರಲ್ಲಿರುವವರು ಒಳ್ಳೆಯದು, ಕೆಟ್ಟದ್ದೂ ಎರಡನ್ನು ಮಾಡಿರುತ್ತಾರೆ. ಬಿಳಿ ಜನಾಂಗದವರು ಅಮೇರಿಕಾಕ್ಕೆ ಹೋಗಿ ಅಲ್ಲಿನ ಮೂಲನಿವಾಸಿಗಳನ್ನು ನಾಶ ಮಾಡಿದರು. ಕ್ರಿಶ್ಚಿಯನ್ ಧರ್ಮವನ್ನು ಹೇರಿದರು. ಈಗ ಅದನ್ನು ಮಹಾನ್ ನಾಗರೀಕತೆ ಎನ್ನುತ್ತೇವೆ. ಈ ಶತಮಾನದ ದೊಡ್ಡ ದಾರ್ಶನಿಕ ಗಾಂಧಿ. ಆದರೆ ಗಾಂಧಿವಾದಿಗಳಿಗೆ ಈಗ ಹಲ್ಲಿಲ್ಲ.

ಆವರಣ ಅದು ಬರಿಯ ಯುದ್ಧ ಕಾಲದ ಚರಿತ್ರೆ ಅಲ್ಲ. ಈಗ ದ್ವೇಷವನ್ನು ಹುಟ್ಟಿಸುವುದಾಗಿದೆ. ಹಿಂದಿನ ಕಾಲವನ್ನು ಕುರಿತು ಅರಿವುಂಟುಮಾಡುವುದಲ್ಲ. ಹಿಂದಿನ ಕಾಲದ ಅಲ್ಪಸ್ವಲ್ಪ ಅರಿವನ್ನು ಬಳಸಿ, ಇಂದಿನ ಮುಸ್ಲೀಮರ



ಬಗೆಗೆ ದ್ವೇಷವನ್ನು ಬೆಳೆಸುವುದಾಗಿದೆ.

ಸಾಧಾರಣವಾಗಿ ಎಲ್ಲರಲ್ಲೂ ಮುಸ್ಲಿಂ ವಿರೋಧಿ ಮನಸ್ಸಿರುತ್ತೆ.

ಈಗ ಮುಸ್ಲೀಮರಿಗೆ ನಾಯಕತ್ವವೇ ಇಲ್ಲ. ನನಗೆ ಬಾಲ್ಯದ ಕಾಲದ್ದು ನೆನಪಾಗುತ್ತೆ. ಆಗ ಇಸ್ಲಾಂ ಅನ್ನೋ ಪದ ಬಳಕೆ ಮಾಡ್ತಾ ಇರಲಿಲ್ಲ. ತುರ್ಕರು, ಮೊಗಲರು, ಬ್ಯಾರಿಗಳು ಅಂತ ಕರೀತಿದ್ದರು. ದಕ್ಷಿಣ ಕನ್ನಡದಲ್ಲಿ ಬ್ಯಾರಿಗಳು ಬಂದ್ರು, ಸೇರ್ ಬಂದರು ಅಂತಿದ್ದರು. ಇವರೆಲ್ಲಾ ಬೇರೆ ಬೇರೆ ಸಾಂಸ್ಕೃತಿಕ ಘಟಕಗಳಾಗಿದ್ದರು. ಈಗ ಇವರನ್ನೆಲ್ಲಾ ಒಂದು ಮಾಡಿ ಇಸ್ಲಾಮೀಕರಣ ಮಾಡಿದ್ದಾರೆ. ಆದರೆ ಇವರಲ್ಲಿ ಬಡತನ ಇದೆ. ಕಷ್ಟ ಇದೆ.

ಜನಶಕ್ತಿ : ಕೋಮುವಾದವು ಸಾಹಿತ್ಯಿಕ ಕ್ಷೇತ್ರದಲ್ಲಿ ಉಂಟು ಮಾಡುತ್ತಿರೋ ಅಪಾಯದ ಬಗೆಗೆ ಹೇಳಿ......

ಯು.ಆರ್. : ಕೋಮುವಾದ, ಅದು ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಂದಿರಲಿಲ್ಲ. ಸಾಮಾನ್ಯವಾಗಿ ಓದುಗರು ಕುವೆಂಪು, ಕಾರಂತ, ಬೇಂದ್ರೆ, ಹೀಗೆ ಬೇರೆ ಬೇರೆಯವರ ಪುಸ್ತಕಗಳನ್ನು ಓದುತ್ತಾರೆ. ನನ್ನನ್ನು ಓದುವ ಓದುಗರಿಗೆ ಭೈರಪ್ಪನವರ ಕೆಲವು ಕೃತಿಗಳು ಚೆನ್ನಾಗಿವೆ ಎನಿಸುತ್ತದೆ. ಆದರೆ ಭೈರಪ್ಪನವರನ್ನು ಓದುವ ಓದುಗರು ಬೇರೇನನ್ನೂ ಓದುವುದಿಲ್ಲ. ಇದೇ ಸಮಸ್ಯೆ.

ಕೋಮುವಾದ ಮೇಲ್ಜಾತಿಯವರಲ್ಲಿ ಮಧ್ಯಮ ವರ್ಗದವರಲ್ಲಿ ಇದೆ. ಕೆಳ ಜಾತಿಯವರನ್ನು ಕೆಲವರನ್ನು ದೊಣ್ಣೆ ಕೊಟ್ಟು ಇಟ್ಟುಕೊಂಡಿದ್ದಾರೆ ಹೊಡೆಸಲು. ಇವರು ಯಾವಾಗಲೂ ಅಯೋಧ್ಯೆ ಅಂತಲೇ ಅಂತ ಇದ್ರೆ ಜನ ಸುಸ್ತಾಗುತ್ತಾರೆ. ಯಾರ್ ಕೇಳ್ತಾರ್ರಿ....... ಜನ ತಮ್ಮ ಮನೆಯಲ್ಲಿ ರಾಮನ ಫೋಟೋ ಪೂಜಿಸುತ್ತಾರೆ. ತಮ್ಮ ಊರಿನ ದೇವಸ್ಥಾನ ಅವರಿಗೆ ಮುಖ್ಯವಾಗುತ್ತದೆ.

ಜನಶಕ್ತಿ : ಹಿಂದೆ ಸಮಾಜವಾದಿ ಚಳುವಳಿ ಬಲವಾಗಿದ್ದಂತಹ ಶಿವಮೊಗ್ಗದಲ್ಲಿ ಕೋಮುವಾದಿಗಳು ಬಲವಾಗಿ ಬೆಳೆದಿದ್ದಾರೆ. ಹೀಗಾದದ್ದು ಯಾಕೆ?

ಯು.ಆರ್ : ನಮ್ಮ ಸಮಾಜವಾದಿಗಳ ಸೋಲು, ಕಾಗೋಡು ತಿಮ್ಮಪ್ಪ ಅವರನ್ನು ನಾನು ಯಾವತ್ತೂ ಕ್ಷಮಿಸುವುದಿಲ್ಲ. ಬಂಗಾರಪ್ಪನವರಿಗೆ ಜನರ ಸ್ಪಂದನೆ ಇತ್ತು. ಕಳೆದುಕೊಂಡರು. ಸಿದ್ಧರಾಮಯ್ಯನವರು ಹಾಗೆ. ಸ್ವಜಾತಿ ಮೋಹ.... ಲೀಡರ್ ಆಗ್ತಾ ಇದ್ದ ಹಾಗೆ.......

ಗೋಪಾಲಗೌಡರು ಲೀಡರ್ ಆಗಿದ್ದಾಗ ಬಡ ಬ್ರಾಹ್ಮಣರಿಗೂ, ಈಡಿಗರಿಗೂ ಎಲ್ಲರಿಗೂ ಲೀಡರ್ ಆಗಿದ್ದರು. ವರ್ಗದ ದೃಷ್ಟಿ ಇತ್ತು. ಲೋಹಿಯಾ ಕೂಡ ತಪ್ಪು ಮಾಡಿದರು. ತಪ್ಪು ಏನ್ ಮಾಡಿದ್ರು ಅಂದ್ರೆ ನಾನ್ ಕಾಂಗ್ರೆಸಿಸಂ (ಕಾಂಗ್ರೆಸ್ ವಿರೋಧಿ) ಅಂತ ಎಲ್ಲರನ್ನು ಸೇರಿಸ್ಕೊಂಡ್ರು. ಜೆಪಿ ಯವರೂ ಅದನ್ನೇ ಮಾಡಿದರು.

ಜನಶಕ್ತಿ: all in opposition ಅಂತ ಬಿಜೆಪಿಯವರನ್ನು ಇತ್ತೀಚೆಗೆ ಕೂಡ ಸೇರಿಸಿಕೊಂಡರಲ್ಲ

ಯು.ಆರ್ : ಸಮಾಜವಾದಿಗಳು, ಕಮ್ಯೂನಿಸ್ಟ್ ನಾಯಕರು ಬಹುತೇಕ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿದ್ದು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರು. ಕಾಂಗ್ರೆಸ್‌ನಲ್ಲಿ ಇಲ್ಲದೆ, ಯಾವ ಹೋರಾಟದಲ್ಲೂ ಭಾಗವಹಿಸದೆ ಇದ್ದವರು ಎಂದರೆ ಆರೆಸ್ಸೆಸ್‌ನವರು.

ಜನಶಕ್ತಿ : ಕೋಮುವಾದವನ್ನು ಎದುರಿಸುವುದು ಹೇಗೆ? ಈ ಬಗ್ಗೆ ನಿಮ್ಮ ಸಲಹೆ, ಅಭಿಪ್ರಾಯವೇನು?

ಯು.ಆರ್. : ಇದನ್ನು ಎದುರಿಸುವಂತಹ ಯುವಪಡೆಯನ್ನು ಕಟ್ಟಬೇಕು. ಡಿವೈಎಫ್ಐ ಮುಂತಾದ ಸಂಘಟನೆಗಳನ್ನು ಪ್ರಬಲವಾಗಿ ಬೆಳೆಸಬೇಕು. ಸ್ಟಡಿ ಕ್ಲಾಸ್‌ಗಳು ಸಾಕಷ್ಟು ಆಗಬೇಕು. ಅನಲಟಿಕಲ್ ಪವರ್ (ವಿಮರ್ಶಾ ಶಕ್ತಿ) ಬೆಳೆಸಬೇಕು. ಸಿದ್ಧಾಂತ ಕಮ್ಯೂನಿಸ್ಟರ ಶಕ್ತಿ. ಅದಕ್ಕೆ ತುಂಬಾ ಗಮನ ಕೊಡಬೇಕು.

ಮಾತು ಮುಂದುವರಿಯುತ್ತಿತ್ತು. ಅಷ್ಟರಲ್ಲಿ ಫೋನ್ ರಿಂಗುಣಿಸಿತು. ಅದನ್ನೆತ್ತಿಕೊಂಡು ಇವತ್ತಿಗೆ ಸಾಕು, ಮುಂದೆ ಮತ್ತೆ ನೋಡೋಣ ಎಂದು ನಗುತ್ತಾ ಬೀಳ್ಕೊಟ್ಟರು ಯು.ಆರ್.

○

ಅಮೆರಿಕದ ಹಗಲಿಗೆ ಭಾರತದ ರಾತ್ರಿಗಳು ವಸಾಹತು

ನಾನು ಮಾತನಾಡುತ್ತಿರುವುದರಿಂದ ಸಿಟ್ಟು ಬರುತ್ತಿರುವುದು ಕೇವಲ, ಆರೆಸ್ಸೆಸ್ ಬಿಜೆಪಿಯವರಿಗೆ ಮಾತ್ರ ಅಲ್ಲ. ಕಿರಣ ಮಜುಂದಾರ್‌ಗೆ ಕೂಡ ಸಿಟ್ಟು ಬಂದಿದೆ.

‘ಯಾರ್ರಿ ಈ ಅನಂತಮೂರ್ತಿ’ ಅಂತ ಅವರು ಅವರು ಕೇಳಿದ್ದಾರಂತೆ. ನಾರಾಯಣ ಮೂರ್ತಿ. ಕಿರಣ ಮಜುಂದಾರ್ ಅವರು ಬಂಡವಾಳ ಹೂಡಿರಬಹುದು, ಒಂದಷ್ಟು ಜನಕ್ಕೆ ಉದ್ಯೋಗ ಕೊಟ್ಟಿರಬಹುದು. ಅದನ್ನು ಇಲ್ಲ ಅನ್ನೋಕಾಗಲ್ಲ. ಆದರೆ ಇದನ್ನೇ ಮಹಾ ಅಭಿವೃದ್ಧಿ ಅನ್ನೋದನ್ನ ಒಪ್ಪೋಕಾಗಲ್ಲ. ಮತ್ತೆ ಇದರಿಂದಾನೇ ಆರ್ಥಿಕ ಅಭಿವೃದ್ಧಿ ಆಗ್ತಿರೋದು ಅನ್ನೋದನ್ನ ಒಪ್ಪೋಕಾಗೋಲ್ಲ. ಕಾರ್ಪೋರೇಟ್ ಕಂಪನಿಗಳ ವಿಚಾರದಲ್ಲಿ ನಾನು ಅನಕ್ಷರಸ್ತ. ಸಾಹಿತ್ಯ ಸಂಸ್ಕೃತಿ ವಿಚಾರಗಳಲ್ಲಿ ಅವರು ಅನಕ್ಷರಸ್ಥರು. ಹೀಗಾಗಿ ನನ್ನಂಥವರ ಬಗ್ಗೆ ಅವರಿಗೆ ಹೇಗೆ ಗೊತ್ತಿರುತ್ತೆ ಬಿಡಿ. ಇವರೆಲ್ಲಾ ಜಾರ್ಜ್ ಬುಶ್ ಕಂಪನಿಗೆ ಸೇರಿದವರು. ಅಮೇರಿಕಾದವರ ಹಗಲಿಗೆ ನಮ್ಮ ರಾತ್ರಿಯನ್ನು ಕಲೋನ್ಯೆಸ್(ವಸಾಹತು) ಮಾಡಿಬಿಟ್ಟಿದ್ದೇವೆ. ಕೈಗಾರಿಕಾ ಬೆಳವಣಿಗೆ ವಿಶೇಷ ಕೈಗಾರಿಕಾ ವಲಯಗಳು ರಿಯಲ್ ಎಸ್ಟೇಟ್ ದಂಧೆಗೆ ತಿರುಗಿಬಿಟ್ಟಿದ್ದಾವೆ. ಕೃಷಿ ನಮ್ಮ ಪ್ರಮುಖವಾದ ವಲಯ. ನಿಜವಾಗಿಯೂ ನಮ್ಮಲ್ಲಿ ಆಗ್ರೋ ಬೆಸ್ಟ್ ಇಂಡಸ್ಟ್ರೀ (ಕೃಷಿ ಆಧಾರಿತ ಕೈಗಾರಿಕೆಗಳು) ಬೆಳೆಯಬೇಕಿದೆ. ಭೂಗಳ್ಳರು ಎಂದರೆ ಯಾರು? ಐ.ಟಿ.ಯವರು ಬಿ.ಟಿ.ಯವರು ಬೇಕಿದ್ದಕ್ಕಿಂತ ಹೆಚ್ಚು ಭೂಮೀ ಪಡೆದುಕೊಳ್ಳುತ್ತಿದ್ದಾರೆ. ರವಿಶಂಕರ್ ಅವರು ಅವರದ್ದೇ ಸಾಮ್ರಾಜ್ಯ ಕಟ್ಟಿಕೊಂಡು ಕೃಷಿ ಭೂಮಿಯಲ್ಲೂ ಕಬಳಿಸ್ತಿದ್ದಾರೆ.

JANASHAKTHI KANNADA VARA PATRIKE JUNE 17, 2007 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09

'ಹುಡುಗಾಟ' ಸುಮ್ನೆ ಎಳೆದಾಟ



'ಮುಂಗಾರು ಮಳೆ'ಯ ಭಾರಿ ಯಶಸ್ಸಿನ ನಂತರ ಗಣೇಶ್‌ರವರ 'ಹುಡುಗಾಟ' ಬಹಳ ನಿರೀಕ್ಷೆಗಳೊಂದಿಗೆ ಬಿಡುಗಡೆಯಾಗಿದೆ. ಗಣೇಶ್‌ಗೆ 'ಹುಚ್ಚು' ಅಭಿಮಾನಿಗಳೂ ಹುಟ್ಟಿಕೊಂಡಿದ್ದಾರೆ. ಚಿತ್ರ ಉತ್ತಮ ಆರಂಭವನ್ನೇ ಪಡೆದುಕೊಂಡಿದೆ. ಪ್ರದರ್ಶನ ವೇಳೆ ವ್ಯತ್ಯಯ ಉಂಟಾಗಿದ್ದಕ್ಕೆ ಅಪರ್ಣ ಚಿತ್ರಮಂದಿರದ ಗಾಜುಗಳೂ ಪುಡಿಪುಡಿಯಾಗಿವೆ. ಹಿಂದೆಲ್ಲಾ ರಾಜ್-ವಿಷ್ಣು ಚಿತ್ರಗಳನ್ನು ನೋಡಲು ಇದ್ದಂತಹ ಕ್ರೇಜ್ ಗಣೇಶ್ ಚಿತ್ರಕ್ಕೂ ಕಂಡುಬರುತ್ತಿದೆ.

ಗಣೇಶ್‌ರವರೂ ನಿರಾಸೆ ಮಾಡುವುದಿಲ್ಲ, ಅವರ ಲವಲವಿಕೆಯೇ ಚಿತ್ರದ ಜೀವಾಳ. ನಾಯಕಿ ರೇಖಾ ಕೂಡಾ ಚೆನ್ನಾಗಿ 'ಸಾಥ್' ನೀಡಿದ್ದಾರೆ. ಸಮಸ್ಯೆ ಇರುವುದು ಚಿತ್ರದ ಕಥೆಯಲ್ಲಿಯೇ. ಅರ್ಧ ಗಂಟೆಯಲ್ಲಿ ಹೇಳಿ ಮುಗಿಸಿಬಿಡಬಹುದಾದ ಕಥೆಯನ್ನು ನಿರ್ದೇಶಕ ಸಂಜಯ್‌ರವರು ಎರಡೂವರೆ ತಾಸು ಜಗ್ಗಿದ್ದಾರೆ.

ಪತ್ರಿಕೆಯೊಂದರ ವರದಿಗಾರನಾದ ಬಾಲು ಮಹೇಂದ್ರ(ಗಣೇಶ್) ಸರಿಯಾಗಿ ಸುದ್ದಿ ಕೊಡದೆ ಸಂಪಾದಕರಿಂದ ಛೀಮಾರಿಗೊಳಗಾಗಿ, ಕ್ರೀಡಾ ವರದಿ ಮಾಡಲು ಕನ್ಯಾಕುಮಾರಿಗೆ ಅಟ್ಟಲ್ಪಟ್ಟಿರುತ್ತಾನೆ. ಬಸ್‌ನಲ್ಲಿ ಪ್ರಿಯಾ (ರೇಖಾ) ಪರಿಚಯವಾಗುತ್ತಾಳೆ. ಆಕೆ ಶ್ರೀಮಂತ ಉದ್ಯಮಿ ಅನಂತರಾವ್(ಅವಿನಾಶ್) ಮಗಳು. ತಾನು ಪ್ರೀತಿಸಿದ ಹುಡುಗ ಯೋಗ್ಯನಲ್ಲವೆಂದು, ಆತನನ್ನು ಮದುವೆಯಾಗಲು ತಂದೆ ಒಪ್ಪದ್ದರಿಂದ ಮನೆ ಬಿಟ್ಟು, ಪ್ರಿಯಕರನನ್ನು ಸೇರಲು ಅವಳೂ ಕನ್ಯಾಕುಮಾರಿಗೆ ಹೊರಟಿರುತ್ತಾಳೆ. ಈಕೆಯ ವಿಚಾರ ಪತ್ರಿಕೆಗೆ ಸುದ್ದಿಯಾಗಬಹುದೆಂದು ಗಣೇಶ್ ಆಕೆಯ ಹಿಂದೆ ಬೀಳುತ್ತಾನೆ. ಆಕೆಯ ತಂದೆಯ ಕಡೆಯವರು ಅವಳನ್ನು ಹುಡುಕುತ್ತಿರುವುದನ್ನು ಮನಗಂಡು ಬಸ್ಸಿನಿಂದಿಳಿದು ಬೇರೆ ದಾರಿಯಲ್ಲಿ ಆಕೆಯನ್ನು ಕನ್ಯಾಕುಮಾರಿಗೆ ಕರೆದೊಯ್ಯುತ್ತಾನೆ.

ಚಿತ್ರದ ಮುಕ್ಕಾಲು ಭಾಗ ಇದಿಷ್ಟೇ ಕಥೆ - ಅವರ ದೀರ್ಘ ಪಯಣ. ಇದರ ಮಧ್ಯದಲ್ಲಿ ಒಂದಿಷ್ಟು ಹಾಸ್ಯ-ಹಾಡು. ಇವು ಚಿತ್ರಕಥೆಗೆ ಪೂರಕವಾಗದೆ ಬೋರು ಹೊಡೆಸುತ್ತವೆ. ಈ ಕಥೆಗೆ ಮಾಧುರ್ಯಪೂರ್ಣವಾಗಿರಬೇಕಾಗಿದ್ದ ಸಂಗೀತ ಅಬ್ಬರದಿಂದ ಕೂಡಿ ಚಿತ್ರಕ್ಕೆ ಧಕ್ಕೆ ನೀಡಿದೆ. ಕೋಮಲ್ ಅವರ ಹಾಸ್ಯ ಪಥ್ಯವಾಗುವುದಿಲ್ಲ - ನಾಯಕಿಯನ್ನು ಹುಡುಕುವ ಆಕೆಯ ಭಂಟರದೂ ಕಿರಿಕಿರಿ. ಇದ್ದುದರಲ್ಲಿ 'ಗೋಲಿ' ಆಡುವ ಹಾಸ್ಯಖಳನಟನಾಗಿ ಶೋಭರಾಜ್ ಗಮನ ಸೆಳೆಯುತ್ತಾರೆ.

ಅಂತಿಮವಾಗಿ ನಾಯಕನ ಸ್ನೇಹಕ್ಕೆ ಮರುಳಾಗಿ ನಾಯಕಿ ಆತನನ್ನೇ ಇಷ್ಟಪಡುತ್ತಾಳೆ. ಆತನೂ ಆಕೆಯನ್ನು ಇಷ್ಟಪಟ್ಟರೂ ಗೊಂದಲದಲ್ಲಿರುತ್ತಾನೆ. ಕೊನೆಗೆ ಎಲ್ಲಾ ಗೊಂದಲಗಳು ಪರಿಹಾರವಾಗಿ ಇಬ್ಬರೂ ಒಂದಾಗುತ್ತಾರೆ. ಹೇಗೆ ಎಂಬುದೇ ಚಿತ್ರದ ಒಟ್ಟು ಜೀವಾಳ. ಕೊನೆಯ ಅರ್ಧ ತಾಸು ಚಿತ್ರ ಆಸಕ್ತಿ ಮೂಡಿಸಿದರೂ ಮೊದಲರ್ಧದ ನಿರೂಪಣೆ ಪೇಲವವಾಗಿದೆ - ನಿರ್ದೇಶಕರು ಸ್ವಲ್ಪ ಜಾಣತನ ತೋರಿದ್ದರೆ ಉತ್ತಮ ಚಿತ್ರವಾಗುವ ಸಾಧ್ಯತೆಯಿತ್ತು. ಮುಜುಗರವಾಗುವಂತಹ ದೃಶ್ಯಗಳಾಗಲೀ, ಸಂಭಾಷಣೆಗಳಾಗಲೀ ಇಲ್ಲದ ಅತ್ಯುತ್ತಮ ಎಂದು ಹೇಳಲಾಗದ, ತೀರಾ ಕಳಪೆಯೂ ಎನ್ನಲಾಗದ ಸಾಮಾನ್ಯ ಚಿತ್ರ 'ಹುಡುಗಾಟ'.



ಪ್ರೊವೋಕ್ಡ್ ಕನ್ನಡಕ್ಕೆ: ಡಬ್ಬಿಂಗ್ ವಿವಾದ



ಐಶ್ವರ್ಯ ರೈ ಅಭಿನಯದ ಕೌಟುಂಬಿಕ ಹಿಂಸೆ ಮತ್ತು ಅದರ ವಿರುದ್ಧ ಸಿಡಿದು ನಿಂತ ಮಹಿಳೆಯೋರ್ವಳ ಚಿತ್ರಣವಿರುವ ಪರಿಣಾಮಕಾರಿ ಚಿತ್ರ 'ಪ್ರವೋಕ್ಡ್'.

ಮಹಿಳಾ ಆಯೋಗದ ಅಧ್ಯಕ್ಷೆಯಾಗಿರುವ ಪ್ರಮಿಳಾ ನೇಸರ್ಗಿಯವರು ಈ ಚಿತ್ರದಿಂದ ಪ್ರಭಾವಿತರಾಗಿ ಈ ಚಿತ್ರವನ್ನು ಕನ್ನಡಕ್ಕೆ ಡಬ್ಬಿಂಗ್ ಮಾಡಿಸಲು ಹೊರಟಿದ್ದಾರೆ. ಕನ್ನಡದ ಜನತೆ ಈ ಚಿತ್ರನೋಡುವಂತಾಗ ಬೇಕೆಂಬ ಅವರ ಆಶಯ ಮೆಚ್ಚುವಂತದ್ದು. ಆದರೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಈ ಚಿತ್ರದ ಕನ್ನಡ ಡಬ್ಬಿಂಗ್‌ಗೆ ಅವಕಾಶ ನೀಡುವುದಿಲ್ಲವೆಂದು ಹೇಳಿದೆ.

ಬಹಳ ವರ್ಷಗಳ ಹಿಂದೆಯೇ ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳು ಡಬ್ಬಿಂಗ್ ಆಗಿ ಕನ್ನಡದಲ್ಲಿ ಬಿಡುಗಡೆಯಾಗಿ, ಕನ್ನಡ ಚಿತ್ರಗಳಿಗೆ ಭಾರಿ ಹೊಡೆತ ನೀಡುತ್ತಿದ್ದವು. ಎನ್.ಟಿ.ರಾಮರಾವ್ ಅವರ ಅಭಿನಯದ ಅನೇಕ ಪೌರಾಣಿಕ ಡಬ್ಬಿಂಗ್ ಚಿತ್ರಗಳು ಕರ್ನಾಟಕದಲ್ಲಿ ಭಾರಿ ಯಶಸ್ಸನ್ನು ಗಳಿಸಿದ್ದವು. ಕನ್ನಡ ಚಿತ್ರಗಳಿಗೆ ಮತ್ತು ಸ್ಥಳೀಯ ಕಾರ್ಮಿಕರಿಗೆ ಹೊಡೆತ ಬೀಳುವುದನ್ನು ತಪ್ಪಿಸಲು ಸರ್ಕಾರ 1960 ರಲ್ಲಿ ಡಬ್ಬಿಂಗ್ ಚಿತ್ರಗಳನ್ನು ನಿಷೇಧಿಸಿತು.

ಇದಾದ ನಂತರವೂ ರಾಜೇಂದ್ರ ಸಿಂಗ್ ಬಾಬು ರವರು ತೆಲುಗಿನಲ್ಲಿ ತೆಗೆದ 'ಭಾರತ್ 2000' ಎಂಬ ಚಿತ್ರವನ್ನು ಡಬ್ ಮಾಡಿ ಕನ್ನಡಲ್ಲಿ ಬಿಡುಗಡೆ ಮಾಡುವಾಗ ಮತ್ತು ವಿಜಯಶಾಂತಿ ಅಭಿನಯದ ಚಿತ್ರವೊಂದನ್ನು ಕನ್ನಡದಲ್ಲಿ ಬಿಡುಗಡೆ ಮಾಡುವಾಗ ಪ್ರತಿಭಟನೆ ವ್ಯಕ್ತವಾಗಿ, ಈ ಚಿತ್ರಗಳ ಪ್ರದರ್ಶನಗಳನ್ನು ತಡೆಹಿಡಿಯಲಾಗಿತ್ತು. ಕನ್ನಡ ಚಿತ್ರಗಳ ಏಳಿಗೆಗಾಗಿ ಇದು ಅವಶ್ಯವೂ ಸ್ವಾಗತಾರ್ಹವೂ ಆಗಿತ್ತು.

ನೇಸರ್ಗಿಯವರು ಈ ಚಿತ್ರವನ್ನು ಗ್ರಾಮೀಣ ಮಹಿಳೆಯರಿಗೆ ವಿಡಿಯೋ ಮುಖಾಂತರ ತೋರಿಸಲು ಉದ್ದೇಶಿಸಿದ್ದಾರೆ. ವಾಣಿಜ್ಯ ಉದ್ದೇಶಗಳನ್ನು ಹೊಂದಿಲ್ಲದ ಇಂತಹ ಉತ್ತಮ ಚಿತ್ರಗಳಿಗೂ ಕಡಿವಾಣ ಅಗತ್ಯವೇ?

ಚಾನಲ್ ರಾಜಕೀಯ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಕ್ಕೆ ಜವಾಬ್ದಾರಿಯುತ ಸ್ಥಾನವಿದೆ. ಸಂವಿಧಾನದ ನಾಲ್ಕನೇ ಅಂಗಸಂಸ್ಥೆ. ಇಂತಹ ಒಂದು ವ್ಯವಸ್ಥೆಯೊಳಗೆ ನುಗ್ಗಲು ರಾಜಕೀಯ ಪಕ್ಷಗಳು ತಯಾರಿ ನಡೆಸಿವೆ.

ಪತ್ರಿಕಾ ಸಮರ

ತಮಿಳುನಾಡಿನಲ್ಲಿ ಆಡಳಿತ ಪಕ್ಷ ಡಿಎಂಕೆಯಲ್ಲಿ ಅಲ್ಲೋಲ ಕಲ್ಲೋಲ ಎಬ್ಬಿಸಿದ್ದು 'ದಿನಕರನ್' ದಿನಪತ್ರಿಕೆ. ಕರುಣಾನಿಧಿ ಬಳಿಕ ಡಿಎಂಕೆಯ ನಾಯಕರಾರು ಎಂಬ ಪತ್ರಿಕೆಯ ಸಮೀಕ್ಷೆ ದಯಾನಿಧಿ ಮಾರನ್ ರಾಜೀನಾಮೆಯಿಂದ ಒಂದು ಹಂತಕ್ಕೆ ಮುಗಿಯಿತು. ಅಷ್ಟಕ್ಕೆ ತೃಪ್ತರಾಗದ ಕರುಣಾನಿಧಿ ಇದುವರೆಗೆ ಡಿಎಂಕೆ ಮುಖವಾಣಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸನ್ ಟಿವಿಗೆ ಪ್ರತಿಸ್ಪರ್ಧಿಯಾಗಿ ಹೊಸ ಚಾನಲ್ ಆರಂಭಿಸುವುದಾಗಿ ಘೋಷಿಸಿದರು. ಈ ಮಧ್ಯೆ ಇನ್ನೊಂದು ಬೆಳವಣಿಗೆಯಲ್ಲಿ ರಾಜ್ ಟಿವಿ ಮಾಲೀಕರು ಡಿಎಂಕೆ ಸೇರಿ ಪರಿಸ್ಥಿತಿಯ ಲಾಭ ಪಡೆದುಕೊಂಡರು. ಅಷ್ಟೇ ಅಲ್ಲ, ಆಗಸ್ಟ್‌ನಲ್ಲಿ ಕಲೈಂಗಾರ್ ಟಿವಿಯನ್ನು ಆರಂಭಿಸುವುದಾಗಿ ಪ್ರಕಟಿಸಿದರು.



ಚಾನೆಲ್ ಸಮರಕ್ಕೆ ಧುಮುಕಿದ ಕಾಂಗ್ರೆಸ್

ಈ ಚಾನೆಲ್ ಸಮರಕ್ಕೆ ಕಾಂಗ್ರೆಸ್ ಕೂಡ ಧುಮುಕಿದೆ. ತಾನೇನು ಕಡಿಮೆ ಇಲ್ಲ ಎಂಬಂತೆ ಪಕ್ಷದ ಪರ ಚಾನೆಲ್ ಆರಂಭಿಸುವುದಾಗಿ ಕಾಂಗ್ರೆಸ್ ಸಂಸದ ತಂಗಬಾಲು ಪ್ರಕಟಿಸಿದ್ದಾರೆ. ಇದರ ಜೊತೆಗೆ ಇನ್ನೊಂದು ಚಾನೆಲ್ ಆರಂಭಿಸುವುದಾಗಿ ಅವರು ಹೇಳಿದ್ದು, ಇದರಲ್ಲಿ ಪಕ್ಷದ ಪ್ರಚಲಿತ ವಿದ್ಯಮಾನಗಳು ಹೆಚ್ಚಾಗಿ ಪ್ರಸಾರವಾಗಲಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಪ್ರಧಾನಿ ಮನಮೋಹನ್ ಸಿಂಗ್ ಬಗ್ಗೆ ಪ್ರತಿದಿನ ವಿಶೇಷ ಸುದ್ದಿ ಪ್ರಕಟಿಸುವುದಾಗಿ ಅವರು ಪ್ರಕಟಿಸಿದ್ದಾರೆ.

ಚಾನೆಲ್ ಗುರುತು

ಬಹುಶಃ ಕಾಂಗ್ರೆಸ್ ಚಾನೆಲ್ ನ ಚಿಹ್ನೆ ಬಗ್ಗೆ ಜನರಲ್ಲಿ ಅಷ್ಟಾಗಿ ಕುತೂಹಲ ಉಳಿದಿಲ್ಲ. ಡಿಎಂಕೆ ನಿಷ್ಠ ಸನ್‌ಗೆ ಅದರ ಉದಯಿಸುವ ಸೂರ್ಯನೇ ಗುರುತಾಗಿದ್ದರೆ, ಜಯಲಲಿತಾ ಅವರ ಜಯಾ ಟಿವಿಗೆ ಎರಡು ಎಲೆ ಗುರುತು. ಇನ್ನು ಕಾಂಗ್ರೆಸ್ ಹಸ್ತದ ಗುರುತಿನಲ್ಲಿ ಚಾನೆಲ್ ಆರಂಭಿಸಿದರೆ ಅಚ್ಚರಿ ಇಲ್ಲ.

ಕೇರಳದಲ್ಲೂ

ಕಾಂಗ್ರೆಸ್ ಈ ವಿಚಾರದಲ್ಲಿ ಕೇರಳದಲ್ಲೂ ಹಿಂದೆ ಬಿದ್ದಿಲ್ಲ. ಆಗಸ್ಟ್ 17ರಂದು ಚಾನೆಲ್ ಆರಂಭಿಸುವುದಾಗಿ ಪಕ್ಷದ ನಾಯಕರು ಪ್ರಕಟಿಸಿದ್ದಾರೆ. ಜೈಹಿಂದ್ ಎಂಬ ಹೆಸರಿನ ಈ ಚಾನೆಲ್ ನ್ನು ಪಕ್ಷದ ನಾಯಕಿ ಸೋನಿಯಾ ಗಾಂಧಿ ಉದ್ಘಾಟಿಸಲಿದ್ದಾರೆ.

ಕನ್ನಡದಲ್ಲಿ...

ಕನ್ನಡದಲ್ಲಿ ಇಂತಹ ಒಂದು ಪ್ರಯತ್ನ ನಡೆದಿದೆ. ಮುಖ್ಯಮಂತ್ರಿ ಕುಮಾರಸ್ವಾಮಿ ಕನ್ನಡ ಚಾನೆಲ್ ಆರಂಭಿಸಲು ಮುಂದಾಗಿದ್ದಾರೆ. ಅವರ ಪತ್ನಿ ಅನಿತಾ ಕುಮಾರಸ್ವಾಮಿ ನೇತೃತ್ವದ ಕನ್ನಡ ಕಸ್ತೂರಿ ಚಾನೆಲ್ ಇನ್ನೇನು ಕೆಲ ತಿಂಗಳಲ್ಲಿ ಕನ್ನಡಿಗರಿಗೆ ಲಭ್ಯವಾಗಲಿದೆ.

ಈ ಮಧ್ಯೆ, ವಿಜಯ ಕರ್ನಾಟಕದ ಮೂಲಕ ಪತ್ರಿಕೋದ್ಯಮದಲ್ಲಿ ಅನಾರೋಗ್ಯಕರ ಸ್ಪರ್ಧೆಗೆ ಮುನ್ನುಡಿ ಬರೆದ ವಿಜಯ ಸಂಕೇಶ್ವರ ಕೂಡ ಚಾನೆಲ್ ಆರಂಭಿಸಲಿದ್ದಾರೆ ಎಂಬ ಊಹಾಪೋಹ ಇದೆ. ಈ ಹಿಂದೆ ಬಿಜೆಪಿಯ ಕರುಣಾಕರ ರೆಡ್ಡಿ ಇಂತಹ ಪ್ರಯತ್ನಕ್ಕೆ ಮುಂದಾಗಿ ಕೈ ಸುಟ್ಟುಕೊಂಡಿದ್ದನ್ನು ಸ್ಮರಿಸಬಹುದು.

ಒಟ್ಟಿನಲ್ಲಿ ಪಕ್ಷಗಳ ಈ ಚಾನೆಲ್ ಸಮರ ಇನ್ನು ಯಾವ ತಿರುವು ಪಡೆದುಕೊಳ್ಳುತ್ತದೋ ಗೊತ್ತಿಲ್ಲ. ಆದರೆ, ನಿಷ್ಪಕ್ಷಪಾತ, ನೇರ ಹಾಗೂ ಸಮಗ್ರ ಸುದ್ದಿ ಬಯಸುವ ಜನರು ಇಂತಹ ಚಾನೆಲ್ ಗಳಿಂದ ಭಾರೀ ನಿರಾಸೆ ಆಗುವುದಂತೂ ಖಚಿತ.

ಸಿಪ್ಪಿಸಿ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE 560027, Karnataka on behalf of (owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE 560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor S.Y.GURUSHANTH